ಶಾಸನ ಕಾರ್ಯಕಲಾಪಗಳು

೧೯೮೫ನೇ ಇಸವಿಯ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೮೫ನೇ ಇಸವಿಯ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇವೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, "೧೯೮೫ನೇ ಇಸವಿಯ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—(ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ೧೯೮೫ನೇ ಇಸವಿಯ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು.—೧೯೮೫-೮೬ನೇ ಸಾಲಿನ ಬೇಡಿಕೆ ಸಂಖ್ಯೆ. ೧೫, ೧೬, ೧೭, ೧೮ ೨೦, ೩೮, ೩೯. ೪೦, ೪೧, ಮತ್ತು ೪೨ಗಳ ಮೇಲಿನ ಚರ್ಚೆ ಈಗ ೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲೆ ಮೊದಲು ಮಾನ್ಯ ಬಸವಲಿಂಗಪ್ಪನವರು ಮಾತನಾಡಬಹುದು ಅನಂತರ ಇವೊತ್ತು ಮೂರು ಗಂಟೆಗೆ ನಾವು ಈ ಚರ್ಚೆಯನ್ನು ಮುಗಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ನಾನು ಮೊದಲು ಮಾತನಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಬಹುದು.

†ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಸಚಿವಸಂಪುಟ ವ್ಯವಹಾರಗಳ ಬಗ್ಗೆ, ಸಿಬ್ಬಂದಿ ಸುಧಾರಣೆ ಇಲಾಖೆ ಬಗ್ಗೆ, ಈ ಬೇಡಿಕೆಗಳ ಬಗ್ಗೆ ಚರ್ಚಿಸುವಾಗ, ನೀತಿ ನಿರೂಪಣೆ ವಿಶ್ಲೇಷಣೆ ಮಾಡುವಾಗ ಒಂದು ವಿಚಾರವನ್ನು ಪ್ರಮುಖವಾಗಿ ತಿಳಿಸಬೇಕಾಗುತ್ತದೆ ನಿಜವಾಗಿಯೂ ಕೂಡ ಬಂಡವಾಳಶಾಹಿ, ಭೂಮಾಲೀಕರ ಆಸ್ತಿಪಾಸ್ತಿಗಳನ್ನು ಕಾಪಾಡುವ ವ್ಯವಸ್ಥೆ ಗಮನಿಸಬಹುದು. ಇಲ್ಲಿ ಮುಖ್ಯವಾಗಿ ಅಧಿಕಾರಿಶಾಹಿ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಾವು ಇಲ್ಲಿ ಜನತೆಯಿಂದ ಗೆದ್ದು ಬಂದಿರುವವರು ಎನ್ನುವುದನ್ನು ಮರೆಯಬಾರದು. ಜನತೆಯ ಪ್ರತಿನಿಧಿಗಳು ತಾವು ಎನ್ನುವುದನ್ನು ಮರೆಯಬಾರದು. ನಿಜವಾಗಿ ಹೇಳುವುದಾದರೆ, ಪತ್ರಿಕೆಯಲ್ಲಿ ಓದಿದ್ದೇನೆ. ಡಾಕ್ಟರ್ ಪುಷ್ಪಾವತಿ ಮತ್ತು ಶ್ರೀ ಜೀವಿಜಯ ಅವರು ಹೇಳಿದಂಥ ಮಾತುಗಳನ್ನು ಸಂಬಂಧಪಟ್ಟ ಕಾರ್ಯದರ್ಶಿಯವರು ಕೇಳಲಿಲ್ಲ ಎಂದು ಪತ್ರಿಕೆಯಲ್ಲಿ ಬಂತು. ಅದರ ಬಗ್ಗೆ ವಿವರಣೆ ಸಿಕ್ಕಲಿಲ್ಲ ಅದರ ಬಗ್ಗೆ ಏನು ಹೇಳಬೇಕು ಎಂದರೆ, ಯಾವ ಅಧಿಕಾರಿಯೇ ಆಗಿರಲಿ, ಐಎಎಸ್, ಅಧಿಕಾರಿಯಾಗಿರಲಿ, ಕೆಎಎಸ್ ಅಧಿಕಾರಿಯಾಗಲಿ, ಯಾವ ಅಧಿಕಾರಿಯೇ ಆಗಿರಲಿ, ಗೆದ್ದುಬಂದ ಮಂತ್ರಿಗಳ ಮಾತನ್ನು ಕೇಳುವುದು ಮುಖ್ಯ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಈ ಬಗ್ಗೆ ಇಂಥಾ ಒಂದು ಅಡ್ಡಿ ಅಡಚಣೆಗಳು ಯಾವಾಗಲೂ ಬರದಾತೆ ಮಾನ್ಯ ಮುಖ್ಯಮಂತ್ರಿಗಳು ಗಮನಿಸುವುದು ಬಹಳ ಮುಖ್ಯ. ಇಲ್ಲದೇ ಇದ್ದರೆ ಇದು ನಮ್ಮ ಒಂದು ರಾಜ್ಯಾಂಗಕ್ಕೆ ಕಳಂಕವಾಗುತ್ತದೆ ಎನ್ನುವ ಒಂದು ವಿಷಯ ಹೇಳುತ್ತೇನೆ. ಇನ್ನು ಸಚಿವ ಸಂಪುಟಗಳ ವ್ಯವಹಾರದ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಈಗ ಜನತಾ ಪ್ರಭುತ್ವ ಅಧಿಕಾರ ವಹಿಸಿಕೊಂಡಂಥ ಜನತಾ ಸರ್ಕಾರ ಗಾಂಧಿಯನ್ ಸೋಷಿಯಲಿಸಮ್ ಎಂದು ಹೇಳುವಾಗ ನಿಜವಾಗಿ ಇದು ಆಚರಣೆಯಲ್ಲಿದೆಯೇ, ಇಲ್ಲವೇ

ಯೋಚನೆ ಮಾಡಬೇಕಾಗುತ್ತದೆ. ಮೊದಲು ಯಾವ ತರಹ ದರ್ಬಾರ್ ನಡೆಸುತ್ತಿದರು, ಅದೇ ತರಹ ದರ್ಬಾರ್ ನಡೆಯಬಾರದು. ಮೊನ್ನೆ ವಾರದ ತರಂಗದಲ್ಲಿ ಒಂದು ವಿಚಾರವನ್ನು ನೋಡಿದೆ. ಅದರಲ್ಲಿ ಈ ರೀತಿ ಇದೆ. ಮಂತ್ರಿಗಳ ದಿನಭತ್ಯೆಯೂ...... ...ಪಂಚಾಯತ್ ನೌಕರರ ತಿಂಗಳ ಸಂಬಳವೂ ಎಂಬ ಶಿರೋನಾಮೆಯಲ್ಲಿ ಇದು ಬಂದಿದೆ. ೧೯೮೪ರ ಏಪ್ರಿಲ್‌ನಿಂದ ೧೯೮೫ರ ಮಾರ್ಚ್‌ವರೆಗೆ ನಮ್ಮ ಮಂತ್ರಿಗಳು ಪಡೆದ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆಯ ವಿವರ ಹೀಗಿದೆ.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ	ರೂ. ೫೪, ೪೦೮-೬೦
ಎಸ್.ಆರ್. ಬೊಮ್ಮಾಯಿ	ರೂ. ೬೭, ೮೧೫-೦೦
ಅಬ್ದುಲ್ ನಜೀರ್ ಸಾಬ್	ರೂ. ೮೩, ೩೩೫-೫೦
ವಿ.ಎಲ್. ಪಾಟೀಲ್	ರೂ. ೬೮, ೯೫೧-೩೦
ರಘುಪತಿ	ರೂ. ೧, ೨೪, ೪೮೫-೯೫
ಡಾ. ಜೀವರಾಜ ಆಳ್ವ	ರೂ. ೩೦, ೬೪೭-೨೦
ಹೆಚ್. ಡಿ, ದೇವೇಗೌಡ	ರೂ. ೧೮, ೫೮೯-೦೦

ದೂರವಾಣಿ, ಮನೆರಿಪೇರಿ, ಪೀಠೋಪಕರಣ ಮುಂತಾದವುಗಳಿಗೆ ಆಗಿರುವ ವೆಚ್ಚ ಬೇರೆ. ಪ್ರತಿ ತಿಂಗಳೂ ಪಡೆಯುವ ವೇತನವೂ ಪ್ರತ್ಯೇಕ. ಇದೆಲ್ಲಾ ಬಂದಿದೆ. ಟೆಲಿಫೋನ್ ಬಿಲ್ ಬಂದಿದೆ, ಅದು ಲಕ್ಷಗಟ್ಟಲೆ ಆಗಿದೆ. ಇದನ್ನು ನಾವು ಗಮನಿಸಿದರೆ ನಾವು ಪುನಃ ಹಿಂದಿನ ಕಾಲಕ್ಕೆ ಹೋಗುತ್ತಿದ್ದೇವೆಯೋ ಎಂದು ಕಾಣಿಸುತ್ತಿದೆ. ರಾಜಮಹಾರಾಜರ ದರ್ಬಾರಕ್ಕೆ ಹೋಗಬಾರದು. ಮೊದಲು ಬೇರೆ ಸರ್ಕಾರ ಇನಿತ್ತು. ಆ ಸರ್ಕಾರಕ್ಕೂ ಈ ಸರ್ಕಾರಕ್ಕೂ ಹೆಚ್ಚು ಕಡಿಮೆ ಒಂದೇ ರೀತಿಯಾಗಿ ಕಾಣುತ್ತಿದೆ. ಗಾಂಧಿಯನ್ ಸೋಸಿಯಲಿಸಮ್ ಎಂದು ಹೇಳುವಾಗ ಸಂಪನ್ಮೂಲ ಕಡಿಮೆ ಇದೆ ಎಂದು ಹೇಳುವಾಗ ಇದನ್ನು ಕಂಟ್ರೋಲ್ ಮಾಡದೇ ಇದ್ದರೆ ನಿಜವಾಗಿ ತೊಂದರೆಯಾಗುತ್ತದೆ. ಈ ರೀತಿ ಆದರೆ ತಾವು ಬಡ ಜನರನ್ನು ಉದ್ಧಾರ ಮಾಡಲಿಕ್ಕೆ ಸಾಧ್ಯವೇ? ಇವೊತ್ತು ಟೆಲಿಫೋನ್ ಬಿಲ್, ಭತ್ಯೆ ಮನೆಗಳ ರಿಪೇರಿ ಬಗ್ಗೆ, ಪೀಠೋಪಕರಣಗಳಿಗೆ ಆಗಿರುವಂಥ ವೆಚ್ಚ ನೋಡಿದರೆ ಬಹಳ ಇದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಕಂಟ್ರೋಲ್ ಇಡಬೇಕು. ನಿಮ್ಮಲ್ಲಿ ಈಗಲೇ ಸಂಪನ್ಮೂಲಗಳು ಕಡಿಮೆ ಯಾಗಿ ಹೆಚ್ಚಿನ ಡೆವಲಪ್‌ಮೆಂಟ್ ಆ್ಯಕ್ಟಿವಿಟೀಸ್ ತೆಗೆದುಕೊಳ್ಳಲಿಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು. ನಾವು ಕೂಡ ಮಿನಿ ಮಹಾರಾಜರ ತರಹ ಆಗ ಬಾರದು. ನಾವು ಜನತೆಯಿಂದ ಆಯ್ಕೆಯಾಗಿ ಬಂದವರು, ಈಗ ಏನೋ ಮಂತ್ರಿ ಪದವಿ ಇರುತ್ತದೆ, ಹೋಗುತ್ತದೆ, ನ್ಯಾಯವಾಗಿ ನೋಡಿದರೆ ನಮ್ಮ ಗತಿ ಮುಂದೆ ಏನಾಗುತ್ತದೆ ಎಂದು ತಿಳಿದುಕೊಳ್ಳ ಬೇಕು. ಒಳ್ಳೆಯ ವಾತಾವರಣವನ್ನು ರೂಪಿಸಬೇಕು. ಅದನ್ನು ಬಿಟ್ಟು ಮಂತ್ರಿ ಪದವಿ ಸಿಕ್ಕಿದೆ ಎಂದು ಬೆಂಗಳೂರಿನಲ್ಲಿ ದೊಡ್ಡದಾಗಿ ಆಸ್ತಿ ಮಾಡಿಕೊಂಡಿದ್ದರೆ ಆಗುವುದಿಲ್ಲ. ಇದೇ ತರಹ ಎಲ್ಲಾ ಮಂತ್ರಿ ಗಳಿಗೂ ತಲೆ ತಿರುಗುತ್ತದೆ ಎಂದು ಹೇಳುವುದಿಲ್ಲ. ಕಿಸ್ಸಾ ಕುರ್ಸಿಕಾ ಎನ್ನುವ ಚಿತ್ರ ಬಂದಿತ್ತು ಅದು ತಮಗೂ ಗೊತ್ತಿರಬಹುದು. ಕುರ್ಚಿ ಭದ್ರವಾಗಿರಬೇಕೆಂದು ಹೇಳುವಂತಾದ್ದು. ಎಮರ್ಜೆನ್ಸಿಯಲ್ಲಿ ಜೋರಾಗಿ ನಡೆಯಿತು. ಅಂಥ ಪ್ರಸಂಗ ಬಾರದೇ ಇರಲಿ ಎಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಅಭಿನಂದನೆಗಳನ್ನು ಏನಾದರೂ ಸಲ್ಲಿಸಲೇಬೇಕೆಂದರೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಸಲ್ಲಿಸಬೇಕಾಗಿದೆ ಅವರು ಬಹಳ ಸಿಂಪಲ್ ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ಅವರಿಗೆ ನಿಜವಾಗಿ ಅಭಿನಂದಿಸುತ್ತೇನೆ. ಇತರೆ ಮಂತ್ರಿಗಳು ಕೂಡ ಇದನ್ನು ಅನುಸರಿಸಬೇಕು. ನಮ್ಮ ರಾಜ್ಯಕ್ಕೆ ಆಗುವ ಆರ್ಥಿಕ ತೊಂದರೆ ಯನ್ನು ತಪ್ಪಿಸಬೇಕೆಂದು ನನ್ನ ಮನವಿ. ಇನ್ನು ಎಂ.ಎಲ್.ಎ. ಬಗ್ಗೆ ಹೇಳುವುದು ಅಂದರೆ ನಾವು ಈ ವಾತಾವರಣದಲ್ಲಿ ಜನರನ್ನು ಮರೆಯುತ್ತಿದ್ದೇವೆಯೋ ಎಂದು ಅನಿಸುತ್ತಿದೆ. ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಕೆಲಸ ಮಾಡಲಿಕ್ಕೆ ಮಂತ್ರಿ ಮಂಡಲದಲ್ಲಿರತಕ್ಕ ಮಂತ್ರಿಗಳು ಶಾಸಕರಿಗೆ ಸರಿಯಾದ ಗೌರವ ಕೊಡುವು ದಿಲ್ಲ. ಈ ರೀತಿಯಲ್ಲಿ ಆಗಬಾರದು. ಒಂದು ತಿಂಗಳ ಹಿಂದೆ ನಮ್ಮ ಜಿಲ್ಲಾ ಜನತಾಪಕ್ಷದ ಅಧ್ಯಕ್ಷರು ಮಾನ್ಯ ಮಂತ್ರಿಗಳನ್ನು ನೋಡಲಿಕ್ಕೆ ಬಂದಿದ್ದರು ಅವರು ಎರಡು ಗಂಟೆ ಕಾದರೂ ಇಂಟರ್‌ವ್ಯೂ ಸಿಕ್ಕಲಿಲ್ಲ. ಯಾರೋ ಒಬ್ಬ ಅಧಿಕಾರ ಸ್ಥಳದಲ್ಲೇ ಸಿಕ್ಕಿದರು. ಇವರು ಜಿಲ್ಲಾ ಜನತಾಪಕ್ಷದ ಅಧ್ಯಕ್ಷರು ನಮ್ಮನ್ನು ಚುನಾವಣೆ ಮಾಡಿ ಕಳುಹಿಸಿದಂತಹವರು ಎಂದು ಹೇಳಿದ್ದಕ್ಕೆ, ಇಲ್ಲ ಮಿನಿಸ್ಟರು ಹೇಳಿದ್ದಾರೆ

ಎಂದು ಸುಮ್ಮನೆ ಕಾಲವನ್ನು ತಳ್ಳಿದರು. ಒಬ್ಬ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಿಗೆ ಈ ರೀತಿ ತೊಂದರೆಯಾಗಿದ್ದರೆ, ಇನ್ನು ಸದಸ್ಯರಿಗೆ, ಸಾಮಾನ್ಯ ಜನರಿಗೆ ಯಾವರೀತಿ ತೊಂದರೆಯಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಕೊಡಬೇಕು. ಇನ್ನು ಎಕ್ಸ್‌ಪೆಂಡಿಚರ್ ಏನು ಆಗುತ್ತಿದೆ ಅದನ್ನು ತಗ್ಗಿಸಬೇಕೆಂದು ನನ್ನ ಅನಿಸಿಕೆ.

೨ ಪಿ. ಎಂ.

ಟಿ.ಎ.ಡಿ.ಎ. ವಿಚಾರದಲ್ಲಿ ವಿಪರೀತ ಖರ್ಚು ಬರುವುದನ್ನು ತಪ್ಪಿಸುವುದಕ್ಕೆಸಾಧ್ಯವಿಲ್ಲವೇ ಎನ್ನುವ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು, ವಿಧಾನಪರಿಷತ್ತನ್ನು ರದ್ದುಮಾಡುವ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಕರ್ನಾಟಕ, ಉತ್ತರ ಪ್ರದೇಶ, ತಮಿಳುನಾಡು ನಾಲ್ಕೈದು ರಾಜ್ಯಗಳನ್ನು ಬಿಟ್ಟರೆ, ಎಲ್ಲಿಯೂ ಮೇಲ್ಮನೆ ಇರುವುದಿಲ್ಲ. ಇದರಿಂದ, ಸರ್ಕಾರಕ್ಕೆ ೫೦ ಲಕ್ಷ ರೂಪಾಯಿಗಳವರೆಗೂ ಖರ್ಚು ಬರುತ್ತಿದೆ. ನಾನು ಮೇಲ್ಮನೆ ಸದಸ್ಯರ ಬಗ್ಗೆ ಅಗೌರವ ಸೂಚಿಸುತ್ತಿಲ್ಲ. ಆದರೆ, ಮೇಲ್ಮನೆ ರದ್ದು ಮಾಡುವುದರಿಂದ ಸರ್ಕಾರಕ್ಕೆ ೫೦–೬೦ ಲಕ್ಷ ರೂಪಾಯಿಗಳು ಉಳಿತಾಯ ಆಗುತ್ತದೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ರಾಜ್ಯಪಾಲರ ಹುದ್ದೆಯ ಬಗ್ಗೆಯೂ ಕೂಡ ಒಂದು ಮಾತನ್ನು ಹೇಳಬೇಕಾಗಿದೆ, Imperialistic legacy ಇದು ಅಕ್ಕರೆಯಿಲ್ಲದ ವ್ಯವಸ್ಥೆ ರಾಜ್ಯಪಾಲರ ಹುದ್ದೆಯಿಂದ ಯಾರನ್ನು ಬೇಕಾದರೂ ತೆಗೆಯಬಹುದು ಯಾರನ್ನು ಬೇಕಾದರೂ ಇಟ್ಟುಕೊಳ್ಳಬಹುದು. ಕಾಶ್ಮೀರದಲ್ಲಿ, ಆಂಧ್ರದಲ್ಲಿ, ಬಂಗಾಳದಲ್ಲಿ ಏನು ಆಯಿತೆಂಬುದನ್ನು ನೋಡಿದ್ದೇವೆ. ಈ ಹುದ್ದೆಯಿಂದ ಕೂಡ ಸರ್ಕಾರಕ್ಕೆ ವಿನಾ ಕಾರಣ ಖರ್ಚುಬರುತ್ತಿದೆ. ಇದನ್ನೂ ಕೂಡ ರದ್ದು ಮಾಡಬೇಕೆಂದು ನನ್ನ ಕೋರಿಕೆ. ಕೆಎಎಸ್ ಬಗ್ಗೆ ಹೇಳುವುದಾದರೆ, ಯಾರು ಯಾವ ಜಾಗದಲ್ಲಿದ್ದಾರೋ ಗೊತ್ತಿಲ್ಲ. ಪ್ರೊಮೋಟಿವ್ಸ್ ಮತ್ತು ಪ್ರೊಬೇಷನರಿಗಳು ಪ್ರತಿದಿನ ರಿಟ್ ಹಾಕುತ್ತಿದ್ದಾರೆ. ಇದನ್ನು ಸರಿಪಡಿಸದೇ ಹೋದರೆ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಇದೆಯೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಇದನ್ನು ಕಂಟ್ರೋಲ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು, ಲೋಕಸೇವಾ ಆಯೋಗದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಹಾಲಿ ಇರತಕ್ಕಂಥ ಪ್ರಚಾರವೇನೆಂದರೆ, ೫೦ ಸಾವಿರ ರೂಪಾಯಿಗಳು ಕೊಟ್ಟರೆ. ಎಸಿ ಹುದ್ದೆ ಸಿಕ್ಕುತ್ತದೆ. ೩೫ ಸಾವಿರ ರೂಪಾಯಿಗಳಿಗೆ ತಹಶೀಲ್ದಾರ್ ಹುದ್ದೆ ಸಿಕ್ಕುತ್ತದೆ. ೪೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಹುದ್ದೆಯನ್ನು ಮಾರಾಟಮಾಡುತ್ತಾರೆ ಎನ್ನುವ ವದಂತಿಗಳು ಎಲ್ಲಾ ಕಡೆ ಇವೆ. ರ್‍ಯಾಂಕ್ ಬಂದಿರತಕ್ಕಂತಹ ಕೆಲವು ವಿದ್ಯಾರ್ಥಿಗಳನ್ನು ಬಿಟ್ಟರೆ, ಉಳಿದವರ ಬಗ್ಗೆ ವ್ಯಾಪಾರ ಚೆನ್ನಾಗಿ ಜರುಗುತ್ತಿದೆ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಅಲ್ಲಿರತಕ್ಕಂಥ ಯಜಮಾನರುಗಳು ಚಕ್ರಾಧಿಪತಿಗಳಾಗಿ ಕೂತಿದ್ದಾರೆ. ಬೇಕಾದವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವತ್ತು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನಲ್ಲಿ ೧೬ ಅಧಿಕಾರಿ ಹುದ್ದೆಗಳು ಖಾಲಿಯಿದ್ದು, ಆ ಹುದ್ದೆಗಳಿಗೆ ನೇರವಾಗಿ ನೇಮಕ ಮಾಡಿ ಹಾಲಿ ಇರತಕ್ಕವರ ತಲೆಯ ಮೇಲೆ ಬೇರೆಯವರನ್ನು ತಂದು ಕೂರಿಸತಕ್ಕಂತಹ ಪ್ರಯತ್ನ ಮಾಡುತ್ತಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿರುವುದರಿಂದ, ಅಲ್ಲಿ ನಡೆಯತಕ್ಕಂತಹ ಅವ್ಯವಹಾರಗಳನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಂಥಾ ಪರಿಸ್ಥಿತಿಗೆ ಇನ್ನುಮುಂದೆ ಅವಕಾಶವನ್ನು ಕೊಡುವುದಿಲ್ಲವೆಂದು ನಾನು ನಂಬುತ್ತೇನೆ. ಇನ್ನು ರಾಜ್ಯದಲ್ಲಿ ಬೇಕಾದಷ್ಟು ಹುದ್ದೆಗಳು ಖಾಲಿಯಿದ್ದರೂ, ಅಲ್ಲಿ ನೇಮಕ ಮಾಡುತ್ತಿಲ್ಲ. ಹತ್ತಾರು ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡುತ್ತಿಲ್ಲ. ಇದರ ಕಡೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನಹರಿಸಿ, ಇದು ಮುಂದುವರಿಯದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆಯ ಬಗ್ಗೆ 'ಪಿಕ್ಚರ್ ಆಫ್ ಕರ್ನಾಟಕ' ಪುಸ್ತಕದಲ್ಲಿ ಅದರ ಬಗ್ಗೆ ವಿವರಣೆ ಕೊಟ್ಟಿದ್ದಾರೆ, ಅಭಿವೃದ್ಧಿ ಖರ್ಚು ೧,೩೬೯ ಕೋಟಿ ೭೨ ಪೈಸೆ. ಅಭಿವೃದ್ಧಿಯೇತರ ಖರ್ಚು ೬೪೬ ಕೋಟಿ ೭೬ ಪೈಸೆ. ಅದೇ ಪುಸ್ತಕದ ಪುಟ ೨೭ರಲ್ಲಿ ೩೮ ಪರ್ಸೆಂಟನ್ನು ಆ್ಯಡ್ ಮಾಡಿರುವುದನ್ನು ಕಾಣಬಹುದು. ಮತ್ತೆ, ೨೨.೬೫ ಪರ್ಸೆಂಟ್ ಸೇರಿಸಿದ್ದಾರೆ. ಒಟ್ಟು ೬೦.೭೨ ಪರ್ಸೆಂಟ್ ಆದರೂ ನಿಜವಾದ ಅಭಿವೃದ್ಧಿಗೆ ಖರ್ಚಾಗಿರಬಹುದು ೪೦ ಪರ್ಸೆಂಟ್ ಮಾತ್ರ. ನಾವು ಅನೇಕಸಾರಿ ಹೇಳಿದಂತೆ,

ಇದರಲ್ಲಿ ಲಂಚ ತೆಗೆದರೆ ೪೦ ಪರ್ಸೆಂಟ್ ಹಣದಲ್ಲಿ ಕರ್ನಾಟಕ ಅಭಿವೃದ್ಧಿ ಯಾವರೀತಿ ಆಗುತ್ತದೆ ಎನ್ನು ವುದನ್ನು ಯೋಚನೆ ಮಾಡಬೇಕು. ಇನ್ನು, ಕೈಗಾರಿಕೆಗಳ ವಿಚಾರದಲ್ಲಿ ಹೇಳುವುದಾದರೆ, ಗ್ರಾಮೀಣ ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ೭ ಪರ್ಸೆಂಟ್ ಮಾತ್ರ ಖರ್ಚುಮಾಡಲಾಗಿದೆ. ವ್ಯವಸಾಯ ಅಭಿವೃದ್ಧಿಗೆ ೩೮ ಪರ್ಸೆಂಟ್ ಹಣವನ್ನು ಕಡಿಮೆ ಖರ್ಚು ಮಾಡಲಾಗಿದೆ, ವಾಟರ್ ಡೆವಲಪ್‌ಮೆಂಟ್‌ಗಾಗಿ ೧೧ ಲಕ್ಷ ರೂಪಾಯಿ ಜಾಸ್ತಿ ಖರ್ಚು ಮಾಡಿದ್ದಾರೆ. ಸಹಕಾರಿ ವಲಯಕ್ಕೆ ಮೈನಸ್ ಆಗಿದೆ. ಸಾಮಾಜಿಕ ಅಭಿವೃದ್ಧಿಗಾಗಿ ೩ ಪರ್ಸೆಂಟ್ ಕಡಿಮೆ ಮಾಡಲಾಗಿದೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ಜನರಿಗೆ ಸಹಾಯ ಮಾಡುವುದಕ್ಕಾಗದೇ. ಎಲ್ಲವನ್ನೂ ಕೈಬಿಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ಆರ್ಥಿಕ ಇಲಾಖೆಯ ಸಮೀಕ್ಷೆ ಪ್ರಕಾರ, ವಸೂಲು ಮಾಡಿರತಕ್ಕಂಥ ಹಣ ೪೯೨ ಕೋಟಿ ರೂಪಾಯಿಗಳು ಇದರಲ್ಲಿ ಅರ್ಧಕ್ಕರ್ಧ ಹಣ ಸೋರಿ ಹೋಗುವುದನ್ನು ನಿಲ್ಲಿಸಿದರೆ ಆರ್ಥಿಕ ಸಂಪನ್ಮೂಲ ಹೆಚ್ಚುವುದಕ್ಕೆ ಅನುಕೂಲವಾಗುತ್ತದೆ. ಇದರಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಗಮನಕೊಡಬೇಕೆಂದು ಹೇಳುತ್ತೇನೆ ಇನ್ನು ರಾಜ್ಯ ಲಾಟರಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರಿಂದ ಕರ್ನಾಟಕದ ಜನರಿಗೆಲ್ಲಾ ಲಾಟರಿಯಾಗಿದೆ. ಅದರಲ್ಲೂ ಸಂಬಳ ಪಡೆಯುವವರು ತಿಂಗಳ ೧ ಮತ್ತು ೨ನೇ ತಾರೀಖಿನದಿವಸ ೧೦ ಪರ್ಸೆಂಟ್ ಆದರೂ ಹಣ ಖರ್ಚು ಮಾಡುತ್ತಾರೆ. ೧,೩೦೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ನಿವ್ವಳ ಲಾಭ ೨೨.೬೪ ಲಕ್ಷ ರೂಪಾಯಿಗಳೆಂದು ಪುಟ ೨೮ರಲ್ಲಿ ಹೇಳಿದ್ದೀರಿ. ಇದರಿಂದ ಎಷ್ಟು ಸಂಸಾರಗಳು ಹಾಳಾಗಿವೆಯೋ ಗೊತ್ತಿಲ್ಲ. ಇದನ್ನು ಏತಕ್ಕೆ ರದ್ದು ಮಾಡಬಾರದೆಂದು ಕೇಳುತ್ತೇನೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನಲ್ಲಿ ಸೋರಿಹೋಗುವುದನ್ನು ನಿಲ್ಲಿಸಿದರೆ, ಸರ್ಕಾರಕ್ಕೆ ೨೨ ಕೋಟಿ ರೂಪಾಯಿ ಲಾಭ ಬರುತ್ತದೆ. ದಯವಿಟ್ಟು ಇದನ್ನು ರದ್ದುಮಾಡಬೇಕೆಂದು ಹೇಳುತ್ತೇನೆ. ಇನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇವೆಂದು ಹೇಳಿದರೂ ಕೂಡ, ಇದುವರೆಗೂ ರದ್ದುಮಾಡಿಲ್ಲ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ಕೂಡ, ವೃತ್ತಿ ತೆರಿಗೆಯನು ರದ್ದು ಮಾಡುವುದಕ್ಕೆ ಬದ್ಧರಾಗಿದ್ದೇವೆಂದು ಹೇಳಿದ್ದೀರಿ. ಅದನ್ನು ತಕ್ಷಣ ರದ್ದು ಮಾಡಬೇಕೆಂದು ಹೇಳುತ್ತೇನೆ. ಹಣಕಾಸಿನ ಇಲಾಖೆಯವರು ಸಂಪನ್ಮೂಲಗಳು ಇಲ್ಲವೆಂದು ಹೇಳುತ್ತಿದ್ದಾರೆ. ಇದು ಸುಳ್ಳು. ಸೋರಿಹೋಗುವುದನ್ನು ನಿಲ್ಲಿಸಿದರೆ, ಮತ್ತು ಮಂತ್ರಿಗಳು ವೈಭೋಗದ ಜೀವನ ಮಾಡುವುದನ್ನು ನಿಲ್ಲಿಸಿದರೆ ಹಣದ ಉಳಿತಾಯವನ್ನು ಸಾಕಷ್ಟು ಮಾಡಿಕೊಳ್ಳಬಹುದು. ಕೇರಳದಲ್ಲಿ. ವೆಸ್ಟ್ ಬಂಗಾಲದಲ್ಲಿ ಮುಖ್ಯಮಂತ್ರಿಗಳು ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುತ್ತಾರೆಂದು ಕೇಳಿದ್ದೇವೆ. ಬೆಂಗಳೂರಿನಲ್ಲಿ ಕೆಲವು ಮಂತ್ರಿಗಳು ಚಕ್ರಾಧಿಪತಿಗಳಂತೆ ವರ್ತಿಸುವುದನ್ನು ನೋಡುತ್ತಿದ್ದೇವೆ. ಶಾಸಕರು ಹೋದರೂ ಕೂಡ ಅವರ ಕಣ್ಣಿಗೆ ಕಾಣುವುದಿಲ್ಲ. ವೈಭೋಗದ ಜೀವನವನ್ನು ಕಡಿಮೆ ಮಾಡಿ, ಜನತಾ ಪ್ರತಿನಿಧಿಗಳು ಎನ್ನುವುದನ್ನು ಮರೆಯಬಾರದು, ಮಂತ್ರಿ ಪದವಿ ಹೋದ ಮೇಲೆ ನಮ್ಮ ಗತಿ ಏನಾಗುತ್ತದೆ. ಎನ್ನುವುದನ್ನು ಯೋಚನೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಬಹಳ ಆನಂದವಾಗುತ್ತದೆ. ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಏನು ಇದ್ದಾರೆ, ಇಲಾಖೆಗಳು ಏನು ಇವೆ, ಮತ್ತು ಅಲ್ಲಿರತಕ್ಕ ಅಧಿಕಾರಿಗಳಿಗೆ ಯಾವ ರೀತಿಯಾದ ಒಂದು ಸರ್ವೀಸ್ ಕಂಡೀಷನ್ ಏನಿವೆ, ಅದರ ಬಗ್ಗೆ, ಮತ್ತೆ ಸುಮಾರು ೧೦ ಇಲಾಖೆಗಳು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೊಂದಿರತಕ್ಕಂತಹ ಇಲಾಖೆಗಳಾಗಿದ್ದು, ಅವುಗಳ ಬೇಡಿಕೆಗಳನ್ನು ಇವತ್ತು ನಮ್ಮ ಮುಂದೆ ಇಟ್ಟಿದ್ದಾರೆ. ಅವುಗಳ ಬಗ್ಗೆ ಇವತ್ತು ನಾವು ಮಾತನಾಡಬೇಕಾಗಿದೆ. ಸಾರ್ವಜನಿಕ ಇಲಾಖೆ ಏನಿವೆ, ಅದರ ಉದ್ದೇಶವನ್ನು ದಿವಂಗತ ಸನ್ಮಾನ್ಯ ನೆಹರೂರವರ ಭಾಷೆಯಲ್ಲಿ ಹೇಳುವುದಾದರೆ,

"To end the grossest froms of social and economic equalities"

ಅಂದರೆ ಈ ಒಂದು ಸಮಾಜದಲ್ಲಿ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಏನು ಅಸಮಾನತೆ ಎಂಬ ಅನಿಷ್ಟ ಇದೆ ಅದನ್ನು ಕೊನೆಗಾಣಿಸಬೇಕು ಅಂತ. ಮತ್ತೆ ಅದರ ಬಗ್ಗೆ ಮಾತನಾಡುತ್ತಾ ಮುಂದೆ ಹೇಳುತ್ತಾರೆ,

> "We must also end the social absessions of inferiority and superiority complex" ಎಂದು.

ಅಂದರೆ ನಮ್ಮ ಸಮಾಜದಲ್ಲಿರತಕ್ಕ ದೊಡ್ಡತನ ನಂತರ ಚಿಕ್ಕತನ ಇಂತಹ ಒಂದು ವ್ಯತ್ಯಾಸವನು. ಕೊನೆಮಾಡಬೇಕು ಅಂತ ಹೇಳುತ್ತಾರೆ. ಆ ರೀತಿ ಇದು ಕೊನೆಯಾಗಬೇಕೆಂದು ಹೇಳುತ್ತಿದ್ದೇನೆ. ಆದ್ದರಿಂದ ಈ ಒಂದು ಸಾರ್ವಜನಿಕ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಸರ್ಕಾರದ ಉದ್ದೇಶವನ್ನು ಸಾಧನೆ ಮಾಡಲೇಬೇಕು. ಮತ್ತೆ ಡಾ. ಅಂಬೇಡ್ಕರ್‌ರವರು ಒಂದು ಮಾತನ್ನು ೨೬-೧-೧೯೫೦ರಲ್ಲಿ ರಾಜ್ಯಾಂಗ ಏನು ಜಾರಿಗೆ ಬಂತು, ಆವಾಗ ಭಾಷಣ ಮಾಡುತ್ತಾ ಹೇಳಿದರು.

> "We have achieved political freedom to this country but we have not achieved economic and social freedom and those who suffer from economic and social freedoms, they will blow up the very set-up of the Democracy."

ಅಂತ ಹೇಳಿಬಿಟ್ಟು ಒಂದು ಮಾತನ್ನು ಹೇಳುತ್ತಾರೆ. ಆದರೆ ಇವತ್ತು ನಮ್ಮ ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ನಮ್ಮ ಜನಗಳಿಗೆ ಬಂದಿಲ್ಲ. ಆದ್ದರಿಂದ ಇವತ್ತು ನಮ್ಮ ಜನಗಳಲ್ಲಿ ಈ ಒಂದು ಅಸಮಾನತೆ ಇದೆ. ಅಂತ ಹೇಳಿದರೆ ಕೆಲವರಿಗೆ ಸಿಟ್ಟು ಬರಬಹುದು. ನಾನು ಅದನ್ನು ನೋಡಿದ್ದೇನೆ, ಅದಕ್ಕಾಗಿ ಬಹಳ ಕಷ್ಟಪಟ್ಟಿದ್ದೇನೆ. ಸ್ವಾತಂತ್ರ್ಯ ತಂದಿದ್ದೇನೆ. ಇದೂ ಕೂಡ ಜನಗಳಿಗೆ ತಲುಪಿಬಿಟ್ಟರೆ ಸಾಕು ಎನ್ನುವ ಮಾತನ್ನು ಹೇಳಿದ್ದಾರೆ. ಆ ಉದ್ದೇಶವನ್ನು ಇವತ್ತು ನಾನಾ ರೂಪದಲ್ಲಿ ಇದುವರೆವಿಗೂ ಸೃಷ್ಟಿಮಾಡಿಕೊಂಡು ನಡೆಸಿದ್ದೇವೆ. ಯೋಜನೆಗಳನ್ನು ಪೂರೈಸಿದ್ದೇವೆ. ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಏನು ಕೆಲಸ ಮಾಡಿದ್ದೇವೆಂಬುದನ್ನು ನೋಡಿದರೆ, ದೇಶಕ್ಕೆ ಸ್ವಾತಂತ್ರ್ಯ ಬಂದು ೩೮ ವರ್ಷಗಳಾದರೂ ಹಲವಾರು ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡಬೇಕೆಂಬ ಸಂಕಲ್ಪವನ್ನು ಮಾಡಿದ್ದೇವೆ. ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಅಷ್ಟೆ: ಆದರೆ ಈ ಒಂದು ಅಧಿಕಾರ ವರ್ಗ ಏನಿದೆ ಅದು ನಾವು ರಾಜಕೀಯ ಪಕ್ಷಗಳ ಜನ ಏನು ಇದ್ದೇವೆ, ನಮ್ಮದೇ ಆದಂತಹ ಸರ್ಕಾರವನ್ನು ರಚನೆ ಮಾಡಿಕೊಂಡು ನಮ್ಮ ಉದ್ದೇಶವನ್ನು ಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಅದಕ್ಕೆ ತಕ್ಕಂತೆ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳತಕ್ಕಂತಹ ಮಾತು ಇದೆ. ಅವರಿಂದ ಆ ಒಂದು ಕೆಲಸ ಆಗುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ. ಹಲವಾರು ಅಧಿಕಾರಿಗಳ ಬಗ್ಗೆ ಹೇಳಬೇಕಾಗುತ್ತದೆ. ಅಂದ ಮಾತ್ರಕ್ಕೆ ಎಲ್ಲರೂ ಇಂತಹದ್ದೇ ಮನಸ್ಸನ್ನು ಇಟ್ಟುಕೊಂಡು ಜನಗಳ ಸೇವೆ ಮಾಡುತ್ತಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಾವಿರಾರು ಅಧಿಕಾರಿಗಳು ಸಮಾಜದ ಹಿನ್ನೆಲೆಯಲ್ಲಿ ಆಯಾ ಜಾತಿಗೆ ಸೇರಿಕೊಂಡು ಅಧಿಕಾರವನ್ನು ನಡೆಸುವಾಗ ಜಾತಿಯ ಹಿನ್ನೆಲೆಯನ್ನಿಟ್ಟುಕೊಂಡು ಕೆಲಸವನ್ನು ಮಾಡತಕ್ಕಂತಹದ್ದು ಇದೆ. ಕೆಲವರಿಗೆ ಉಪಕಾರ ಮಾಡುವುದು ಕೆಲವರಿಗೆ ಅಪಕಾರ ಮಾಡುವುದು ನಡೆಯುತ್ತಿದೆ. ಇದು ಹೋಗಬೇಕು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಧಿಕಾರಕ್ಕೆ ಬಂದ ಮೇಲೆ ಇದನ್ನು ಸುಧಾರಿಸುತ್ತಾರೆಂದು ನನ್ನ ಒಂದು ಭಾವನೆ ಇತ್ತು. ಇವರು ಅಧಿಕಾರಕ್ಕೆ ಬಂದು ೨ ವರ್ಷದ ಮೇಲೆ ೩–೪ ತಿಂಗಳಾಯಿತು. ಆದರೆ ಕೂಲಂಕುಷವಾಗಿ ನಾವು ಇದನ್ನು ನೋಡಿದರೆ, ಅಧಿಕಾರಿಗಳಲ್ಲಿರುವಂತಹ ಈ ಒಂದು ಭಾವನೆಯನ್ನು ನಿವಾರಣೆ ಮಾಡಿದ್ದಾರೆಯೋ ಎಂಬುದನ್ನು ಯೋಚನೆ ಮಾಡಿ ನೋಡುವುದಾದರೆ, ನಿವಾರಣೆ ಮಾಡುವುದಕ್ಕೆ ಇವರ ಕೈಯಲ್ಲಿ ಆಗಿಲ್ಲ. ಮತ್ತೆ ಆಡಳಿತದಲ್ಲಿ ಸುಧಾರಣೆ ಮಾಡಬೇಕು ಅಂತ ಹೇಳಿದ ಮಾನ್ಯ ಮುಖ್ಯಮಂತ್ರಿಗಳು, ಇವರು ಮುಖ್ಯಮಂತ್ರಿಗಳಾದಾಗಿನಿಂದ ಇವತ್ತಿನವರೆಗೂ ವಾಗ್ದಾನಗಳ ಸುರಿಮಳೆಗಳೆ ಗೆರೆದಿದ್ದಾರೆ. ವಾಗ್ದಾನಗಳ ಮೇಲೆ ವಾಗ್ದಾನಗಳು. ಅವುಗಳನ್ನು ಹೇಳಿದ್ದರೂ ಕೂಡ ಅವುಗಳನ್ನು ಆಚರಣೆಗೆ ತರುವ ದಿಸೆಯಲ್ಲಿ ಎಳ್ಳಷ್ಟು ಪ್ರಯತ್ನ ಮಾಡಲಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳು

ತ್ತಿದ್ದೇನೆ. ಮತ್ತೆ ವಿವರವಾಗಿ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಒಂದು ವಿಚಾರವನ್ನು ಇವತ್ತಿನ ದಿವಸ ಮಂಡಿಸಿರತಕ್ಕಂತಹ ಬೇಡಿಕೆಯಲ್ಲಿ " ಸಚಿವ ಸಂಪುಟ ವ್ಯವಹಾರಗಳ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ " ಈ ರೀತಿಯ ಹೆಸರನ್ನು ಏನು ಇಟ್ಟಿದ್ದಾರೆ, ನನ್ನ ದೃಷ್ಟಿಯಲ್ಲಿ ಇದು ಸರಿಯಲ್ಲವೆಂದು ಅನ್ನಿಸುತ್ತಿದೆ. ಕಾರಣ ಈ ಸರ್ಕಾರ ನಡೆಸತಕ್ಕ ಹಾಗೂ ಇಟ್ಟುಕೊಂಡಿರತಕ್ಕಂತಹ ಸಿಬ್ಬಂದಿ ಸಾರ್ವಜನಿಕರಿಗೆ ಸಂಬಂಧ ಪಟ್ಟಿರತಕ್ಕಂಥಾದ್ದು. ಈ ರೀತಿ ಎಲ್ಲೂ ಇಲ್ಲ. ನಾನೂ ರಾಜಕೀಯ ವಿಜ್ಞಾನದ ವಿದ್ಯಾರ್ಥಿಯಾಗಿದ್ದೆ. ಆದರೆ ಇಂತಹ ಒಂದು ಪದವನ್ನು ನಾನು ಎಂದೂ ನೋಡಿಲ್ಲ. " ಸಚಿವ ಸಂಪುಟ ವ್ಯವಹಾರಗಳ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ " ಎನ್ನತಕ್ಕಂತಹ ಪದವನ್ನೂ ಎಲ್ಲೂ ನೋಡಿಲ್ಲ ಆದ್ದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ, ಇದನ್ನು ಬದಲಾವಣೆ ಮಾಡಿ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇಲಾಖೆ ಎಂಬುದಾಗಿ ಈ ಖಾತೆಗೆ ಇಡತಕ್ಕಂಥಾದ್ದು ಸರಿಯಾಗಿದೆ: ಈ ಬಗ್ಗೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕೂಲಂಕುಷವಾಗಿ ಪರಿಶೀಲಿಸಿ ಆದನ್ನು ಅನುಸರಿಸುತ್ತಾರೆಂದು ನಾನು ತಿಳಿದಿದ್ದೇನೆ. ಸರ್ಕಾರವನ್ನು ನಡೆಸುತ್ತಿದ್ದಾರೆ. ಅದು ಯಾವುದೇ ಸರ್ಕಾರವಾಗಿರಬಹುದು, ಜನತಾ ಸರ್ಕಾರವಾಗಿರಬಹುದು, ಅಥವಾ ಕಾಂಗ್ರೆಸ್ ಸರ್ಕಾರವಾಗಿರಬಹುದು, ನಮ್ಮಗಳ ಉದ್ದೇಶ ಯಾವ ರೀತಿ ಇದೆ ಎಂದರೆ, ಸಮಾಜದಲ್ಲಿ ಎಡರುತೊಡರುಗಳು ಏನು ಇವೆ, ಅಸಮಾನತೆ ಏನು ಇದೆ, ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. We cannot run this administration with full citizens; half citizens and quarter citizens. We cannot do that job. ಎಲ್ಲ ನಾಗರೀಕರೂ ಇದನ್ನು ಒಪ್ಪಿದ್ದಾರೆ ಆದರೆ ಅರ್ಧಂಬರ್ಧ ನಾಗರೀಕತೇ ಇದ್ದಾರೆ. ಬಡವರೇ ಇದ್ದಾರೆ. ಮತ್ತೆ ಸಮಾಜದಲ್ಲಿ ವಿಶಾಲವಾಗಿ ಜೀವನ ಮಾಡತಕ್ಕ ಜನಗಳನ್ನು ಈ ಒಂದು ರಾಷ್ಟ್ರದ ಸಮಾಜಕ್ಕೆ ಹೊಂದಿಕೊಂಡಂತೆ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ನಾವು ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ೩೮ ವರ್ಷಗಳಾದರೂ ಇವತ್ತಿನವರೆಗೂ ಕೂಡ ಅರ್ಧಂಬರ್ಧ ನಾಗರೀಕರೆ ಇದ್ದಾರೆ. ಸಂಪೂರ್ಣವಾಗಿ ನಾಗರೀಕರನ್ನು ನಾವು ಇದುವರೆವಿಗೂ ನೋಡಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಗಾಂಧಿವಾದಿಗಳು ಅಂತ ಹೇಳುತ್ತಾರೆ. ಗಾಂಧಿ ತತ್ವಕ್ಕನುಸಾರವಾಗಿ ಇರತಕ್ಕಂತಹ ಎಡರುತೊಡರುಗಳನ್ನು ನಿವಾರಣೆ ಮಾಡುತ್ತೇವೆಂದು ಭಾಷಣಗಳಲ್ಲಿ ಹೇಳುತ್ತಾರೆ. ವಾಗ್ದಾನಗಳ ಸುರಿಮಳೆಯನ್ನೇ ಸುರಿಸಿದ್ದಾರೆ. ಆ ಉದ್ದೇಶವನ್ನು ಸಾಧನೆ ಮಾಡಬೇಕು. ಎಸ್.ಸಿ.- ಎಸ್. ಟಿ. ಯವರು ಏನು ಇದ್ದಾರೆ, ಅವನು ಎಸ್‌ಸಿ:ಎಸ್‌ಟಿ ಯಾಗಿಯೇ ಇರಬೇಕು. ಹಿಂದುಳಿದ ವರ್ಗದವರು ಏನು ಇದ್ದಾರೆ. ಅವರು ಹಿಂದುಳಿದ ವರ್ಗದವರಾಗಿಯೇ ಇರಬೇಕು, ಮತ್ತೆ ಹಲವಾರು ಜಾತಿಗಳು ಏನು ಇವೆ, ಅವುಗಳು ಎಲ್ಲೆಲ್ಲಿವೆಯೋ ಅಲ್ಲೇ ಅದೇ ರೀತಿಯಲ್ಲೇ ಮುಂದುವರಿಸಿಕೊಂಡು ಹೋಗಬೇಕು ಅಂತ ಹೇಳುವುದಾದರೆ. ಇಂತಹ ಸಮಾಜವನ್ನು ಮುಂದುವರಿಸುವುದಂತೂ ರಾಷ್ಟ್ರದ ಉದ್ದೇಶ ಅದು ಅಲ್ಲ. ರಾಜ್ಯಾಂಗದ ಉದ್ದೇಶವೂ ಅದಲ್ಲ ಎಂಬುದಾಗಿ ನಾನು ಹೇಳಬೇಕಾಗುತ್ತದೆ. ಈ ಒಂದು ಒಳ್ಳೆಯ ಸಮಾಜವನ್ನು ಹಾಗೂ ಭದ್ರವಾದ ಸಮಾಜವನ್ನು ಕಟ್ಟಬೇಕಾದರೆ ಹಲವಾರು ಯೋಜನೆಗಳನ್ನು ಹಾಕಬೇಕು. ಆದರೆ ಇವುಗಳನ್ನು ಜಾರಿಗೆ ತರುವುದಕ್ಕೆ ಇರುವಂತಹ ಸಾಧನವಾದ ಸರ್ಕಾರದ ಸಿಬ್ಬಂದಿ ಏನಿದೆ, ಆ ಸಿಬ್ಬಂದಿಗೆ ನಿಗದಿತವಾದ ನಿಯಮಾವಳಿಗಳು [ಬೇಕು. ಮತ್ತೆ ಅಸ್ತಿಭಾರ ಬೇಕು ಎಂಬುದಾಗಿ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ಈ ಸರ್ಕಾರ ಚುನಾವಣೆಯಾದ ನಂತರ ಬಂತು. ಇವರ ಮೊದಲ ಬಜೆಟ್ ಭಾಷಣದಲ್ಲಿ ೬೪೭ ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ ಅಂತ ಹೇಳಿದರು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ೫ ತಿಂಗಳಾಗಿದೆ. The picture of Karnataka — "Budget Estimates for 1985 - 86" ಅದನ್ನು ನಮಗೆಲ್ಲಾ ಕೊಟ್ಟಿದ್ದಾರೆ. ಆದರೆ ಈಗ ಇರತಕ್ಕಂತಹ ಕೊರತೆ ಕೇವಲ ೩ ಕೋಟಿ ೩೭ ಲಕ್ಷ ರೂಪಾಯಿಗಳು ಮಾತ್ರ ಎಂಬುದಾಗಿ ತಿಳಿಸಿದ್ದಾರೆ. ಅಂದರೆ ಇದರ ಅರ್ಥ ಏನಾಗುತ್ತದೆ ? ಯಾವಾಗ ನೀವು ಪ್ರಾರಂಭ ಮಾಡಿದ್ದೀರಿ ? ಆವತ್ತು ೬೪೭ ಕೋಟಿ ರೂಪಾಯಿಗಳ ಖೋತಾ ಏನು ಇತ್ತು, ಅದನ್ನೆಲ್ಲಾ ಸರಿಪಡಿಸಿಕೊಂಡು ಬಂದಿದ್ದೇವೆಂದು ಅರ್ಥವಾಗುತ್ತದೆ. ಅಂದರೆ ಇವತ್ತು ನೀವು ಖರ್ಚು ಮಾಡತಕ್ಕ ಹಣವನ್ನೂ ಕೂಡ ಖರ್ಚು ಮಾಡಿಲ್ಲವೆಂದು ಇದರಿಂದ ಅರ್ಥವಾಗುತ್ತದೆ. ಗ್ರಾಮಾಂತರ ಪ್ರದೇಶ ಗಳಲ್ಲಿ ನೀವು ಹೋದರೆ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ಹೋಗಿ ನೋಡಿದರೆ. ಎಲ್ಲಿಲ್ಲೂ ಹಣವನ್ನೇ ಖರ್ಚು ಮಾಡಿಲ್ಲ. ಬಜೆಟ್‌ನಲ್ಲಿ ಒದಗಿಸಿರತಕ್ಕಂತಹ ಒಂದು ಕಾಸನ್ನೂ ಖರ್ಚು ಮಾಡುತ್ತಿಲ್ಲ. ಜನ

ಗಳ ಸೇವೆಯನ್ನು ಮಾಡಬೇಕೆಂದು ತಾವು ಅಧಿಕಾರಕ್ಕೆ ಬಂದಾಗ ಹೇಳಿದ್ದೀರಿ. ಆ ಒಂದು ಉದ್ದೇಶ ಸಾಧನೆಯಾಗುತ್ತಿಲ್ಲ. ಮತ್ತೆ ಜನಗಳಿಗೆ ಏನು ಭರವಸೆಗಳನ್ನು ಕೊಟ್ಟಿದ್ದೀರಿ, ಅದನ್ನು ಕಾರ್ಯಗತ ಮಾಡುವುದಕ್ಕೆ ಯಾವ ಹಣವನ್ನೂ ಖರ್ಚು ಮಾಡುತ್ತಿಲ್ಲ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಬಜೆಟ್ ಅನ್ನು ಎರಡು ಸಾರಿ ಇಟ್ಟಿದ್ದಾರೆ. ಮಾರ್ಚಿ ತಿಂಗಳಿನಲ್ಲಿಯೇ ಆಯವ್ಯಯ ಪತ್ರವನ್ನು ಸಭೆಯ ಮುಂದಿಟ್ಟು ಮಂಜೂರಾತಿಯನ್ನು ಪಡೆದಿದ್ದರೆ ಇವತ್ತು ಹಣವನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಐದು ತಿಂಗಳು ತಡಮಾಡಿ. ಬಡ್ಜೆಟ್‌ನ್ನು ಮಂಜೂರು ಮಾಡಲಿಲ್ಲ. ಯಾವ ಇಲಾಖೆಯ ಅಧಿಕಾರಿಯೂ ಕೂಡ ಬಡ್ಜೆಟ್ ಈ ಸಭೆಯಲ್ಲಿ ಮಂಜೂರು ಆಗದಿದ್ದರೆ ಖರ್ಚು ಮಾಡುವುದಕ್ಕೆ ಧೈರ್ಯ ಬರುವುದಿಲ್ಲ. ಖರ್ಚಿನ ಬಗ್ಗೆ ಸರ್ಕಾರಿ ನೌಕರರು ಸರ್ಕಾರದವರು ಗಮನ ಕೊಟ್ಟಿಲ್ಲವೆಂಬುದು ಸ್ಪಷ್ಟವಾಗಿರತಕ್ಕ ಮಾತು. ಮಾನ್ಯ ಕಡಿದಾಳ ಮಂಜಪ್ಪನವರು ಶಿವಮೊಗ್ಗದಲ್ಲಿ ಒಂದು ಮಾತು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ 'ಜನತಾ ಸರ್ಕಾರ ಹಲವಾರು ಭರವಸೆಗಳನ್ನು ಇತ್ತು ಅಧಿಕಾರಕ್ಕೆ ಬಂದು ಕೊಟ್ಟಂತಹ ಆಶ್ವಾಸನೆಗಳನ್ನು ಕಾರ್ಯಗತ ಮಾಡುವಲ್ಲಿ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲವೆಂದು ಹೇಳಿದ್ದಾರೆ'. ನಿಮ್ಮ ಕಡೆಯವರೇ ಆ ರೀತಿಯಾಗಿ ಹೇಳುತ್ತಿದ್ದಾರೆ ಜನಗಳು ಆ ರೀತಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಹೇಳುತ್ತಿದ್ದೇನೆ, ನೀವು ಜನಗಳಿಗೆ ಹಲವಾರು ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ, ನೀವು ಕೊಟ್ಟಂತಹ ಭರವಸೆಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತರುವಲ್ಲಿ ಅವುಗಳನ್ನು ಕಾರ್ಯಗತ ಮಾಡುವಲ್ಲಿ ತಾವು ಪ್ರಯತ್ನ ಮಾಡಬೇಕು. ಅದಕ್ಕನುಗುಣವಾಗಿ ಅಧಿಕಾರ ವರ್ಗವನ್ನು ಪರಿವರ್ತನೆ ಮಾಡಿ, ಅಧಿಕಾರಿ ವರ್ಗದವರಿಂದ ನೀವು ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಇನ್ನು ಡಿ.ಪಿ.ಎ.ಆರ್.ನಲ್ಲಿ ದಿವಸಕ್ಕೊಂದು ಆರ್ಡರ್ ಮಾಡುತ್ತಿದ್ದಾರೆ. ಅನ್ ಷೆಡ್ಯೂಲ್ಡ್ ಪೀಪಲ್ ಅವರಿಗೆ ಒಂದು ಆರ್ಡರ್ ಮಾಡುತ್ತಿದ್ದಾರೆ, ಷೆಡ್ಯೂಲ್ಡ್ ಪೀಪಲ್‌ಗೆ ಒಂದು ಆರ್ಡರ್ ಮಾಡುತ್ತಿದ್ದಾರೆ, ಅದೇ ರೀತಿ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಒಂದು ಆರ್ಡರ್ ಮಾಡುತ್ತಿದ್ದಾರೆ. ಡಿ.ಪಿ.ಎ.ಆರ್.ನಲ್ಲಿ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಏನೇನು ಆರ್ಡರ್‌ಗಳಿವೆ ಅವುಗಳನ್ನೆಲ್ಲಾ ಕೊಡಿ ಅಂದರೆ ನಾವು ಕೇಳುವುದು ಒಂದು ಅವರು ಕೊಡುವುದು ಒಂದು. ನಾನು ಮಂತ್ರಿಯಾಗಿ ಮತ್ತು ಸದಸ್ಯನಾಗಿ ಈ ಮನೆಯಲ್ಲಿ ಕೆಲಸ ಮಾಡಿದ್ದೇನೆ, ಈಗ ದಿವಸಕ್ಕೊಂದು ಆರ್ಡರ್ ಮಾಡುತ್ತಿದ್ದಾರೆ. ಹೊಸ ಹೊಸ ಮಂತ್ರಿಗಳು ಬರುತ್ತಾರೆ ಹಿಂದೆ ಏನಾಗಿದೆ ಎಂಬುದು ಅವರಿಗೆ ಗೊತ್ತಿಲ್ಲ, ಹೊಸಬರಿಗೆ ಅವರಿಗನುಗುಣವಾಗಿ ಕಾನೂನುಗಳನ್ನು ಅವರ ಮುಂದಿಡುತ್ತಾರೆ. ಹಿಂದೆ ಆಗಿರತಕ್ಕ ಆರ್ಡರ್‌ಗಳನ್ನೆಲ್ಲಾ ಮರೆಸಿ ಆ ಜನಗಳಿಗೆ ಅನ್ಯಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಡಿ.ಪಿ.ಎ.ಆರ್. ಹೆಸರಿನಲ್ಲಿ ಹೊರಡತಕ್ಕ ಗೌರ್ನ್‌ಮೆಂಟ್ ಆರ್ಡರ್‌ಗಳು ಏನಿವೆ ಅವುಗಳನ್ನೆಲ್ಲಾ ಒಟ್ಟಿಗೆ ಸೇರಿಸಿ compilation of Government orders ಎಂದು ಇವತ್ತಿನವರೆಗೂ ಮಾಡಿಲ್ಲ. ಎಲ್ಲಾ ಗೌರ್ನ್‌ಮೆಂಟ್ ಆರ್ಡರ್‌ಗಳ ಒಂದು ಪುಸ್ತಕ ಇದ್ದಿದ್ದರೆ ಎಲ್ಲರಿಗೂ ಅನುಕೂಲವಾಗುತ್ತಿತ್ತು. ಅದು ಜಾರಿಯಲ್ಲಿದ್ದರೆ ಎಲ್ಲರಿಗೂ ಅನುಕೂಲವಾಗುತ್ತಿತ್ತು. ಡಿ.ಪಿ.ಎ.ಆರ್.ನಲ್ಲಿ ಯಾವುದಾದರೂ ಒಂದು ಗೌರ್ನ್‌ಮೆಂಟ್ ಆರ್ಡರ್ ಕೇಳಿದರೆ ಇಂಟರ್‌ಪ್ರೆಟ್ ಮಾಡುವುದೊಂದೆ ಅವರ ಕೆಲಸ. ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಸರ್ವೀಸ್ ಕಂಡೀಷನ್ಸ್ ಬಗ್ಗೆ ತೀರ್ಪುಗಳನ್ನು ಕೊಟ್ಟಿದ್ದಾರೆ. ಇಲ್ಲಿ ಕಾನೂನು ಮಂತ್ರಿಗಳಿದ್ದಾರೆ. ಅವರು ಇರುವುದು ಬೇಡವೆಂದು ಹೇಳುವುದಿಲ್ಲ. ಡಿ.ಪಿ.ಎ.ಆರ್.ಗೆ ಒಂದು ಸವಾಲು ಹಾಕುತ್ತೇನೆ, ರಾಜ್ಯಾಂಗಬದ್ಧವಾಗಿ ಕೆಲವು ಹಕ್ಕುಗಳಿವೆ, ನಾವು ಮಾಡಿರತಕ್ಕ ಹಕ್ಕುಗಳಿವೆ ಬೇಕಾದಷ್ಟು ಆರ್ಡರ್‌ಗಳನ್ನು ಮಾಡಿದ್ದೇವೆ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ ಇವೆಲ್ಲವುಗಳ ಆಧಾರದ ಮೇಲೆ ಎಲ್ಲರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದರೆ ಏತಕ್ಕೆ ಸಾಧ್ಯವಾಗುವುದಿಲ್ಲ? ಒಬ್ಬ ಸರ್ಕಾರಿ ನೌಕರನಿಗೆ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟು ಏನೊಂದು ತೀರ್ಪು ಕೊಟ್ಟಿದ್ದಾರೆ ಅದು ಬೇರೆ ಸರ್ಕಾರಿ ನೌಕರರಿಗೆ ಅನ್ವಯವಾಗುವುದಿಲ್ಲವೆ? ಇದು ನಾನು ಮಂತ್ರಿ

ಯಾಗಿದ್ದಾಗಿನಿಂದಲೂ ಹೀಗೆಯೇ ನಡೆದುಕೊಂಡು ಬಂದಿದೆ, ಇವತ್ತು ಸಹ ಹಾಗೆಯೇ ನಡೆಸಿಕೊಂಡು ಬರುತ್ತಿದೆ, ಇದರ ಬಗ್ಗೆ ಕಾನೂನು ಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಬೇಕು. ಒಂದು ವಿಚಾರದಲ್ಲಿ ಹೈಕೋರ್ಟ್‌ನಲ್ಲಿ ತೀರ್ಪು ಬಂದಮೇಲೆ ಸರ್ವೀಸ್ ಕಂಡೀಷನ್ಸ್‌ಗಳು ಬಗ್ಗೆ ತೆಗೆದುಕೊಳ್ಳಿ ಅದು ಎಲ್ಲರಿಗೂ ಅನ್ವಯಿಸುತ್ತದೆ. ಸಿಮಿಲರ್ ಕಂಡಿಷನ್‌ಗಳು ಏನಿವೆ ಅದು ಎಲ್ಲರಿಗೂ ಅನ್ವಯುವಾಗುವಾಗ ಅದನ್ನೇ ಏತಕ್ಕೆ ಎಲ್ಲರಿಗೂ ಅನ್ವಯು ಮಾಡುವುದಿಲ್ಲ? ನೀವು ಅದೇ ವಿಚಾರದಲ್ಲಿ ಅಧಿಕಾರಿಗಳನ್ನು ಪುನಃ ಏತಕ್ಕೆ ಹೈಕೋರ್ಟ್‌ಗೆ ಕಳುಹಿಸುತ್ತೀರಿ? ಒಂದೇ ವಿಚಾರದಲ್ಲಿ ಬಂದಂತಹ ತೀರ್ಮಾನಗಳನ್ನು ಎಲ್ಲರಿಗೂ ಅನ್ವಯಿಸುವಂತೆ ಮಾಡಬೇಕು.

ನಮಗೆ ಒಂದು ವಾರ್ಷಿಕ ವರದಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ಅನೇಕ ವಿಷಯಗಳನ್ನು ಹೇಳಿದ್ದೀರಿ, ಅದರಲ್ಲಿ ನಿಮ್ಮ ವರ್ಗದವರಿಗೆ ಒಂದು ಬ್ರ್ಯಾಂಚ್ ಎಂದು ಮಾಡಿದ್ದೀರಿ. ಅದರ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ. ಅದಕ್ಕಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಏನು ಪ್ರಾವಿಜನ್ ಮಾಡಿದ್ದೀರಿ ಅದನ್ನು ಜಾರಿಗೆ ತರುವಲ್ಲಿ ನೀವು ನಿಷ್ಪ್ರಯೋಜಕರಾಗಿದ್ದೀರಿ. ನೀವು ಸರಿಯಾಗಿ ಕೆಲಸ ಮಾಡುವ ಕಡೆಗೆ ಗಮನ ಕೊಡುತ್ತಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನ್ನ ಸಲಹೆ ಏನೆಂದರೆ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಬಂದಂತಹ ತೀರ್ಪುಗಳ ಹಿನ್ನೆಲೆಯಲ್ಲಿ ನೌಕರರ ಕ್ಯಾರಿಯರ್ ಸರ್ವೀಸ್ ಕಂಡೀಷನ್ಸ್ ಅವುಗಳನ್ನು ಪರಿಷ್ಕರಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಇನ್ನು ಟೆಂಪರರಿ ಅಪಾಯಿಂಟ್ಸ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಟೆಂಪರರಿ ಅಪಾಯಿಂಟ್‌ಮೆಂಟ್ಸ್‌ನಲ್ಲಿ ಬಹಳ ಜನರು ಇದ್ದಾರೆ. ನಾನು ನಿಯಮ ೩೩೪ರ ಪ್ರಕಾರ ಒಂದು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಉತ್ತರವಾಗಿ ಮುಖ್ಯಮಂತ್ರಿಗಳು ಸರ್ಕಾರದಲ್ಲಿ ಖಾಲಿ ಇರತಕ್ಕ ಹುದ್ದೆಗಳ ಸಂಖ್ಯೆ ೪೫,೯೩೫. ಇದುವರೆಗೆ ನೇರ ನೇಮಕಾತಿ ಆದಂತಹ ಹುದ್ದೆಗಳ ಸಂಖ್ಯೆ ೨೬,೬೬೪. ಹಾಲಿ ಖಾಲಿ ಇರತಕ್ಕ ಹುದ್ದೆಗಳ ಸಂಖ್ಯೆ ೧೯,೨೭೧. ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಯಾವ ಪ್ರಯತ್ನವನ್ನು ಮಾಡಿದ್ದೀರಿ? ಇಷ್ಟೊಂದು ಸಂಖ್ಯೆಯಲ್ಲಿ ಖಾಲಿ ಹುದ್ದೆಗಳನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ? ಈಗ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸಿದ್ದೀರಿ ನೀವು ಏರಿಸಿದ್ದರಿಂದ ಏನು ಪ್ರಯೋಜನವಾಯಿತು? ನೀವು ಪ್ರತಿಯೊಬ್ಬರಿಗೂ ನೌಕರಿಯನ್ನು ಕೊಡುತ್ತೇವೆಂದು ಬೇರೆ ಹೇಳಿದ್ದೀರಿ. ಪ್ರತಿವರ್ಷ ಸಾವಿರಾರು ಜನ ಪದವೀಧರರು ಬರುತ್ತಿದ್ದಾರೆ, ಸ್ನಾತಕೋತ್ತರ ಪದವೀಧರರು ಪ್ರತಿ ವರ್ಷ ಬರುತ್ತಿದ್ದಾರೆ ಇನ್ನಿತರ ಉಚ್ಚ ಶಿಕ್ಷಣ ಪಡೆದುಕೊಂಡು ಸಾವಿರಾರು ಜನ ಪ್ರತಿ ವರ್ಷ ಬರುತ್ತಿದ್ದಾರೆ, ಅಂತಹವರಿಗೆ ನೀವು ಕೆಲಸವನ್ನು ಕೊಡಲೇ ಬೇಕು. ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಮೂರು ವರ್ಷ ಜಾಸ್ತಿ ಮಾಡಿದ್ದೀರಿ. ಪ್ರತಿ ವರ್ಷ ೧೦ ರಿಂದ ೧೫ ಸಾವಿರ ಸರ್ಕಾರಿ ನೌಕರರು ನಿವೃತ್ತಿಯಾಗುತ್ತಿದ್ದರು. ಮೂರು ವರ್ಷಗಳಿಗೆ ೩೬ ಸಾವಿರ ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಅವಕಾಶವಾಗುತ್ತಿತ್ತು. ಇವತ್ತು ಯುವಕರು, ಪದವೀಧರರು, ಸ್ನಾತಕೋತ್ತರ ಪದವೀಧರರು ಕೆಲಸವಿಲ್ಲದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಅಂತಹವರಿಗೆ ನೀವು ಯಾವ ಅವಕಾಶವನ್ನು ಮಾಡಿಕೊಟ್ಟಿದ್ದೀರಿ? ನೀವು ಹೊಸಬರಿಗೆ ಅವಕಾಶ ಮಾಡಿಕೊಡದೆ, ಈಗ ಹಾಲಿ ಕೆಲಸದಲ್ಲಿರುವವರಿಗೆ ಅವಕಾಶ ಮಾಡಿಕೊಟ್ಟರೆ ಹೇಗಾಗುತ್ತದೆ? ೫೫ ವರ್ಷಗಳಿಗೆ ನಿವೃತ್ತಿಯಾಗುತ್ತಿದ್ದವರು ನಮಗೆ ೫೮ ವರ್ಷ ಮಾಡಿಯೆಂದು ಕೇಳಬಾರದು. ಅವರು ನಿವೃತ್ತಿ ಜೀವನವನ್ನು ಅನುಭವಿಸಬೇಕು, ಅಂತಹವರು ಪುನಃ ನಮ್ಮನ್ನು ಮುಂದುವರಿಸಿ ಎಂದು ಕೇಳಿದರೆ, ಕೆಲಸ ಇಲ್ಲದೇ ಅಲೆಯುವವರಿಗೆ ಜವಾಬು ಅವರೆ ಹೇಳಬೇಕಾಗುತ್ತದೆ. ಟೆಂಪರರಿ ನೌಕರರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ Temporary employees have no right to posts.'' ಎಂದು ಟೆಂಪರರಿ ಅಪಾಯಿಂಟ್‌ಮೆಂಟ್ಸ್‌ನಲ್ಲಿ ಸಾವಿರಾರು ಜನರು ಇದ್ದಾರೆ. ಸುಮಾರು ೧೬–೧೭ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ೬ ಸಾವಿರ ಜನ ಪದವೀಧರರು ಇದ್ದಾರೆ. ಅಂತಹವರಿಗೆ ನೀವು ಕೆಲಸ ಕೊಡುತ್ತೇವೆಂದು ಚುನಾವಣೆ ಬಂದಾಗ ಅವರಿಂದ ಪಾರ್ಟಿಯ ಕೆಲಸ ಮಾಡಿಸಿಕೊಂಡು ನೀವು ಅಧಿಕಾರಕ್ಕೆ ಬಂದಿದ್ದೀರಿ ಅವರಿಗೆ ನೀವು ಯಾವ ರೀತಿ ಕೆಲಸ ಕೊಡುತ್ತೀರಿ? ರಾಜ್ಯಾಂಗದ ಆರ್ಟಿಕಲ್ ೩೦೯ರ ಪ್ರಕಾರ ನೀವು ನಿಯಮಗಳನ್ನು ಮಾಡಲೇಬೇಕು.

೨-೩೦ ಪಿ. ಎಂ.

ನಿಯಮಾವಳಿ ಪ್ರಕಾರ ಅವರನ್ನು ನೇಮಿಸಬೇಕು. ಆದರೆ ನೇಮಿಸುವಾಗ ಹಿಂದುಳಿದವರಿಗೆ ಏನು ಮೀಸಲಾತಿ ನೀಡಬೇಕೆಂದು ನಿಗದಿ ಮಾಡಿದ್ದಾರೆ ಅದನ್ನು ಬಿಟ್ಟು ಹೋಗುತ್ತಿದ್ದೀರಿ. ೨೬ ಸಾವಿರ ಜನರಿಗೆ ಹೇಗೆ ಕೆಲಸ ಕೊಡುತ್ತೀರಿ ? ಕೆಲಸ ಇಲ್ಲದವರಿಗೆ ವರ್ಷಂಪ್ರತಿ ತಯಾರಾಗತಕ್ಕ ಸಾವಿರಾರು ಜನ ಪದವೀಧರರಿಗೆ ಯಾವ ರೀತಿ ಕೆಲಸ ಕೊಡುತ್ತೀರಿ ? ಆ ರೀತಿ ಅವರಿಗೂ ಕೊಡುತ್ತೇವೆಂದು ಹೇಳುವವರು ಕೆಲಸದಲ್ಲಿರತಕ್ಕ ಅಧಿಕಾರಿಗಳಿಗೆ ೫೫ ರಿಂದ ೫೦೦ಕ್ಕೆ ಬಡ್ತಿ ನೀಡಿ ಏನು ಖಾಲಿ ಹುದ್ದೆ ಬೀಳುತ್ತಿತ್ತು ಅದನ್ನು ತಪ್ಪಿಸುವ ಪ್ರವೃತ್ತಿ ಇದೆ ಇದು ಯಾವ ನ್ಯಾಯ ? ನಿಮ್ಮ ಉದ್ದೇಶ ಏನು ? ನಮ್ಮ ರಾಜ್ಯಕ್ಕೆ ಸೇವೆ ಮಾಡಬೇಕೆಂದು ನಿಮ್ಮ ಮನಸ್ಸು ಸುಮ್ಮನೆ ಬೂಟಾಟಿಕೆ ಮಾಡುತ್ತಿದೆಯೇ ಹೊರತು ಜನರಿಗೆ ಸಹಾಯ ಮಾಡಬೇಕು, ಪದವೀಧರರಿಗೆ ನೌಕರಿ ಇಲ್ಲದವರಿಗೆ ಸಹಾಯ ಮಾಡಬೇಕೆಂಬ ಉದ್ದೇಶ ನಿಮ್ಮಲ್ಲಿ ಇಲ್ಲವೆಂದು ಇದರಿಂದ ಸ್ಪಷ್ಟವಾಗುತ್ತಿದೆ. ಹಿಂದಿನ ಸರ್ಕಾರದವರು ಹಾಗೆ ಮಾಡಿದ್ದಾರೆ. ಹೀಗೆ ಮಾಡಿದ್ದಾರೆಂದು ಏನು ಆರೋಪಣೆ ಮಾಡುತ್ತಿದ್ದೀರಿ, ಅದೇ ತಪ್ಪನ್ನು ನೀವೂ ಮಾಡಿದರೆ ನಮಗೆ ಏನು ಪರಿಣಾಮ ಆಯಿತು ಅದೇ ಪರಿಣಾಮ ನಿಮಗೂ ಆಗುತ್ತದೆ. ಇವತ್ತಿನ ದಿವಸ ಇಷ್ಟು ಜನರಿಗೆ ಅವಕಾಶ ಕೊಡ ಹಾಗೆ, ಸರ್ಕಾರೀ ನೌಕರಿಗೆ ಸೇರದ ಹಾಗೆ ಮಾಡತಕ್ಕದ್ದು ಸರಿಯಲ್ಲವೆಂದು ಹೇಳುತ್ತಿದ್ದೇನೆ. ಐ. ಎ. ಎಸ್, ಅಧಿಕಾರಿಗಳು, ಕೆ. ಪಿ. ಎಸ್. ಅಧಿಕಾರಿಗಳು, ಐ. ಪಿ. ಎಸ್. ಅಧಿಕಾರಿಗಳು ಏನಿದ್ದಾರೆ ಅವರಲ್ಲಿ ಐ. ಎ. ಎಸ್. ಅಧಿಕಾರಿಗಳು ಬಹಳ ಬೃಹಸ್ಪತಿಗಳು, ಯಾವ ಇಲಾಖೆಗೆ ಅವರನ್ನು ವರ್ಗ ಮಾಡಿದರೂ ಸಮರ್ಪಕವಾಗಿ ಕೆಲಸ ಮಾಡಿಕೊಂಡು ಹೋಗುತ್ತಾರೆಂಬುದು ನಿಮ್ಮ ಮನಸ್ಸಿನಲ್ಲಿ ಇದೆ. ಐ. ಎ. ಎಸ್. ಅಧಿಕಾರಿಗಳು ಅಖಿಲ ಭಾರತದ ಎಲ್ಲಾ ಪ್ರದೇಶಗಳಿಂದ ಬಂದಿರತಕ್ಕ ಜನ. ಅವರಲ್ಲಿ ಕೆಲವರಿಗೆ ಕನ್ನಡ ಗೊತ್ತಿದೆ, ಮತ್ತೆ ಕೆಲವರಿಗೆ ಗೊತ್ತಿರುವುದಿಲ್ಲ. ಯಾವುದೋ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬರುತ್ತಾರೆ. ಇವರಿಗೆ ಎಲ್ಲಾ ಇಲಾಖೆಯಲ್ಲಿ ಕೆಲಸ ಕೊಡುತ್ತೇವೆಂದು ಹೇಳತಕ್ಕದ್ದು ಅರ್ಥವಿಲ್ಲದ ಮಾತು. ಇವರನ್ನು ಕಾರ್ಖಾನೆಗಳಿಗೆ ಹಾಕುತ್ತಾರೆ, ಕಾರ್ಖಾನೆಗಳಿಗೆ ಹಾಕಿದರೆ ಇವರಿಂದ ಯಾವ ಕೆಲಸ ಮಾಡುವುದಕ್ಕಾಗುತ್ತದೆ. ಇವತ್ತು ಏನು ಕೈಗಾರಿಕೆಗಳಲ್ಲಿ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿದೆ ಅಂಥ ಕಡೆಗಳಿಗೆ ಐ. ಎ. ಎಸ್. ಅಧಿಕಾರಿಗಳನ್ನು ಹಾಕಿ ಅವರಿಂದ ಕೆಲಸ ನಿರೀಕ್ಷಣೆ ಮಾಡತಕ್ಕದ್ದು ಏನಿದೆ ಇದು ಬಹಳ ಅನರ್ಥವಾದುದು. ಈ ಕೆಲಸವನ್ನು ನಿಮ್ಮಲ್ಲಿ ಮಾಡಬೇಡಿ. ಪೋಲೀಸ್ ಇಲಾಖೆಯಲ್ಲಿ ಐ. ಪಿ. ಎಸ್. ಅಧಿಕಾರಿಗಳು ಏನಿದ್ದಾರೆ ಇವರು ನಿಷ್ಠೆಯಿಂದ ಆ ಇಲಾಖೆಯಲ್ಲಿ ಕೆಲಸ ಮಾಡಬಹುದು. ಆದರೆ ಅವರನ್ನು ಸಾರ್ವಜನಿಕ ಇಲಾಖೆಗೆ ವರ್ಗ ಮಾಡಿ ಐ. ಎ. ಎಸ್. ಮತ್ತು ಕೆ. ಎ. ಎಸ್. ಅಧಿಕಾರಿಗಳ ಕೆಲಸ ಮಾಡಬಹುದೆಂದು ಹೇಗೆ ನಿರೀಕ್ಷಣೆ ಮಾಡುತ್ತೀರಿ ? ತರಬೇತಿ ಇಲ್ಲದವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಕೆಲಸ ನಿರೀಕ್ಷಣೆ ಮಾಡುವುದರಲ್ಲಿ ಅರ್ಥ ಏನು ಇದೆ ? ಈ ಕೆಲಸ ಮಾತ್ರ ಮಾಡಬೇಡಿ. ೧೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಆಯಿತು. ಆದರಿಂದ ಆ ದೇಶ ಮುಂದೆ ಬಂತು. ಈ ದೇಶದಲ್ಲಿ ಅದೇ ರೀತಿ ಕೈಗಾರಿಕಾ ಕ್ರಾಂತಿ ಆಗದ ಹೊರತು ದೇಶ ಮುಂದೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅಂಥ ಪರಿಸ್ಥಿತಿ ಬರಬೇಕಾದರೆ ಅಂದರೆ ಕೈಗಾರಿಕಾ ಕ್ರಾಂತಿಯನ್ನು ಮಾಡಬೇಕೆಂದರೆ ಅಲ್ಲಿ ಐ. ಎ. ಎಸ್. ಅಧಿಕಾರಿಗಳನ್ನು ಹಾಕುವುದರಿಂದ ಸಾಧ್ಯವಿಲ್ಲ. ಐ. ಎ. ಎಸ್. ಅಧಿಕಾರಿಗಳನ್ನು ಎಲ್ಲಿಡಬೇಕೋ ಅಲ್ಲಿ ಇಡಿ. ಬೇರೆ ಭಾಗಕ್ಕೆ ಅವರನ್ನು ವರ್ಗಾವಣೆ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುತ್ತೇನೆ. ಹಾಗೂ ಮಾಡುತ್ತೇವೆಂದರೆ ಮಾಡಿ. ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಇಲಾಖೆಯಲ್ಲಿ ಐ. ಎ. ಎಸ್. ಅಧಿಕಾರಿಗಳಿಗೆ, ಕೆ. ಎ. ಎಸ್. ಅಧಿಕಾರಿಗಳಿಗೆ ಏನು ಸ್ಥಾನಮಾನ ಕೊಟ್ಟಿದ್ದೀರೆಂದು ಅರ್ಥವಾಗಿಲ್ಲ. ಅವರ ಸ್ಥಿತಿಗತಿ ಏನಾಗಿದೆ ? ಜಿಎಡಿ. ಯಲ್ಲಿ ಅವರ ಹಣೇಬರಹವನ್ನು ವಿರೋಧವಾಗಿ ಬರೆದರೆ ಅದರ ಪರಿಣಾಮ ಇನ್ನೊಂದು ಕಡೆ ಇನ್ನೊಂದು ರೀತಿ ಆಗುತ್ತದೆ. ಅವರಿಗೆ ಏನು ಸ್ಥಾನಮಾನಗಳು ಇವೆ ? ಪ್ರೊಬೇಷನರ್ಸ್ ಎಂದು ತೀರ್ಮಾನವಾಗಲು ಎಷ್ಟು ದಿನಬೇಕು ? ನನಗೆ ಒಂದು ದಿನದ ಕೆಲಸ. ನಿಮಗೆ ಬಹಳ ದಿನಗಳಿಂದ ಇದೇ ಕೆಲಸವಾಗಿದೆ. ಯಾರ್ಯಾರು ಕೆ ಎ. ಎಸ್. ಅಧಿಕಾರಿಗಳು ಎಂದು ನೋಟ್ ಆಗಿದ್ದಾರೆ. ಅವರು ಪ್ರೊಬೇಷನರ್ಸ್ ಮತ್ತು ಪ್ರೊಮೋಟೀಸ್ ಲಿಸ್ಟ್‌ನಲ್ಲಿ ಬರುತ್ತಾರೆಂದು ಸ್ಪಷ್ಟವಾಗಿ ಹೇಳುತ್ತೇನೆ. ಸುಪ್ರೀಂ ಕೋರ್ಟ್ ತೀರ್ಪನ್ನು ನಾನು ನೋಡಿದ್ದೇನೆ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ

ಮಾಡಬೇಕು. ಇವತ್ತು ಚೀಫ್ ಸೆಕ್ರೆಟರಿ, ಅಡಿಷನಲ್ ಚೀಫ್ ಸೆಕ್ರೆಟರಿ ಆಗಿರತಕ್ಕವರೆಲ್ಲ ಜಿ.ಎ.ಡಿ. ಯಲ್ಲಿ ಕೆಲಸ ಮಾಡಿರತಕ್ಕವರು. ನಮಗೆ ಇವತ್ತು ರಾಜ್ಯಾಂಗದ ಕೆಳಗೆ ಮಾಡಿರತಕ್ಕ ನಿಯಮಾವಳಿಗಳು ಇವೆ. ಅದನ್ನು ಬಿಟ್ಟು ಬೇರೆ ನಿಯಮಾವಳಿ ಮಾಡುವುದು ಸರಿಯಲ್ಲ. ಕೆಲವು ಇಲಾಖೆಗಳಲ್ಲಿ ನಿಯಮಾವಳಿಗಳನ್ನು ಮಾಡಿಲ್ಲ. ಎಸ್. ಸಿ. ಸಿ. ಯಲ್ಲಿ, ಹೈಕೋರ್ಟಿನಲ್ಲಿ ಇದುವರೆಗೆ ನಿಯಮಾವಳಿಗಳನ್ನು ಮಾಡಿಲ್ಲ ಸರ್ಕಾರದಲ್ಲಿ ಎಷ್ಟೆಷ್ಟು ಮಾಡಿದ್ದಾರೋ ಗೊತ್ತಿಲ್ಲ. ಕೆಲವು ವರ್ಷಗಳ ಹಿಂದೆ ಹೈಕೋರ್ಟಿನಲ್ಲಿ ನೌಕರರಿಗೆ ಸಂಬಂಧಪಟ್ಟ ನಿಯಮಾವಳಿಗಳನ್ನು ಮಾಡದೆ ಸ್ವೇಚ್ಛೆಯಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದರು. ಇಂಥ ಪರಿಸ್ಥಿತಿ ಇರುವಾಗ ಇದರ ಬಗ್ಗೆ ಸೂಕ್ಷ್ಮವಾಗಿ ಗಮನ ಕೊಡಬೇಕು. ಸರ್ವೀಸ್ ಮ್ಯಾಟರ್ಸ್ ಬಗ್ಗೆ ಬಹಳ ಇಲಾಖೆಗಳಲ್ಲಿ ವಿಭಾಗಗಳನ್ನು ಮಾಡಿ ಒಳ್ಳೆಯ ಕೆಲಸ ಮಾಡಿದ್ದೀರಿ. ಆದರೆ ಆಯಾಯ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ವಿಭಾಗಗಳು ಏನಿವೆ ಅಲ್ಲಿ ಕೆಲವರನ್ನು ನೇಮಿಸಿದರೆ ನೀವು ಈ ದೇಶಕ್ಕೆ ನ್ಯಾಯ ಕೊಡುವುದಕ್ಕೆ ಸಾಧ್ಯವಿಲ್ಲ, ನೌಕರರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವಿಲ್ಲ. ಯಾರು ಅವರ ಜಾತಿಯವರ, ನೆಂಟರು, ಮಿತ್ರರು ಇರುತ್ತಾರೆ ಅಂಥವರಿಗೆ ನ್ಯಾಯ ಸಿಗುತ್ತದೆಯೇ ಹೊರತು ಬೇರೆಯವರಿಗೆ ಸಿಗುವುದಿಲ್ಲವೆಂಬುದು ನನ್ನ ಅನುಭವ. ಇಲಾಖೆಗಳಲ್ಲಿ ಒಂದೇ ಜಾತಿಯವರನ್ನು ಏತಕ್ಕೆ ಹಾಕುತ್ತೀರಿ ? ಜಾತಿ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಜಾತಿಗಳು ಇವೆ. ಒಂದೇ ಜಾತಿ ಅಧಿಕಾರಿಗಳನ್ನು ಒಂದೇ ಇಲಾಖೆಯಲ್ಲಿಡುವುದರಿಂದ ದೇಶಕ್ಕೆ ನ್ಯಾಯ ಸಿಗುವುದಿಲ್ಲ. ಯಾರು ಬಡವರಿದ್ದಾರೆ ಅವರಿಗೆ ನ್ಯಾಯ ಸಿಗುವುದಿಲ್ಲ. ಯಾರು ಬಡವರಿದ್ದಾರೆ, ನಿರ್ಗತಿಕರಿದ್ದಾರೆ. ಯಾರು ಸಮಾಜದ ಹೊರೆ ಹೊತ್ತು ತುಳಿತಕ್ಕೆ ಒಳಗಾಗಿದ್ದಾರೆ ಅವರಿಗೆ ಹೇಗೆ ಅಧಿಕಾರ ಬರುತ್ತದೆ, ಸ್ವಾತಂತ್ರ್ಯ ಬರುತ್ತದೆ ? ಎಡ್ಮಂಡ್ ಬರ್ಕ್ ಅವರು ಒಂದು ಮಾತು ಹೇಳಿದ್ದಾರೆ. "People crushed by law and religion have no hopes but from power." ಎಂದು ಅಂದರೆ ಯಾರು ಜಾತಿಯ ಮಟ್ಟಿಗೆ ತುಳಿತಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ ಅಂಥ ಜನಗಳು ಅಧಿಕಾರಕ್ಕೆ ಬರದಿದ್ದರೆ ನ್ಯಾಯ ಸಿಕ್ಕುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಒಂದು ಇಲಾಖೆಯಲ್ಲಿ ಒಂದು ಜಾತಿಯವರನ್ನು ಇಟ್ಟು ಎಲ್ಲರ ಯೋಗಕ್ಷೇಮ ನೋಡಿಕೊಳ್ಳುತ್ತೇವೆಂದು ಹೇಳುವುದು, ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿಕೊಳ್ಳತಕ್ಕದ್ದು ಉದ್ಧಟತನ. ಅವರು ನಮ್ಮೆಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆಂದು ಹೇಳಶಕ್ಕದ್ದು ಎಂತಹ ಉದ್ಧಟತನ ? ಯಾವ ಯಾವ ವಿಭಾಗಗಳಲ್ಲಿ ನ್ಯಾಯ ದೊರಕಬೇಕೆಂದು ಹೇಳುತ್ತಾರೆ ಅಂಥ ಕಡೆ ಯಾರು ಸಮ್ಮ ವರ್ಗದವರಿದ್ದಾರೆ, ಹಿಂದುಳಿದವರಿದ್ದಾರೆ, ಅಲ್ಪಸಂಖ್ಯಾತರು ಇದ್ದಾರೆ ಅಂಥವರ ಕೈಗೆ ಅಧಿಕಾರ ಕೊಡಿ. ಸರ್ಕಾರೀ ನೌಕರರಲ್ಲಿ ಯಾರಿಗೆ ಅಲ್ಲಿ ಪ್ರವೇಶ ಇಲ್ಲ ಅಂಥವರಿಗೆ ಅಲ್ಲಿ ಪ್ರವೇಶ ಕೊಡಿ ಆಗ ನ್ಯಾಯ ದೊರೆಯುತ್ತದೆ. ಸಾವಿರಾರು ವರ್ಷಗಳಿಂದ ಅಧಿಕಾರದಲ್ಲಿದ್ದಾವರಿಗೆ ಅಧಿಕಾರ ಕೊಟ್ಟು ಅವರಿಂದ ನ್ಯಾಯ ಬರಬೇಕೆಂದರೆ ಯಾವ ರೀತಿ ಬರುತ್ತದೇ ಅವರು ಅವರ ಜಾತಿಯವರ ಯೋಗಕ್ಷೇಮ ನೋಡುತ್ತಿರುತ್ತಾರೆ ದೇಶದಲ್ಲಿ ಒಳ್ಳೆಯ ಸಮಾಜ ಬೆಳೆಯಬೇಕು ದೇಶ ಪರಿವರ್ತನೆ ಆಗಬೇಕೆಂಬ ಉದ್ದೇಶ ಇದ್ದರೆ ಎಲ್ಲ ಜಾತಿಯವರನ್ನು ಮಿಶ್ರ ಮಾಡಬೇಕು, ಅಲ್ಲಿ ಒಂದೇ ಜಾತಿ ಇಲ್ಲದ ಹಾಗೆ ಎಲ್ಲ ಇಲಾಖೆಗಳಲ್ಲಿ ಮಾಡಿದರೆ ನ್ಯಾಯ ದೊರಕುತ್ತದೆ ಇಲ್ಲದಿದ್ದರೆ ಆಗುವುದಿಲ್ಲ.

ತಾವು ಸೆಂಟ್ರಲ್ ಸ್ಟೇಟ್ ರಿಲೇಷನ್‌ಷಿಪ್ ಬಗ್ಗೆ ಒಂದು ಹೊತ್ತಿಗೆಯನ್ನು ಕೊಟ್ಟಿದ್ದೀರಿ. ಅದನ್ನು ನಾನು ಓದಿದ್ದೇನೆ ಅದರಲ್ಲಿ ಹಲವಾರು ಸಲಹೆಗಳನ್ನು ಹೇಳಿದ್ದೀರಿ. ನಾನು ಕೂಡ ಇದರ ಬಗ್ಗೆ ಸರ್ಕಾರಿಯಾ ಕಮಿಷನ್‌ನವರಿಗೆ ವರದಿ ಮಾಡಿದ್ದೇನೆ. ಇದರ ಪ್ರಕಾರ ಯಾರು ಬಡವರಾಗಿದ್ದಾರೆ ಅವರ ಬಗ್ಗೆ ನಾನು ಒಂದು ವರದಿಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಅದನ್ನು ಅಳವಡಿಸಿಕೊಂಡು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಹೇಳುತ್ತೇನೆ. ಅದರ ಪ್ರಕಾರ ಆರ್ಟಿಕಲ್ ೨೭೫ (೧), ೨೪೪ರಲ್ಲಿ ಐದನೇ ಮತ್ತು ಆರನೇ ಷೆಡ್ಯೂಲ್. ೩೪೨ (೨) ಮತ್ತು ೧೯(೫)ರಲ್ಲಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಪದ್ಧತಿ ಇದೆ, ರಾಜ್ಯಾಂಗದಲ್ಲಿ ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಏನು ಅಳವಡಿಸಿದ್ದಾರೆ ಅಂಥ ಒಂದು ಪದ್ಧತಿಯನ್ನು ಅಳವಡಿಸತಕ್ಕ ಕಾರ್ಯಕ್ರಮವನ್ನು ಅನುಸೂಚಿತ ಜಾತಿಗಳೇನಿದ್ದಾರೆ ಇವರಿಗೂ ಅಳವಡಿಸಬೇಕು. ಇವರ ಉದ್ಧಾರವಾಗಬೇಕಾದರೆ ಇದನ್ನು ಮಾಡಬೇಕು. ಮತ್ತೆ ಆ ಆರ್ಟಿಕಲ್‌ಗಳಲ್ಲಿ ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಯಾವ ರೀತಿಯಾದ ಒಂದು ಮೆಷಿನರಿಯನ್ನು ಇಟ್ಟುಕೊಂಡಿದ್ದಾರೆ ಅಂಥದ್ದೇ ಮೆಷಿನರಿಯನ್ನು ಇಂಡಿಯಾ ದೇಶದ ತುಂಬ ಸ್ಥಾಪನೆ ಮಾಡಬೇಕು. ಇವರು ಅತಿ ಜಾಗ್ರತೆಯಾಗಿ ಬೇರೆ ಸಮಾಜದ ಜೊತೆ ಸರಿಸಮಾನರಾಗಿ ಇರುವಂಥ ಭಾವನೆ ಬರುವ ಹಾಗೆ ನಾವು ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ಸಲಹೆ

ಇತ್ತಿದ್ದೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದನ್ನು ಸರ್ಕಾರಿಯಾ ಕಮಿಷನ್‌ರವರಿಗೆ ಕಳುಹಿಸಿಕೊಡಬೇಕೆಂದು ಹೇಳುತ್ತಿದ್ದೇನೆ. ಸರ್ಕಾರಿ ನೌಕರರ ಬಗ್ಗೆ ಕೆಲವು ಮಾತು ಹೇಳಬೇಕು. ಕರ್ನಾಟಕದಲ್ಲಿ ಸರ್ಕಾರಿ ನೌಕರರು ಎಷ್ಟಿದ್ದಾರೆ? ಎರಡು ವರ್ಷಗಳ ಹಿಂದೆ ೮೦ ಸಾವಿರ ಜನ ಇದ್ದರು. ಈಗ ನಾಲ್ಕು ಲಕ್ಷ ಜನ ಇದ್ದಾರೆಂದು ಇಟ್ಟುಕೊಳ್ಳೋಣ. ಇವರಿಗೆ ಒಂದು ವರ್ಷಕ್ಕೆ ಎಷ್ಟು ಸಂಬಳ ಕೊಡುತ್ತಿದ್ದಾರೆ? ೪೮೦ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಒಬ್ಬೊಬ್ಬ ಅಧಿಕಾರಿಗೆ ನೌಕರನಿಗೆ ಸಂಪಾರು ಒಂದು ಸಾವಿರ ರೂಪಾಯಿಯಾದರೂ ಸರಾಸರಿ ಕೊಡುತ್ತಿದ್ದೇವೆ ರೈತರೇ ಇರತಕ್ಕ ಈ ಸಮಾಜದಲ್ಲಿ ನಾನು ಅವರಿಗೆ ಸಂಬಳ ಕೊಡಬಾರದು ಎಂದು ಹೇಳುತ್ತಿಲ್ಲ. ಸುಖವಾಗಿ-ರಬಾರದು ಎಂದು ಹೇಳುತ್ತಿಲ್ಲ. ಇವರು ನಾಲ್ಕು ಲಕ್ಷ ಜನರಿದ್ದರೆ ಕರ್ನಾಟಕದಲ್ಲಿ ೩ ಕೋಟಿ ೭೦ ಲಕ್ಷ ಜನರಿದ್ದಾರೆ. ೩ ಕೋಟಿ ೬೬ ಲಕ್ಷ ಬಡವರಿದ್ದಾರೆ. ಅವರೆಲ್ಲಾ ಸರ್ಕಾರಿ ನೌಕರಿಗೆ ಸೇರಿಲ್ಲ. ಅವರಲ್ಲಿ ಎಲ್ಲ ಜಾತಿಯವರೂ ಇದ್ದಾರೆ, ನಿರ್ಗತಿಕರಿದ್ದಾರೆ, ಗತಿಕರು ಇದ್ದಾರೆ. ಇವರ ಜೀವನಮಟ್ಟ ಏನಿದೆ. ಸರ್ಕಾರಿ ನೌಕರರ ಜೀವನಮಟ್ಟ ಏನಿದೆ ಎಂಬುದನ್ನು ನೋಡಬೇಕಾಗಿದೆ. ನಾನು ಇವರಿಗೆ ಸಂಬಳ ಕೊಡಬಾರದು ಎಂದು ಹೇಳುತ್ತಿಲ್ಲ. ಆದರೆ ಅಧಿಕಾರಿಗಳ ಮನಸ್ಸಿನಲ್ಲಿ ಏನು ಬರಬೇಕು ಎಂದರೆ ೩ ಕೋಟಿ ೬೬ ಲಕ್ಷ ಜನ ಕರ್ನಾಟಕದಲ್ಲಿ ಏನಿದ್ದಾರೆ ಅವರ ಬಾಳು, ಜೀವನ, ಕಷ್ಟ ಸುಖಗಳು ಏನಿವೆ ಅದರ ಬಗ್ಗೆ ಯೋಚನೆ ಮಾಡಲೇಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಅವರ ಯೋಗಕ್ಷೇಮದ ಕೆಲಸ ಮಾಡಲೇಬೇಕಾಗುತ್ತದೆ. ಅವರ ಉದ್ಧಾರದ ಬಗ್ಗೆ ಶ್ರಮಿಸಬೇಕಾಗುತ್ತದೆ. ಅದನ್ನು ಬಿಟ್ಟು ನೌಕರಿ ಸೇರಿದ ತಕ್ಷಣ ಷ್ಯೂರಿಟಿ ಬಂತು, ಸಂಬಳ ಬಂತು. ನಮ್ಮನ್ನು ಡಿಸ್‌ಮಿಸ್ ಮಾಡುವಹಾಗಿಲ್ಲ ಎಂದು ಇವರ ಬಗ್ಗೆ ಯೋಚನೆ ಮಾಡದೇ ಇರುವುದು ಸರಿಯಲ್ಲ. ಸುಪ್ರೀಂ-ಕೋರ್ಟಿನವರು ಈಗ ಡಿಸ್‌ಮಿಸ್ ಮಾಡಬಹುದು ಎಂದು ಮಾಡಿದ್ದಾರೆ. ಇವರಿಗೆ ಖಾಯಂ ಆಗಿರತಕ್ಕ ನೌಕರಿ ಕೊಟ್ಟು, ಖಾಯಂ ಆಗಿರತಕ್ಕ ಆದಾಯ ಕೊಟ್ಟು ೩ ಕೋಟಿ ೬೬ ಲಕ್ಷ ಜನರ ಯೋಗಕ್ಷೇಮದ ಕಡೆಗೆ, ಅಭಿವೃದ್ಧಿ ಕಡೆಗೆ ಕೆಲಸ ಮಾಡದೇ ಹೋದರೆ ಹೇಗೆ? ದಿನಾ ಇವರ ಗೋಳು ಕೇಳ್ತಾ ಇರೋದಾ? ಈ ನಾಲ್ಕು ಲಕ್ಷ ಜನರ ಗೋಳು ದಿನಾ ಪೇಪರ್‌ನಲ್ಲಿ ಬರುತ್ತದೆ. ದಿವಸಾ ಇವರದೇ ಗೋಳಿದೆ. ೩ ಕೋಟಿ ೬೬ ಲಕ್ಷ ಜನರ ಗೋಳು ಯಾರು ಕೇಳುವುದು? ಇವರು ಯಾವ ಪೇಪರ್‌ನವರ ಹತ್ತಿರ ಹೋಗಿದ್ದಾರೆ? ಪೇಪರ್‌ನವರು ಇವರ ಗೋಳನ್ನು ಪ್ರಕಟಣೆ ಮಾಡುತ್ತಾರಾ? ಇದು ಅಸಂಗತವಾಗಿರತಕ್ಕ ಸಮಾಜದ ನಿಲುವಾಗಿದೆ. ಇದನ್ನು ಸರಿಪಡಿಸಲೇಬೇಕು. ಸರ್ಕಾರಿ ನೌಕರರಲ್ಲಿ ಗುಮಾಸ್ತರಿಗೆ ಒಂದು ಸಂಘ, ಪ್ಯೂನ್‌ಗಳಿಗೆ ಒಂದು ಸಂಘ, ಅಸಿಸ್ಟೆಂಟ್ ಕಮಿಷನರ್‌ಗೆ ಒಂದು ಸಂಘ, ಪಿ.ಡಬ್ಲ್ಯು. ಡಿ. ಇಲಾಖೆಯಲ್ಲಿ ಒಂದು ಸಂಘ ಹೀಗೆ ಎಷ್ಟು ಇಲಾಖೆಗಳು ಇವೆ. ಎಷ್ಟು ದರ್ಜೆ ನೌಕರರಿದ್ದಾರೆ. ಒಂದೊಂದು ದರ್ಜೆಗೆ ಒಂದೊಂದು ಸಂಘವನ್ನು ಮಾಡುವುದಕ್ಕೆ ಸರ್ಕಾರ ಉತ್ತೇಜನ ಕೊಟ್ಟರೆ ಹೇಗೆ ನಡೆಯುತ್ತದೆ? ಪ್ರತಿ ದಿವಸ ಸರ್ಕಾರಿ ಸಂಘಗಳ ನಿವೇದನೆಗಳನ್ನು ಓದಿ ಬಿಟ್ಟು ಅದಕ್ಕೆ ಪರಿಹಾರಗಳನ್ನು ಮಾಡಬೇಕಾಗುತ್ತದೆ. ಈ ನಾಲ್ಕು ಲಕ್ಷ ಜನಗಳ ಉದ್ಧಾರ, ಯೋಗಕ್ಷೇಮ ಬಿಟ್ಟು ಏನೂ ಮಾಡುವ ಹಾಗೇ ಇಲ್ಲ. ಸಾರ್ವಜನಿಕರ ಯೋಗಕ್ಷೇಮ ಮತ್ತು ಅವರ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕೆಲಸ ಮಾಡುವುದಕ್ಕೆ ತಾವು ಒತ್ತಾಯ ಮಾಡಬೇಕೆಂದು ಹೇಳುತ್ತಿದ್ದೇನೆ. ಮೀಸಲಾತಿ ಮತ್ತು ಮೀಸಲಾತಿ ವಿರುದ್ಧದ ಕೂಗು ಎದ್ದಿರುವು-ದನ್ನು ನೋಡುತ್ತಿದ್ದೇವೆ. ಬಹಳ ಸಂತೋಷ. ಕಾರಣವೇನೆಂದರೆ ಮೀಸಲಾತಿ ಬೇಡ ಎಂಬ ಜನ ಇದ್ದಾರೆ ಎಂದು ಮೀಸಲಾತಿ ಏತಕ್ಕೆ ಬೇಕು ಎಂದು ಹೇಳುತ್ತಿದ್ದಾರೆ. ಬಹಳ ವರ್ಷಗಳ ಪರ್ಯಂತ ಸಂಕಷ್ಟಕ್ಕೆ ಸಿಕ್ಕಿಹಾಕಿಕೊಂಡು ಸರ್ಕಾರಿ ನೌಕರಿಗೆ ಬರದ ಹಾಗೆ ಏನೇನು ಆತಂಕಗಳಿತ್ತು, ಅದಕ್ಕೆ ಸಿಕ್ಕಿ ಹಾಕಿಕೊಂಡಿರತಕ್ಕವರಿಗೆ ಸಹಾಯ ಮಾಡಬೇಕೆಂದು ರಾಜ್ಯಾಂಗದಲ್ಲಿ ಮೀಸಲಾತಿ ಮಾಡಿದ್ದಾರೆ. ಇದನ್ನು ಸಹಿಸಲಾರದೆ ಕೆಲವು ಜನ ಯಾರು ಸರ್ಕಾರಿ ನೌಕರಿಯಲ್ಲಿ ಶೇಕಡ ೬೦–೭೦ ಪರ್ಸೆಂಟ್ ಇದ್ದಾರೆ ಅವರು ಕೂಗು ಎಬ್ಬಿಸಿದ್ದಾರೆ. ಎಲ್ಲ ಅವರಿಗೆ. ಅವರ ಮಕ್ಕಳು ಮೊಮ್ಮಕ್ಕಳಿಗೆ ಅವರ ಸಂಬಂಧಿಗಳಿಗೆ, ಅವರ ಜಾತಿಯವರೆಗೇ ಬೇಕು ಎಂದು ಕೂಗು ಎಬ್ಬಿಸಿದ್ದಾರೆ. ನನಗಂತೂ ಬಹಳ ಸಂತೋಷ. ಕಾರಣ ಏನೆಂದರೆ ಮೀಸಲಾತಿ ಇರತಕ್ಕದ್ದು ಜನಸಂಖ್ಯೆ ಅನುಗುಣವಾಗಿ. ಅನುಸೂಚಿತ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಇದು ಇದೆ. ನಾನು ಹೇಳುತ್ತಿದ್ದೇನೆ, ಯಾರು ಕೂಗು ಮಾಡುತ್ತಿದ್ದಾರೆ, ಜನಸಂಖ್ಯೆ ಆಧಾರದ ಮೇಲೆ ಕೂಗು ಯಾರು ಮಾಡುತ್ತಿದ್ದಾರೆ ಅಂಥವರಿಗೆ ಮೀಸಲಾತಿ ಇಡಬೇಕು. ನಮಗೆ ಬೇಕಾಗಿಲ್ಲ. ನಾವು ನೋಡಿಕೊಳ್ಳುತ್ತೇವೆ ಆಮೇಲೆ. ಉಳಿದದ್ದು ಹೇಗೆ ಹಂಚಿಕೊಳ್ಳಬೇಕು

ಎಂಬುದನ್ನು ನೋಡಿಕೊಳ್ಳುತ್ತೇವೆ. ಯಾವ ಜಾತಿಯವರು ಮೀಸಲಾತಿ ಕೇಳುತ್ತಿದ್ದಾರೆ ಅವರ ಜಾತಿಗೆ ಅನುಗುಣವಾಗಿ ಮೀಸಲಾತಿ ಇಡಿ. ಗುಜರಾತಿನಲ್ಲಿ ಮೂರು ಜಾತಿಯವರು ಮೀಸಲಾತಿ ಬಗ್ಗೆ ಷಂರು ಮಾಡಿದರು. ನಾನು ಡೆಲ್ಲಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದೆ. ಆ ಮೂರು ಜಾತಿಯವರಿಗೆ ಜಾತಿಗೆ ಅನುಗುಣವಾಗಿ ರಿಸರ್ವ್ ಮಾಡಿ, ನಮಗೆ ಬೇಕಾಗಿಲ್ಲ ಎಂದು. ಬೇರೆಯವರ ಮೀಸಲಾತಿ ಬಗ್ಗೆ ಅವರಿಗೇತಕ್ಕೆ? ಅವರ ಜಾತಿಗೆ ಕೊಡಿ. ಇವತ್ತಿಗೂ ಹೇಳುತ್ತಿದ್ದೇನೆ ನಾನು. ರಾಮಕೃಷ್ಣ ಹೆಗಡೆಯವರಿಗೆ ನಾನು ವಂದನೆಯನ್ನು ಅರ್ಪಿಸಬೇಕು. I must congratulate him because he stood by his words, by the philosophy of reservation ಅದರ ಬಗ್ಗೆ ನಾವು ಕಂಗ್ರಾಚುಲೇಟ್ ಮಾಡಬೇಕು. ಅದು ಬೇರೆ ವಿಚಾರ. ಆದರೆ ಕರ್ನಾಟಕದಲ್ಲಿ ಯಾರು ಈ ಹೊಗೆ ಎಬ್ಬಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಯಾವ ಯಾವ ಜಾತಿಯವರು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇಡಿ ಎಂದು ಹೇಳುತ್ತಿದ್ದಾರೆ ಅವರಿಗೆ ಮೀಸಲಾತಿ ಇಡಿ ಎಂದು ಈ ವೇದಿಕೆಯಿಂದ ಹೇಳುತ್ತಿದ್ದೇನೆ. ಹೆಣ್ಣು ಮಕ್ಕಳಿದ್ದಾರೆ, ಅವರಿಗೆ ಕೊಡಿ. ಅವರು ಮುಂದೆ ಜಾಸ್ತಿ ಬರುತ್ತಿದ್ದಾರೆ. ನಮ್ಮ ಸಂಸ್ಥೆಯಲ್ಲಿ ನಾವು ಹೆಣ್ಣು ಮಕ್ಕಳನ್ನೇ ಜಾಸ್ತಿ ನಾವು ನೇಮಿಸುತ್ತಿದ್ದೇವೆ. ಈ ದೇಶ ಹೆಣ್ಣು ಮಕ್ಕಳ ಕೈಯಲ್ಲಿ ಹೋಗದ ಹೊರತು ಉದ್ಧಾರವಾಗುವುದಿಲ್ಲ ವೆಂಬ ಭಾವನೆ ನನ್ನದು. ಏಕೆಂದರೆ ಸಾವಿರಾರು ವರ್ಷಗಳಿಂದ ಗಂಡಸರೇ ಆಡಳಿತ ಮಾಡುತ್ತಿದ್ದೇವೆ.

ಶ್ರೀ ಮಲ್ಲಾರಗೌಡ ಎನ್. ಪಾಟಿಲ್ – ಮುಂದೆ ಇಬ್ಬರು ಕಲಿತಿದ್ದಾರೆ ಎಂದು ಹೇಳುತ್ತಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ – ಇದು ನನ್ನ ನಿರ್ಧಾರ ಮತ್ತು ಸಂಕಲ್ಪ. ಗಂಡಸರಿಂದ ಅನ್ಯಾಯ-ವಾಗಿದೆ. ಸ್ತ್ರೀಗೆ ಸ್ವಾತಂತ್ರ್ಯ ಇಲ್ಲ ಎಂದು ಮನು ಹೇಳಿದ್ದ. ಅವನು ಇದ್ದಾನೋ ಸತ್ತಿದ್ದಾನೋ ನಮಗೆ ಗೊತ್ತಿಲ್ಲ. ಅವರು ನೌಕರಿ ಮಾಡಬಾರದು, ಹೊಸಿಲು ಬಿಟ್ಟು ಬರಬಾರದು ಎಂದು ಗಂಡಸರು ನಿರ್ಬಂಧ ಹಾಕಿದ್ದರು. ಅವರು ಹೊಸಿಲಿನಿಂದ ಹೊರ ಬಂದು ಇವರನ್ನು ಹೊಸಿಲಿನೊಳಗೆ ಹಾಕಬೇಕು. ದೇಶದ ಆಡಳಿತ, ವ್ಯವಹಾರ ಎಲ್ಲಾ ಹೆಣ್ಣು ಮಕ್ಕಳ ಕೈಯಲ್ಲಿ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಾರಗೌಡ ಎನ್. ಪಾಟೀಲ್— ಅಧ್ಯಕ್ಷರೆ, ನಮ್ಮ ನಿಮ್ಮ ಪರಿಸ್ಥಿತಿ ಏನು?

ಶ್ರೀ ಬಿ. ಬಸವಲಿಂಗಪ್ಪ – ನಾವು ಆ ಕೆಲಸ ಮಾಡೋಣ. ಹೆಣ್ಣು ಮಕ್ಕಳ ಕೆಲಸ ಮಾಡೋಣ.

ಶ್ರೀ ವೇದಾಂತ ಹೆಮ್ಮಿಗೆ.—ಗಂಡಸರೆಲ್ಲಾ ಸೌಟನ್ನು ಹಿಡಿಯಬೇಕೆಂದೇ ನಿಮ್ಮ ಅರ್ಥವೇ ?

ಶ್ರೀ ಬಿ. ಬಸವಲಿಂಗಪ್ಪ.— ಮೀಸಲಾತಿ ಬಗ್ಗೆ ಹೇಳುತ್ತಿದ್ದೇನೆ. ಇವತ್ತು ಜಾತಿಗಳು ಹೋಗಬೇಕು. ಮೀಸಲಾತಿ ಎಂದಾದರೂ ಹೋಗಬೇಕು, ಅದು ಆದಷ್ಟು ಬೇಗ ಹೋಗಬೇಕು ಎನ್ನುವುದೂ ನನ್ನ ಉದ್ದೇಶವಾಗಿದೆ. ಪರಿಶಿಷ್ಟ ಜಾತಿಯವರಿಗೆ, ಪಂಗಡದವರಿಗೆ ಯಾವತ್ತು ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿ ಸಮಾಜದಲ್ಲಿ ನಾಗರೀಕರಾಗಿ ಅವರು ಫುಲ್ ಸಿಟಿಜನ್ ರೀತಿ ಜೀವನ ನಡೆಸುತ್ತಿದ್ದಾರೆ ಎನ್ನುವ ಭರವಸೆ ನಮ್ಮಲ್ಲಿ ಬಂದಾಗ ಈ ಅನುಸೂಚಿತ ಜಾತಿಗಳಿಗೆ ಮೀಸಲಾತಿ ಬೇಡ ಎಂದು ನಾನು ಈಗಲೂ ಹೇಳುತ್ತೇನೆ. ಅಂದು ಬ್ಯಾಕ್‌ವರ್ಡ್ ಕ್ಲಾಸ್‌ಗಳಿಗೂ ಮೀಸಲಾತಿ ಬೇಡ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಈ ಜಾತಿಯತೆ ತೊಡೆದು ಹಾಕಬೇಕಾದರೆ ಅಂತರ್ ಜಾತೀಯ ವಿವಾಹಗಳು ಹೆಚ್ಚು ಆಗಬೇಕು. ಬೇರೆಯವರು ಇವರನ್ನು ಮದುವೆಯಾಗಲು ಮುಂದೆ ಬಂದರೆ ಮಾಡಿ. ಅದಕ್ಕಾಗಿ ಏನೇನು ನಿಯಮಾವಳಿಗಳನ್ನು ಮಾಡಬೇಕೋ ಅವನ್ನು ಮಾಡಿ. ಈ ಬಗ್ಗೆ ಹೆಣ್ಣು ಮಕ್ಕಳು ಮನಸ್ಸು ಮಾಡದೇ ಹೋದರೆ ಆಗುವುದಿಲ್ಲ, ಇವತ್ತು .

ಉಪಾಧ್ಯಕ್ಷರು.—ನನ್ನ ಕಡೆ ನೋಡಿ ಹೇಳಿ. ಆ ಕಡೆ ಏಕೆ ನೋಡುತ್ತಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಏಕೆಂದರೆ ಅವರು ಟೈಮ್ ಬಾರ್ ಆಗಿದ್ದಾರೆ.. ಮಾನ್ಯ ಲಕ್ಷ್ಮೀ ಸಾಗರ್ ಅವರು......

ಉಪಾಧ್ಯಕ್ಷರು,—ನನ್ನ ಕಡೆ ತಾವು ನೋಡಿ ಎಂದು ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ,—ಮಾನ್ಯ ಲಕ್ಷ್ಮೀಸಾಗರ್ ಅವರು ಮದುವೆ ಆಗಬೇಕೆಂದು ಸದಸ್ಯರೆಲ್ಲರೂ ಹೇಳುತ್ತಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಅವರಿಗೆ ಟೈಮ್‌ಬಾರ್ ಆಗಿದೆ.

ಶ್ರೀ ಎಂ. ರಾಮಪ್ಪ.—ಇವತ್ತು ಲಕ್ಷ್ಮೀಸಾಗರ್ ಅವರಿಗೆ ಒಂದು ಕೂದಲೂ ಬೆಳ್ಳಗೆ ಆಗಿಲ್ಲ ಆದ್ದರಿಂದ ಅವರು ಮದುವೆ ಆಗುವುದರಲ್ಲಿ ತಪ್ಪೇನಿಲ್ಲ. ಆದರೆ ಮಾನ್ಯ ರಘುಪತಿಯವರಿಗೆ ಆ ರೀತಿ ಹೇಳುವುದಕ್ಕೆ ಆಗುವುದಿಲ್ಲ. ಆ ರೀತಿ ಹೇಳುವುದೂ ಅವರಿಗೆ ಒಪ್ಪುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಟೈಮ್ ಬಾರ್ ಆದಮೇಲೆ ಏನು ಮಾಡುತ್ತೀರಿ ? ಇವತ್ತು ಎಲ್ಲರೂ ಜಾತಿ, ಭಿನ್ನ-ಭಾವ ಇಲ್ಲದೇ ಮದುವೆಯಾದರೆ. ಮೀಸಲಾತಿ ಬಗ್ಗೆ ಪರ್ಯಾಲೋಚನೆ ಮಾಡೋಣ. ಮಾನ್ಯ ರಾಮಕೃಷ್ಣಹೆಗ್ಡೆಯವರು ಮುಖ್ಯಮಂತ್ರಿಗಳಾದಾಗ ಒಂದು ಸ್ಟೇಟ್‌ಮೆಂಟ್ ಮಾಡಿದರು. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ನಾನು ಬಹಳ ಗಮನ ಕೊಡುತ್ತೇನೆ. ಅವರ ಆರ್ಥಿಕ ವ್ಯವಸ್ಥೆ ಬಗ್ಗೆ ಗಮನ ಕೊಡುತ್ತೇನೆ. ಸಾಮಾಜಿಕ ವ್ಯವಸ್ಥೆ ಬಗ್ಗೆ ಗಮನ ಕೊಡುತ್ತೇನೆ. ಅವರ ನೌಕರಿ ಬಗ್ಗೆ ಹೆಚ್ಚು ಗಮನ ಕೊಡುತ್ತೇನೆ ಎಂದು ಹೇಳಿದರು. ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ಸ್ ಕಮಿಷನ್ ಅವರು ರಿಪೋರ್ಟ್‌ನಲ್ಲಿ ಏನು ಶಿಫಾರಸ್ಸನ್ನು ಮಾಡಿದ್ದರೋ ಅವೆಲ್ಲವನ್ನೂ ಜಾರಿಗೆ ಕೊಡುತ್ತೇವೆ ಎಂದು ಹೇಳಿ ಇದುವರೆಗೂ ಅದನ್ನು ಜಾರಿಗೆ ಕೊಟ್ಟಿಲ್ಲ. ಇದು ನನಗೆ ಅರ್ಥವಾಗುತ್ತಾ ಇಲ್ಲ. ಇವತ್ತು ಜಿ. ಎ. ಡಿ. ನಲ್ಲಿ ಈ ಪರಿಶಿಷ್ಟ ಜಾತಿಯವರ ಸರ್ವೀಸ್ ಬಗ್ಗೆ ಅವರದೇ ಆದ ದೃಷ್ಟಿಯಲ್ಲಿ ನೋಡುತ್ತಿದ್ದಾರೆ. ಇವತ್ತು ಜಿ. ಎ. ಡಿ. ನಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡ ಮತ್ತು ಹಿಂದುಳಿದ ವರ್ಗಗಳವರ ಬಗ್ಗೆ ವಿರೋಧ ಬರತಕ್ಕ ಒಂದು ನೀತಿ ಇದೆ. ಅದನ್ನೇ ಅವನು ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಏನು ಹೈಕೋರ್ಟ್‌ನಲ್ಲಿ, ಸುಪ್ರೀಮ್ ಕೋರ್ಟನಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಕಮಿಷನ್ ಅವರ ವರದಿಯಲ್ಲಿ ಅಳವಡಿಸಿರತಕ್ಕ ಶಿಫಾರಸ್ಸುಗಳು ಇವೆ ಅವನ್ನು ಜಾರಿಗೆ ಕೊಡಬೇಕೆಂದು ಇವರಿಗೆ ಮನವರಿಕೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಅವನ್ನು ಜಾರಿಗೆ ಕೊಡುತ್ತೇನೆಂದು ಹೇಳಿ ಇದುವರೆಗೂ ಏಕೆ ಕೊಟ್ಟಿಲ್ಲವೆಂದು ನಾನು ಕೇಳುತ್ತಿದ್ದೇನೆ. ಎಲ್ಲಿಯವರೆಗೆ ಹಿಂದುಳಿದ ವರ್ಗದವರಿಗೆ ಹಿಂದುಳಿದ ಜಾತಿ ಮತ್ತು ವರ್ಗದವರಿಗೆ ಮೋಸ ಮಾಡಿ, ಇವರಿಂದ ಓಟು ಪಡೆದು ಎಲ್ಲಿಯವರೆಗೆ ನೀವು ಅವರನ್ನು ತಪ್ಪುದಾರಿಗೆ ಎಳೆಯುತ್ತೀರಿ ಎನ್ನುವುದಕ್ಕಿಂತಾ, ಎಲ್ಲಿಯವರೆಗೆ ಅವರು ಈ ನಂಬಿಕೆ ಇಟ್ಟುಕೊಂಡು ನಿಮ್ಮನ್ನು ಅನುಸರಿಸಬೇಕೆನ್ನುವ ಪ್ರಯತ್ನವನ್ನು ಮಾಡುತ್ತೀರಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಈಗ ವೇಳೆ ಕೂಡಾ ಆಗಿದೆ. ಈಗ ಶೆಡ್ಯೂಲ್ಡ್ ಕ್ಯಾಸ್ಟ್ ಯಾರು ಇದ್ದಾರೆ ಅವರಿಗೆ ಹಲವಾರು ಹುಕ್ಕುಮ್ ಮಾಡಿದ್ದೇವೆ. ಹಿಂದೆ ಕಾಂಗ್ರೆಸ್‌ನವರೂ ಮಾಡಿದ್ದರು. ಈಗಲೂ ಕೂಡ ತಾವು ಮಾಡಿದ್ದೀರಿ. ಆದರೆ ಅವನ್ನು ನ್ಯಾಯವಾಗಿ ಕಾರ್ಯಗತ ಮಾಡುವಾಗ ಅದನ್ನು ಕಾರ್ಯಗತ ಮಾಡುತ್ತಿಲ್ಲ. ಇದಕ್ಕೆ ಉದಾಹರಣೆ ಹೇಳಬೇಕೆಂದರೆ relaxation of qualifications for the Scheduled Caste officer ಎಂದು ಇದೆ. ಇವತ್ತು ಯಾರಿಗೆ ೩-೪ ವರ್ಷ ಆದಮೇಲೆ ಪ್ರಮೋಷನ್ ಕೊಡಬೇಕೆಂದು ಇದೆ. ಆದರಲ್ಲಿ ಇವರಿಗೆ ೩ ವರ್ಷಗಳ ಒಳಗೆ ಇದ್ದರೂ ರಿಲ್ಯಾಕ್ಸೇಷನ್ ಕೊಟ್ಟು ಪ್ರಮೋಷನ್ ಕೊಡಬೇಕೆಂದು ಸರ್ಕಾರಿ ಹುಕ್ಕುಮ್ ಇದೆ. ಆದರೆ ಆ ಹುಕುಮ್ ಪ್ರಕಾರ ಕೊಡದೇ, ಅದನ್ನು ಬಿಟ್ಟು ಬಿಟ್ಟು, ಅವರಿಗೆ ಪ್ರಮೋಷನ್ ಕೊಡಬೇಕೆಂದು ಬಂದಾಗ ಏನು ಒಂದು ನಿರ್ಬಂಧ ಹಾಕಬೇಕೋ ಅದನ್ನು ಹಾಕಿ, ಏನು ಒಂದು ಕಾನೂನಿನಲ್ಲಿ ಇವರಿಗೆ ಸಹಾಯ ಮಾಡಬೇಕೆಂದು ಇದೆಯೋ ಆ ರೀತಿ ಅವರಿಗೆ ಸಹಾಯ ಮಾಡುತ್ತಾ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಮೂರನೇ ದರ್ಜೆ ನೌಕರ ವರ್ಗದ ಬಗ್ಗೆ ಇವರಿಗೆ ನಿಯಮಾವಳಿ ಮಾಡಿದ್ದೀರಿ. ಅದಕ್ಕೆ ಹೈಕೋರ್ಟ್‌ನಲ್ಲಿ ಸ್ಟೇ ಆಗಿದ್ದು ಸುಪ್ರೀಮ್ ಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಕೊಟ್ಟಿಲ್ಲ. ಆದರೂ ಕೂಡಾ ಹಂಗಾಮಿ ಜನ ಯಾರಿದ್ದಾರೋ ಅವರನ್ನು ನೇರವಾಗಿ ಅಪಾಯಿಂಟ್ ಮಾಡುವುದಕ್ಕೆ ಇದರಲ್ಲಿ ಅವಕಾಶ ಉಂಟು. ಅದನ್ನು ಮಾಡುತ್ತಾ ಇಲ್ಲ. ಮತ್ತೆ ನೌಕರರ ಬಡ್ತಿಯಲ್ಲಿ ಸರಿಯಾಗಿ ಇವರಿಗೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಇದೆಲ್ಲವನ್ನೂ ನಾನು ಹೇಳುವಾಗ ಮಾನ್ಯ ರಾಮಕೃಷ್ಣ ಹೆಗ್ಡೆಯವರನ್ನು ನಾನು ಕೇಳುವುದು ಒಂದೇ. ಇವರು ಇರಲಿ ನಾವು ಬೇಡ ಎಂದು ಹೇಳುವುದಿಲ್ಲ. ಜನಗಳ ಮನಸ್ಸು ಇವರ ಮೇಲೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಇವರು ಇರಲಿ. ಇವತ್ತು ಅವರು ಏನೇನು ವಾಗ್ದಾನಗಳನ್ನು ಕೊಟ್ಟಿದ್ದಾರೆ ಅವುಗಳ ಬಗ್ಗೆ ಗಮನಕೊಟ್ಟು ಆ ಜನ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡುವುದು ಬೇಡವೇ ? ಇವತ್ತು ಅವರಿಗೆ ಕೊಟ್ಟಿರುವ ಭರವಸೆಗಳನ್ನು ಈಡೇರಿಸಿ, ಆ ಜನಗಳ ಮನಸ್ಸನ್ನು ಸಂತೋಷಪಡಿಸಿ ಎಂದು ಹೇಳಿ, ಅನುಸೂಚಿತ ಜಾತಿ ಮತ್ತು ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ

ಏನು ಅನ್ಯಾಯವಾಗುತ್ತಿದೆಯೋ ಆ ಬಗ್ಗೆ ಗಮನಹರಿಸಿ ನಿಯಮಾವಳಿಗಳನ್ನು ಏನು ಮಾಡಿದ್ದೀರೋ ಆ ಪ್ರಕಾರ ಇವರಿಗೆ ನೌಕರಿಯಲ್ಲಿ ನ್ಯಾಯವನ್ನು ಒದಗಿಸಿಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.— ಇಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳವರಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬೆಳಗ್ಗೆ ೯-೦೦ ಗಂಟೆಗೆ ಉತ್ತರವನ್ನು ಕೊಡುತ್ತಾರೆ. ಈಗ ಬೇಡಿಕೆ ಸಂಖ್ಯೆ ೪೮, ೬, ೨೭, ೧೧ ಹಾಗೂ ೧೨ — ಇವುಗಳ ಮೇಲೆ ಚರ್ಚೆ ಮುಂದುವರಿಯುತ್ತದೆ.

ಈ ಬೇಡಿಕೆಗಳ ಮೇಲೆ ಚರ್ಚೆ ಸಂಜೆ ೫–೩೦ಕ್ಕೆ ಮುಕ್ತಾಯವಾಗಬೇಕು. ಆ ನಂತರ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡುವರು. ಈಗ ಮಾನ್ಯ ಜ್ಞಾನದೇವ ದೊಡ್ಡಮೇಟಿಯವರು ತಮ್ಮ ಭಾಷಣವನ್ನು ಈ ಬೇಡಿಕೆಗಳ ಮೇಲೆ ಪ್ರಾರಂಭ ಮಾಡಲಿ.

ಶ್ರೀ ಜ್ಞಾನದೇವ ದೊಡ್ಡಮೇಟಿ.— ಅಧ್ಯಕ್ಷರೇ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ ಇಲ್ಲವಲ್ಲ.

ಉಪಾಧ್ಯಕ್ಷರು.— ತಾವು ಪ್ರಾರಂಭ ಮಾಡಿ. ಅವರು ಬರುತ್ತಾರೆ.

೧೨– ಕಲೆ ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ ಮೇಲಿನ ಚರ್ಚೆ

ಬೇಡಿಕೆಗಳ ನಂ. ೪೮– ವಿದ್ಯುತ್ ಯೋಜನೆಗಳು.

೬– ಗಣಿ ಮತ್ತು ಭೂವಿಜ್ಞಾನ

೨೭– ಪ್ರವಾಸೋದ್ಯಮ ವಾರ್ತಾ ಮತ್ತು ಯುವಜನ ಸೇವೆಗಳು

† ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ಮಾನ್ಯ ಅಧ್ಯಕ್ಷರೇ, ಕನ್ನಡ ಅಭಿವೃದ್ಧಿ ಮತ್ತು ಸಂಸ್ಕೃತಿ ಇಲಾಖೆ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ಹೇಳ ಬಯಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ಮಾತನಾಡುವಾಗ ನಾವು ಮೂಲವಾಗಿ ಕೆಲವು ವಿಚಾರಗಳನ್ನು ಮಾಡಬೇಕಾಗುತ್ತದೆ. ಅದು ಏನೆಂದರೆ, ಕನ್ನಡದ ಬೆಳವಣಿಗೆಯ ಬೇರುಗಳು ಮೊದಲು ಶಿಕ್ಷಣದ ಭೂಮಿಯ ಮೇಲೆ ಸರಿಯಾಗಿ, ಆಳವಾಗಿ ಇಳಿಯಬೇಕು ಈ ಬೇರು ಇಳಿಯದೆ ಕನ್ನಡದ ವೃಕ್ಷ ಬಲಗೊಳ್ಳದು ಎನ್ನುವ ವಿಷಯವನ್ನು ನೋಡಬೇಕು. ಇದೇನೂ ಶಿಕ್ಷಣದ ಇಲಾಖೆಯ ಬೇಡಿಕೆ ಅಲ್ಲ ನಿಜ ಆದರೆ ಕನ್ನಡದ ಅಭಿವೃದ್ಧಿಗೆ ತಳಪಾಯ ಹಾಕಬೇಕಾಗಿರುವುದು ಪ್ರಕೃತ ಒಂದು ಶಿಕ್ಷಣ. ಈಗ ಮತ್ತೊಂದು ವಿಷಯವೆಂದರೆ, ಇತ್ತಲಾಗೆ ನಾವು ನೋಡಲಾಗಿ, ಈ ಸರ್ಕಾರ ಪ್ರಾಥಮಿಕ ಕನ್ನಡ ಶಾಲೆಗಳ ಕಡೆ ಕೊಟ್ಟ ಗಮನವನ್ನು ನೋಡಿದಾಗ ಒಂದು ವಿಷಯ ತಿಳಿಯುತ್ತಾ ಬರುತ್ತಿದೆ. ಅದು ಬಹಳ ಆಘಾತ ತರುವಂತಹ ಕಾರ್ಯವಾಗಿದೆ. ರಾಜ್ಯದಲ್ಲಿ ೧೯೮೧–೮೨ರಿಂದ ಈಚೆಗೆ ಸುಮಾರು ೫ ವರ್ಷಗಳಲ್ಲಿ ಪ್ರಾಥಮಿಕ ಆಂಗ್ಲ ಮಾಧ್ಯಮದ ಶಾಲೆಗಳು ಎಷ್ಟು ಹೆಚ್ಚಾಗಿವೆ ಎಂಬುದನ್ನು ನೋಡಬೇಕು. ೧೯೮೩–೮೪ರಲ್ಲಿ ೫೭ ಪ್ರಾಥಮಿಕ ಶಾಲೆಗಳನ್ನು ಆಂಗ್ಲ ಮಾಧ್ಯಮದಲ್ಲಿ ತೆರೆಯಲಾಯಿತು. ೧೯೮೪–೮೫ರಲ್ಲಿ ೬ ಹಾಗೂ ೧೯೮೫–೮೬ರಲ್ಲಿ ಒಂದು ಶಾಲೆಗಳನ್ನು ಆಂಗ್ಲ ಮಾಧ್ಯಮದಲ್ಲಿ ತೆರೆಯಲಾಯಿತು. ಹೀಗೆ ನಾವು ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭ ಮಾಡುತ್ತಾ ಹೋದರೆ ಕನ್ನಡ ಮಾಧ್ಯಮಿಕ ಶಾಲೆಗಳು ಹಿಂದೆ ಬೀಳುತ್ತವೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಕೇಂದ್ರ ಸರ್ಕಾರದವರು ಕೆಲವು ಕೇಂದ್ರೀಯ ಶಾಲೆಗಳನ್ನು ತೆಗೆಯುವ ಮನಸ್ಸು ಮಾಡಿದೆ. ಇವತ್ತು ಅವು ಸಂಪೂರ್ಣವಾಗಿ ಕನ್ನಡ ಮಾಧ್ಯಮದಲ್ಲೇ ಇರಬೇಕು, ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಇರಬಾರದು ಎನ್ನುವ ಸೂಚನೆಯನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಕೊಡಬೇಕು ಎಂದು ನಾನು ಹೇಳುತ್ತೇನೆ. ಆಮೇಲೆ ನಮ್ಮ ಭಾಷಾ ಸೂತ್ರವೂ ಕೂಡ ಸ್ಪಷ್ಟವಾಗಿರಬೇಕು. ನಮ್ಮ ಕಲಿಕೆಯ ಮಟ್ಟಿಗೆ ದ್ವಿಭಾಷಾ ಸೂತ್ರ ಬಹಳ ಉತ್ತಮವಾದುದು. ಈ ವಿಷಯದ ಬಗ್ಗೆ ಸಾಹಿತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಏನು ಸೂಚನೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ನೀವು ಗಂಭೀರವಾಗಿ ಅನುಸರಿಸಬೇಕು. ಈ ಭಾಷಾ ಸೂತ್ರದ ಬಗ್ಗೆ ಮಾನ್ಯ ಕುವೆಂಪು ಈ ರೀತಿ ಒಂದು ಕಡೆ ಹೇಳಿದ್ದಾರೆ:

೩-೦೦ ಪಿ.ಎಂ.

"ಭಾಷಾ ತ್ರಿಶೂಲನೀ ತ್ರಿಭಾಷಾ ಸೂತ್ರ,
ಬಾಲಕರ ರಕ್ಷಿಸೈ ಹೇ ತ್ರಿಣೇತ್ರ.
ಚೋರಂ ತಿಂಡಿಗೆ ಸಿಕ್ಕಿಸಿದಳೋ ಈ ಮೂರು ಗಾಳ,
ನುಂಗದಿದ್ದರೆ ಹಸಿವೆ, ನುಂಗಿದರೆ ಪ್ರಾಣ ಶೂಲ"

ಎಂದು ಹೀಗೆ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಈ ಭಾಷಾ ಸೂತ್ರ ಯಾವುದೋ ಒಂದು ರಾಜಕೀಯ ವಿಚಾರದಲ್ಲಿ ಹುಟ್ಟಿದಂಥ ಕೂಸಲ್ಲ, ಪ್ರಾದೇಶಿಕ ಭಾಷೆಗಳನ್ನೇ ಕಬಳಿಸುವ ಈ ರಾಕ್ಷಸೀ ಸೂತ್ರವನ್ನು ಈ ತ್ರಿಭಾಷಾ ಸೂತ್ರ ಪಡೆದಿದೆ ಎಂದು ನಾವು ಹೇಳಬೇಕಾಗಿದೆ. ವಿಧಾನ ಮಂಡಲದ ಮೂಲಕ(ಕನ್ನಡವು ನಡೆದ ಬಂದ ದಾರಿಯನ್ನು ನೋಡಿದಾಗ, ನೂರು ವರ್ಷದ ಆಚೆ ನಿಲ್ಲುತ್ತದೆ. ಆದರೆ ಕನ್ನಡ ಪ್ರಗತಿ ಶೂನ್ಯ ಸಂಪಾದನೆ. ಆ ಮಹನೀಯರನ್ನಾದರೂ ನೆನೆದು ನಾವು ಪುನೀತಗೊಂಡ ಚೇತನಾಶೀಲರಾಗೋಣ. ೧೮೮೧ರಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಪ್ರಜಾಪ್ರತಿನಿಧಿ ಸಭೆ ಆರಂಭವಾದಾಗ ಆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಕಡೂರು ಕ್ಷೇತ್ರದ ಪ್ರಜಾಪ್ರತಿನಿಧಿ ರಾಣೂರು ಶಂಕರಪ್ಪನವರು ಕೇಳಿದ ಪ್ರಶ್ನೆಗೆ ಸರ್ಕಾರ ಉತ್ತರವನ್ನು ಕೊಟ್ಟಿದೆ. ಶ್ರೀಯುತರಾದ ಬೊಮ್ಮಲಿಂಗಣ್ಣನವರು, ಎನ್. ಅಬ್ದುಲ್ ಖಾದರ್‌ರವರು ಹಾಗೂ ಎಂ. ವೆಂಕಟರಾಮಯ್ಯನವರು ಸುಮಾರು ನೂರು ವರ್ಷಗಳ ಹಿಂದೆಯೇ ಕರ್ನಾಟಕ ವಿಧಾನಮಂಡಲದಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ಕನ್ನಡದಲ್ಲಿಯೇ ನಡೆಸಬೇಕೆಂದು ಪ್ರಯತ್ನವನ್ನು ಮಾಡಿದರು. ಅದೇ ರೀತಿ ಇತ್ತೀಚೆಗೆ ಮಾನ್ಯ ದಿವಂಗತ ಗೋಪಾಲಗೌಡರು ಮತ್ತು ದೊಡ್ಡಮೇಟಿಯವರು ಪ್ರಯತ್ನ ಮಾಡಿದರು. ಆದರೆ ಇದರಲ್ಲಿ ಅಷ್ಟಾಗಿ ಕನ್ನಡದ ಬೆಳವಣಿಗೆ ಆಗಲಿಲ್ಲ. ಅದು ಏತಕ್ಕೆ ಆಗಲಿಲ್ಲ ಎಂಬುದನ್ನು ನಾವು ಯೋಚನೆ ಮಾಡಬೇಕು. ಕರ್ನಾಟಕದ ಗತ ವೈಭವವನ್ನು ನೆನೆಯುವುದು ಇರಲಿ, ಕರ್ನಾಟಕದ ವೈಭವ ಯಾವ ರೀತಿ ಗತ ಹೋದಿತು ಎಂಬುದನ್ನು ನೆನಪು ಮಾಡಿಕೊಂಡಾಗ ಅದಕ್ಕೆ ಅನೇಕ ಕಾರಣಗಳುಂಟು, ಹರಿದು ಹಂಚಿ ಹೋಗಿದ್ದ ನಮ್ಮ ಕರ್ನಾಟಕ ಏನಾಗಿತ್ತು. ಬೇರೆ ಬೇರೆ ಭಾಷೆ ಯನ್ನಾಡು ಭಾಷಿತರ ಬಾಯಲ್ಲಿ ಸಿಕ್ಕಿ ಅನಾಥವಾಗಿತ್ತು. ಆದರೆ ಯಾರು ಆಡಳಿತವನ್ನು ನಡೆಸಿದರೋ ಅವರು ಈ ರಾಜ್ಯದ ಮೇಲೆ ತಮ್ಮ ಭಾಷೆಯನ್ನು ಒತ್ತಾಯಪೂರ್ವಕವಾಗಿ ಹೊರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಮುಂಬೈ ಕರ್ನಾಟಕದಲ್ಲಿ ದೇಶೀಯ ಸಂಸ್ಥಾನಿಕರ ಆಡಳಿತಕ್ಕೆ ಒಳಗಾಗಿ ಮರಾಠಿ ಬಂತು. ನಿಜಾಮರ, ನವಾಬರ ಕಾಲದಲ್ಲಿ ಉರ್ದು ಪ್ರಭಾವವನ್ನು ಬೀರಲಾಯಿತು. ಅದೇ ರೀತಿ ಬೇರೆ ಭಾಷೆಗಳೂ ಕೂಡ ಬಂದಿರತಕ್ಕ ಉದಾ ಹರಣೆಗಳುಂಟು, ಆದರೆ ಒಂದು ಮಾತು ಮಾತ್ರ ನಿಜ. ಜಮಖಂಡಿ ಸಂಸ್ಥಾನದಲ್ಲಿ ಮರಾಠಿ ಶಾಲೆಗಳು ಗರಿಗೆದರಿ ನಿಂತಾಗ ರೈತರ ಹಕ್ಕುಪತ್ರಗಳೂ ಕೂಡ ಮರಾಠಿ ಭಾಷೆಯಲ್ಲೇ ಆದವು. ಇದರ ಬಗ್ಗೆ ನಮ್ಮ ಆಡಳಿತಗಾರರು ಲಕ್ಷ್ಯವನ್ನು ವಹಿಸಿದರೆ ಬಹಳ ಉತ್ತಮ. ಬಹುಶಃ ೧೯೩೯ನೇ ಇಸವಿಯಲ್ಲಿ ಒಂದು ಚಳುವಳಿ ಆಯಿತು. ಒತ್ತಾಯದಿಂದ ಪ್ರಜೆಗಳ ಮೇಲೆ ಪರಭಾಷೆಯನ್ನು ಹೇರುವುದು ಯುಕ್ತವಲ್ಲವೆಂದು ಒಂದು ಠರಾವನ್ನು ಮಾಡಿದರು. ಜಮಖಂಡಿ ವಿಲೀನದ ಬಗ್ಗೆ ಪ್ರಜಾಪರಿಷತ್ತಿನಲ್ಲಿ ಇನ್ನೊಂದು ಠರಾವನ್ನು ಮಾಡಿದರು. ಅನಂತರ ಕನ್ನಡ ಭಾಷೆಯು ಸಂಸ್ಥಾನದ ದರ್ಬಾರಿನ ಭಾಷೆ ಆಗಬೇಕಾದುದು ನ್ಯಾಯಸಮ್ಮತ. ಆದರೆ ಅದನ್ನು ಬದಿಗೊತ್ತಿ ಮರಾಠಿ ಭಾಷೆಯನ್ನು ಬಲಾತ್ಕಾರವಾಗಿ ಹೇರುವುದನ್ನು ನೋಡಿ ಕನ್ನಡಿಗರಿಗೆ ದುಃಖವಾಯಿತು. ಮುಂದೆ ಈ ಜನನಾಡಿಯ ಬಡಿತವನ್ನು ತಿಳಿದುಕೊಂಡಂಥ ರಾಜೇಶ್ ಸಾಹೇಬರು ಒಂದು ಆಜ್ಞೆಯನ್ನು ಮಾಡಿದರು. ಅದನ್ನು ಇಂದು ಆಡಳಿತ ನಡೆಸುವವರು ಮನಸ್ಸಿನಲ್ಲಿಟ್ಟುಕೊಂಡು, ಎಚ್ಚರಿಕೆಯಿಂದ ನಡೆಯಬೇಕು. ಕನ್ನಡ ನುಡಿಯನ್ನು ಸರ್ಕಾರೀ ಭಾಷೆಯನ್ನಾಗಿ ಮಾಡಲು ಮೊದಮೊದಲು ಕ್ರಮ ತೆಗೆದುಕೊಂಡರು. ಕನ್ನಡ ಭಾಷಾ ಪರೀಕ್ಷೆಗಳನ್ನು ನೌಕರ ವರ್ಗಕ್ಕೆ ಗೊತ್ತುಪಡಿಸಿ ಇನ್ನು ೨ ವರ್ಷದೊಳಗೆ ಕಲಿಯಬೇಕೆಂದು ಕಟ್ಟಾಜ್ಞೆಯನ್ನು ವಿಧಿಸಿದರು ಕನ್ನಡ ಪರೀಕ್ಷೆಯನ್ನು ಯಾರು ಕಟ್ಟುವುದಿಲ್ಲ ಅಂಥವರ ಪಗಾರದಲ್ಲಿ ಹಣ ಕಟ್ ಆಗುತ್ತಿತ್ತು. ಗೌಡರು, ಶಾನು ಭೋಗರು ೧-೮-೪೧ರೊಳಗೆ ಕನ್ನಡವನ್ನು ಓದಲು ಬರೆಯಲು ಕಲಿಯಬೇಕು ಅದರಂತೆ ನಡೆದುಕೊಳ್ಳ ದಿದ್ದರೆ ಅವರನ್ನು ಕೆಲಸದಿಂದ ಕಡೆ ಮಾಡುವುದಾಗಿ ಅಂದಿನ ಜಮಖಂಡಿಯ ಮಹಾರಾಜರು ತಿಳಿಸಿ ದರು. ಆದರೆ ಇಂದು ಏನಾಗಿದೆ, ಎಚ್ಚರಿಕೆಯ ಗಂಟೆಯನ್ನು ಎಷ್ಟೇ ಬಾರಿಸಿದರೂ ಕೂಡ ಕಿವುಡರಿಗೆ ಅದು ಕೇಳಿಸುವುದಿಲ್ಲ. ಆದ್ದರಿಂದ ಎಚ್ಚರಿಕೆಯ ಗಂಟೆಯನ್ನು ಯಾವ ರೀತಿ ಬಾರಿಸಬೇಕೋ ಆ ವಿಚಾರ ವನ್ನು ನಮ್ಮ ಸರ್ಕಾರ ಯೋಚನೆ ಮಾಡಬೇಕು.

ಇನ್ನೊಂದು ವಿಷಯ ಏನೆಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಇದುವರೆಗಿನ ಎಲ್ಲ ಅಧ್ಯಕ್ಷರೂ ಕೂಡ ಕನ್ನಡ ನಾಡು ನುಡಿಗಾಗಿ ಅಭಿವ್ಯಕ್ತಪಡಿಸಿದ ವಿಚಾರಗಳನ್ನು ಆಡಳಿತ ಸೂತ್ರ ಹಿಡಿದಿರುವವರು ಗಂಭೀರವಾಗಿ ಪರಿಗಣಿಸಿಲ್ಲವೆಂದು ನನಗನ್ನಿಸುತ್ತದೆ. ಕಾಡುವ ಕಾಟ ಕಳೆಯಲಿ ಎನ್ನುವ ಕಾಟಾಚಾರ ಬೇಡ. ಇನ್ನು ಪ್ರಗತಿಯ ಬಗ್ಗೆ ವಿಚಾರ ಮಾಡಿದರೆ ಕನ್ನಡದ ಬಳಕೆಯು ಮೂರು ಹೆಜ್ಜೆ ಮುಂದಕ್ಕೆ ಹೋಗಿ ಆರು ಹೆಜ್ಜೆ ಹಿಂದಕ್ಕೆ ಇಡುತ್ತಿದೆ. ಕನ್ನಡ ಭಾಷೆ ಭದ್ರವಾಗಿ ಆಡಳಿತದಲ್ಲಿ ನಿಲ್ಲಬೇಕೆಂಬ ಉದ್ದೇಶದಿಂದ ನಮ್ಮ ರಾಜ್ಯ ಸರ್ಕಾರದವರು ಮೇಲಿಂದ ಮೇಲೆ ಸುತ್ತೋಲೆಗಳನ್ನು ಬಳಸುವುದು ಅಷ್ಟೆ ಅಲ್ಲ ಅದನ್ನು ಕಡ್ಡಾಯ ಮಾಡಬೇಕೆಂದು ಕೆಲವು ಸಂದರ್ಭಗಳಲ್ಲಿ ಇಂಗ್ಲೀಷ್‌ನಲ್ಲಿ ಆಜ್ಞೆಗಳನ್ನು ಹೊರಡಿಸಿದಂಥ ಉದಾಹರಣೆಗಳೂ ಉಂಟು. ಬಹುಶಃ ಈ ಸುತ್ತೋಲೆಗಳನ್ನು ನೋಡಿದರೆ ಯಾರಿಗಾದರೂ ತಲೆ ಸುತ್ತಿ ಬರುತ್ತದೆ. ಅಷ್ಟೊಂದು ಸುತ್ತೋಲೆಗಳು ಇಲ್ಲಿ ಬಿದ್ದಿವೆ. ಇದಕ್ಕಾಗಿಯೇ ಕನ್ನಡ ಕಾವಲು ಸಮಿತಿಯೊಂದನ್ನು ಸರ್ಕಾರ ನೇಮಕ ಮಾಡಿತು. ಈ ಸಮಿತಿಯ ಬಗ್ಗೆ ಹೇಳಬೇಕೆಂದರೆ ಇದಕ್ಕೆ ಯಾವುದೇ ರೀತಿಯ ಅಧಿಕಾರವೂ ಇಲ್ಲ, ಇದು ಹೇಗಿದೆ ಎಂದರೆ ಈ ಕಾವಲು ಸಮಿತಿಗೆ ಬಂದೂಕವನ್ನು ಕೊಟ್ಟಿದ್ದಾರೆ, ಆದರೆ ಗುಂಡನ್ನು ಕೊಟ್ಟಿಲ್ಲ. ಬೇರೆಯವರಿಗೆ ಗುಂಡನ್ನು ಕೊಟ್ಟಿದ್ದಾರೆ, ಆದರೆ ಬಂದೂಕು ಇಲ್ಲ. ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಈ ಕನ್ನಡ ಬೆಳವಣಿಗೆಯಲ್ಲಿ ಮೂಲ ದೋಷ ಎಲ್ಲಿ ಮನೆ ಮಾಡಿಕೊಂಡಿದೆ ಎಂಬುದನ್ನು ಕಂಡು ಹಿಡಿಯಬೇಕು. ಇವತ್ತು ಕನ್ನಡ ಭಾಷೆಯನ್ನೇ ನಾಶ ಮಾಡುವಂಥ ಶಕ್ತಿಗಳು ಹೊರಗಿನಿಂದ ಇಲ್ಲಿಗೆ ಬಂದು ಬಿಡಾರವನ್ನು ಮಾಡುತ್ತಿವೆ. ಹಿಂದೆ ಒಂದು ಕಾಲದಲ್ಲಿ ಕನ್ನಡ ಲಿಪಿಯನ್ನೇ ಅಳಿಸಿ ಹಾಕಬೇಕೆಂಬ ಒಂದು ಪ್ರಯತ್ನ ನಡೆಯಿತು. ಸಂಸ್ಕೃತ ಲಿಪಿಯನ್ನು ತಂದು ಎಲ್ಲ ಭಾಷೆಗಳಿಗೂ ಹಚ್ಚಿದರೆ ಅನುಕೂಲವಾಗುತ್ತದೆಂದು ಯೋಚನೆಯನ್ನು ಮಾಡಲಾಗಿತ್ತು ಅದು ಪ್ರಾದೇಶಿಕ ಭಾಷೆಯನ್ನು ಅದು ಕೊಂದುಹಾಕುತ್ತಿತ್ತು. ಆದರೆ ಅದು ಅಷ್ಟಕ್ಕೇ ನಿಂತು ಹೋಯಿತು.

ಇನ್ನೊಂದು ವಿಚಾರವನ್ನು ಹೇಳುವುದಾದರೆ ನಮ್ಮ ಆಡಳಿತ ರಥ ಕನ್ನಡ ನಾಡು ನುಡಿಯ ನೆಲದ ಮೇಲೆ ಉರುಳಿದರೆ ಇದು ತನ್ನ ಉನ್ನತ ಮಟ್ಟವನ್ನು ಮುಟ್ಟುತ್ತದೆ ಎಂಬ ಪರಿಸ್ಥಿತಿ ನಿರ್ಮಾಣವಾಗಬೇಕು. ಆದರೆ ಅದು ಇನ್ನೂ ನಿರ್ಮಾಣವಾಗಿಲ್ಲ. ಇವತ್ತು ಕನ್ನಡ ಆಡಳಿತಭಾಷೆಯಾಗಿ ಇದರ ಸ್ಥಿತಿ ಯಾವ ರೀತಿ ಇದೆ ಎಂದರೆ ಹಂಪೆಯ ಕಲ್ಲಿನ ರಥದಂತೆ ಇದೆಯೆಂದು ಹೇಳಬೇಕು. ಇದು ಚಲಿಸುವ ಶಕ್ತಿಯನ್ನು ಪಡೆದಿಲ್ಲ.

ಇನ್ನು ಆಡಳಿತ ಸೂತ್ರವನ್ನು ಹಿಡಿದಿರುವಂಥ ಈ ವಿಧಾನ ಸೌಧದ ಗೋಳಗುಮ್ಮಟದಲ್ಲೇ ನಮ್ಮ ಕನ್ನಡ ಭಾಷೆ ಮೊದಲು ಪ್ರತಿಧ್ವನಿಸಬೇಕು. ಆದರೆ ಮೇಲಿನಿಂದ ಬರತಕ್ಕ ಎಲ್ಲ ಕಾಗದಪತ್ರಗಳೂ ಆಂಗ್ಲಭಾಷೆಯಲ್ಲೇ ಬರುತ್ತಿವೆ ಎಂದು ಕೆಳಮಟ್ಟದಲ್ಲಿ ಇರುವ ಅಧಿಕಾರಿಗಳು ನಾವು ಹೋದ ಹೋದ ಕಡೆಗಳಲ್ಲೆಲ್ಲಾ ದೂರುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಮೊದಲನೆಯದಾಗಿ ಇಲ್ಲಿ ಇರುವವರಿಗೆ ಕನ್ನಡದ ಬಗ್ಗೆ ಕಳಕಳಿ ಇರಬೇಕು.

ಆಮೇಲೆ ಏನಾಗಿದೆ ಎಂದರೆ ನಮ್ಮ ಜನರಲ್ಲಿ ಉದಾಸೀನ ಭಾವನೆ ಬಹಳವಾಗಿ ಬೆಳೆದಿದೆ. ಮೈಗಳ್ಳತನ, ಮನೆಗಳ್ಳತನ ಬಹಳವಾಗಿ ಬೆಳೆದಿದೆ. ಇದನ್ನೆಲ್ಲಾ ಬೆಳೆಸಿಕೊಂಡಿದ್ದಾರೆ. ಇದರ ಜೊತೆಗೆ ಆಡಳಿತವನ್ನು ಹಿಡಿದಿರತಕ್ಕಂಥ ಅಧಿಕಾರಿಗಳು ಪ್ರಥಮ ದರ್ಜೆಯಿಂದ ಹಿಡಿದು ದ್ವಿತೀಯ ದರ್ಜೆಯ ಗುಮಾಸ್ತರವರೆವಿಗೂ ಕನ್ನಡ ಬಿಟ್ಟು ಬೇರೆ ಇನ್ನಾವುದರಲ್ಲಿಯೂ ನಡೆಯುವುದಿಲ್ಲವೆಂದು ಆಡಳಿತಗಾರರು ಒಂದು ಬೆಣೆಯನ್ನು ಹಾಕಿ ತಿರುವಬೇಕು. ಹಾಗೆ ಮಾಡಿದರೆ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಾರೆ.

ಇನ್ನೊಂದು ವಿಷಯ ಭಾರತದ ಭಾವೈಕ್ಯ ವಿಷಯಕ್ಕೆ ಬಂದರೆ ಭಾರತದ ರಕ್ಷಣೆಯ ಸಮಯದಲ್ಲಿ ಅಲ್ಪಸಂಖ್ಯಾತರ ಹೆಸರಿನಲ್ಲಿ, ಅಲ್ಪಸಂಖ್ಯಾತರ ರಕ್ಷಣೆಯ ಹೆಸರಿನಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾದರೆ ಬಹಳ ಎಚ್ಚರಿಕೆಯಿಂದ ಹೇಳಬೇಕಾಗುತ್ತದೆ.

ಇನ್ನೊಂದು ವಿಷಯ ಕನ್ನಡದ ಬೆಳವಣಿಗೆಗೆ ನಮಗೆ ಯಾವರೀತಿ ತೊಂದರೆಯಾಗಿದೆ ಎನ್ನುವ ಬಗ್ಗೆ ಮಾನ್ಯ ದಿವಂಗತ ಬೀಚಿಯವರು ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಇಲ್ಲಿ ಓದಿದರೆ ಅಭ್ಯಾಸವಾಗುವುದಿಲ್ಲವೆಂದು ನಾನು ತಿಳಿದುಕೊಳ್ಳುತ್ತೇನೆ. ಒಂದು ಸಂಧರ್ಭದಲ್ಲಿ ನಾನು ಮತ್ತು ಮಾನ್ಯ ಬಂಗಾರಪ್ಪನವರು ಅವರ ಮನೆಗೆ ಹೋಗಿದ್ದೆವು. ಅವರು ಒಂದು ಮಾತನ್ನು ಹೇಳಿದರು, ಅದಕ್ಕೂ ಮೊದಲು ಮಾನ್ಯ ಬಂಗಾರಪ್ಪನವರು ನಾವು ಸ್ನಾನ ಮಾಡಿ . ಸ್ನಾನ ಮಾಡಿಕೊಂಡು

ಆಮೇಲೆ ಬರುತ್ತೇವೆಂದು ಹೇಳಿದರು. ಅದಕ್ಕೆ ಬೀಚಿಯವರು ಏನು ಹೇಳಿದರು. ಅಂದರೆ ನಮ್ಮ ಮನೆಗೆ ಬರಬೇಕಾದರೆ ನೀವು ಏನು ಹುಡುಕಾಡಬೇಕಾಗಿಲ್ಲ, ನನ್ನ ಮನೆಯ ಮುಂದೆ ಒಂದು ಕನ್ನಡದ ಫಲಕ ಇದೆ. ಅದರಲ್ಲಿ ತಿಮ್ಮನ ತಲೆ ಎಂದು ಬರೆದಿರುತ್ತದೆ. ಇಲ್ಲಿ ನನ್ನದೊಂದು ನಾಮಫಲಕ ಕನ್ನಡದ್ದನ್ನು ಬಿಟ್ಟರೆ ಬೇರೆ ಎಲ್ಲ ಇಲ್ಲಿನವರು ಇಂಗ್ಲೀಷಿನಲ್ಲಿರತಕ್ಕಂಥ ಫಲಕವೇ ಇರುತ್ತವೆ. ಇಲ್ಲಿ ಸ್ವಲ್ಪ ಇಂಗ್ಲೀಷ್ ಜನರ ಪ್ರಭಾವ ಇದೆ ಎಂದು ಹೇಳಿದರು. ಮತ್ತೆ ನಾವು ಸ್ನಾನಮಾಡಿ ಬರುತ್ತೇವೆಂದು ಹೇಳಿದ್ದಕ್ಕೆ ಅವರು ಹೇಳಿದರು, ನೀವು ನಮ್ಮ ಹತ್ತಿರ ಬಂದಮೇಲೆ ಮತ್ತೆ ನೀವು ಸ್ನಾನ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಬಹಳ ಸೂಕ್ಷ್ಮವಾಗಿ ಹೇಳಿದರು. ಮತ್ತೆ ಒಂದು ಸೂತ್ರದ ಬಗ್ಗೆ ಪತ್ರವನ್ನು ಬರೆದಿದ್ದಾರೆ, ಅದನ್ನು ತಮ್ಮ ಅವಗಾಹನೆಗೆ ತಂದರೆ ಅದು ತಪ್ಪಾಗಲಿಕ್ಕೆ ಇಲ್ಲವೆಂದು ಭಾವಿಸುತ್ತೇನೆ. ಕನ್ನಡವನ್ನು ಯಾವ ಯಾವ ಭಾಷೆಯಲ್ಲಿ ಬೆರೆಸಿದ್ದಾರೆ ಎನ್ನುವುದಕ್ಕೆ ಒಂದು ಮಾತನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಹಿಂದಿಯನ್ನು ಕಲಿಯಬೇಕೆಂದು ಹೇಳುವುದು ಸರಿಯಲ್ಲ. ಹಿಂದಿಯಿಂದ ಕನ್ನಡಕ್ಕೆ ಅಪಾಯ ಯಾವಾಗಲೂ ಇದೆ ಎಂದಿಗೂ ಹಿಂದಿ ಕನ್ನಡವನ್ನು ಕಬಳಿಸತಕ್ಕಂಥದ್ದಾಗಬಾರದು. ಇದರಿಂದ ಕನ್ನಡಕ್ಕೆ ಅಪಾಯ ಇದೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮಧ್ಯೆ ವ್ಯವಹಾರ ಮಾಡಲು ಹಿಂದಿಯನ್ನು ಬಳಸುವ ಬಗ್ಗೆ ನನಗೆ ಸಮ್ಮತಿ ಇಲ್ಲ. ಇಂಗ್ಲೀಷಿನಿಂದ ನಮ್ಮ ಕನ್ನಡಕ್ಕೆ ಅಪಾಯವಿಲ್ಲ. ಅದು ಎಂದಿಗೂ ಕನ್ನಡದ ಸ್ಥಾನವನ್ನು ಆಕ್ರಮಿಸಲಾರದು. ಅಲ್ಲದೆ ಜಗತ್ತಿನ ಅರ್ಧಭಾಗದ ಜನರು ಇಂಗ್ಲೀಷನ್ನ ಮಾತನಾಡುತ್ತಾರೆ. ಆದ್ದರಿಂದ ನಮ್ಮ ಮಕ್ಕಳಿಗೆ ಇಂಗ್ಲೀಷನ್ನು ಕಲಿಸಿದರು ಪ್ರಪಂಚದಲ್ಲಿಯೇ ವ್ಯವಹರಿಸಬಹುದು ಎಂದು ಹೇಳಿದ್ದಾರೆ. ಇದು ಅವರ ವೈಯಕ್ತಿಕವಾದ ಅಭಿಪ್ರಾಯ. ಇನ್ನೊಂದು ಮಾತನ್ನು ಹೇಳಿದ್ದಾರೆ. ಭಾರತದಲ್ಲಿ ಹಿಂದಿಯ ಸ್ಥಾನ ಏನು ಎನ್ನುವ ಬಗ್ಗೆಯೂ ಕೂಡ ಹೇಳಿದ್ದಾರೆ. ಕನ್ನಡ, ತೆಲುಗು, ತಮಿಳು, ಮಲೆಯಾಳ, ಹಿಂದಿ ಇವೆಲ್ಲ ಕೇವಲ ಒಂದು ಪ್ರಾದೇಶಿಕ ಭಾಷೆಗಳು. ಅಷ್ಟೇ ಅಲ್ಲ ಉಳಿದ ಎಲ್ಲ ಭಾಷೆಗಳಿಗೆ ಈ ಹಿಂದಿ ಭಾಷೆಯನ್ನು ಹೋಲಿಸಿದರೆ, ಹಿಂದಿ ಭಾಷೆಯಲ್ಲಿ ಸಾಹಿತ್ಯ ಸ್ವಲ್ಪಮಟ್ಟಿಗೆ ಇದ್ದು, ನಮ್ಮ ಉತ್ತರ ಭೂಪರು, ಹಿಂದಿ ಮಾತನಾಡತಕ್ಕಂಥವರು ವೈಶಿಷ್ಟ್ಯವೇನೆಂದರೆ ಅವರು ನಮ್ಮ ತಲೆಯಮೇಲೆ ಹೊರಿಸತಕ್ಕಂಥ ಪ್ರಯತ್ನ ಮಾಡುತ್ತಿರುವುದು ಅಕ್ಷಮ್ಯವಾದುದು. ನಾವು ಯಾವ ಭಾಷಾ ದ್ವೇಷಿಗಳೂ ಅಲ್ಲ. ಆದರೆ ಎಲ್ಲ ಭಾಷೆಗಳನ್ನು ಸೀಮಿತವಾಗಿ ಬಳಸಬೇಕು ಎಂದು ಅವರು ಹೇಳಿದರು. ನಮ್ಮ ಕನ್ನಡ ಸಾಹಿತ್ಯ ಇನ್ನೂ ಅಷ್ಟಾಗಿ ಬೆಳೆದಿಲ್ಲ ಎಂದು ಹೇಳುವುದು ಸರಿಯಲ್ಲ. ವ್ಯವಹಾರಿಕವಾಗಿ ನಡು ನಡುವೆ ಇಂಗ್ಲೀಷ್ ಶಬ್ದಗಳನ್ನು ಪೋಣಿಸಿದರೆ ಅದರಿಂದ ಏನೂ ತಪ್ಪಿಲ್ಲ. ಅದು ಒಂದು ರೀತಿಯಲ್ಲಿ ಹವಳದ ಮಾಲೆಯಾಗುತ್ತದೆಯೇ ಹೊರತಾಗಿ ಕಲ್ಲು ಮಣಿಯಾಗಿ ನಿಲ್ಲಲಾರದು ದಿನಕರ ದೇಸಾಯಿಯವರು ಒಂದು ಮಾತನ್ನು ಹೇಳಿದ್ದಾರೆ. "ಕನ್ನಡದ ನಡುನಡುವೆ ಆಂಗ್ಲ ಒಗ್ಗರಣೆ ಹಾಕಿ ಮಾತನಾಡಿದರೆ ಆ ಹುಡುಗಿ ಜಾಣೆ. ಇಂಥ ಹುಡುಗಿಗೆ ಬೇಗ ಸಿಗಬಹುದು ಗಂಡ, ಅಚ್ಚಗನ್ನಡ ಮಾತು ಬರೀ ಬ್ರಹ್ಮದಂಡ'' ಎಂದು. ಆದ್ದರಿಂದ ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳನ್ನು ಬೆರೆಸಿ ಹೇಳಿದರೆ ಮೂಗು ಮುರಿಯುವುದು ಬೇಡ. ಅವರ ಮೂಗಿಗೆ ನೇರವಾಗಿ ಒಂದು ಮಾತನ್ನು ಹೇಳುವುದಾದರೆ ಫರಂಗಿ ಭಾಷೆಯ ಶಬ್ದವೇ ಇರಲಿ, ಕನ್ನಡದ ಮನೆ ತುಂಬಿದ ಮೇಲೆ ಆ ಶಬ್ದಗಳು ಕನ್ನಡದ ರಾಣಿಯಾಗುತ್ತಾರೆ. ಕನ್ನಡದ ದೀಕ್ಷೆಯನ್ನು ತೊಡುತ್ತಾಳೆ. ಬಸ್, ಲಾರಿ, ಸ್ಕೂಲು, ಸ್ಲೇಟು ಇದೆಲ್ಲ ಇಂಗ್ಲೀಷ್ ಪದಗಳೇ ಆಗಿದ್ದು ಕನ್ನಡೀಕರಣವಾಗಿ ಅವು ನಮ್ಮವೇ ಆಗಿವೆ.

ಮತ್ತೊಂದು ವಿಷಯವನ್ನು ಹೇಳುವುದಾದರೆ ಕನ್ನಡದ ಆಡಳಿತದ ಬಗ್ಗೆ ನಾವು ಎಷ್ಟು ಸುತ್ತೋಲೆಗಳನ್ನು ಕಳುಹಿಸಿದರೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಕನ್ನಡ ರಾಜ್ಯೋತ್ಸವಗಳನ್ನು ಮಾಡಿದರೂ ಕನ್ನಡ ಭಾಷೆ ಬೆಳೆಯುತ್ತಿಲ್ಲ. ಮಾನ್ಯ ದಿನಕರ ದೇಸಾಯಿಯವರು ಒಂದು ಮಾತನ್ನು ಹೇಳಿದ್ದಾರೆ.

"ಕನ್ನಡಾಂಬೆಗೆ ಇವರು ಹಾಕುವರು ಹಾರ,
ಆಂಗ್ಲ ನುಡಿಯಲ್ಲಿ ನಡೆಸುವರು ಸರಕಾರ,
ಕೇಳಿದರೆ ಹೇಳುವರು ಒಂದು ದಿನ ತಾಳಿ
ಆಮೇಲೆ ಕೂಡಲಿದೆ ಕನ್ನಡದ ಕೋಳಿ'' ಎಂದು.

ಮಾನ್ಯ ಅಧ್ಯಕ್ಷರೇ ಇದರಲ್ಲಿ ಏನಾಗಿದೆ ಕನ್ನಡ ಆಡಳಿತ ವಿಷಯ ಮಾಡಲಿಕ್ಕೆ ಹೋದರೂ ಕನ್ನಡ ಇಂಗ್ಲೀಷ್ ಆಗುತ್ತದೆ. ಇದನ್ನು ಒಂದು ರಾಜಕೀಯ ಪ್ರಶ್ನೆಯೆಂದು ಇಲ್ಲಿ ತರುವುದು ಬೇಡ. ಇದು ಒಂದು ಸಾಂಸ್ಕೃತಿಕ ಪ್ರಶ್ನೆಯಾಗಿದೆ. ಇದನ್ನು ಬಿಡಿಸಬೇಕು. ರಾಜ್ಯೋತ್ಸವ ಉತ್ಸವಗಳೇ ನಡೆಯಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿ, ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಅದರ ಬಗ್ಗೆ ಒಂದು ಶಾಶ್ವತವಾದ ಕೆಲಸವಾಗಬೇಕು. ಕೇವಲ ಮೆರವಣಿಗೆಯಾಗಬಾರದು. ಅದಕ್ಕೂ ಬೇಕಾದರೆ ಒಂದು ಮಾತು ಇದೆ. ಅದನ್ನು ಹೇಳುತ್ತೇನೆ.

"ವರುಷಕ್ಕೆ ಒಂದು ದಿನ ಮಾಡಿದರು ಹಬ್ಬ.
ಸಂಭ್ರಮದ ಮೆರವಣಿಗೆಯೇನು. ಅಬ್ಬಬ್ಬ.
ಆಮೇಲೆ ಪ್ರತಿ-ದಿವಸ ಮಾಡಿದರು ನಿದ್ದೆ.
ಭೂಮಿ ಬಂಜರು ಬಿದ್ದು ಬರಡಾಯ್ತು ಗದ್ದೆ. ಎಂದು ಇದೆ.

ಇದು ಹಾಗಾಗಬಾರದು. ಒಂದು ಶಾಶ್ವತ ಕೆಲಸವಾಗಬೇಕೆಂದು ಇಲ್ಲಿ ನಾನು ಹೇಳುತ್ತೇನೆ'.

ಇನ್ನು ಸಾಂಸ್ಕೃತಿಕ ಮತ್ತು ವಾರ್ತಾ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದು ಒಂದು ಪ್ರಚಾರದ ಮಾಧ್ಯಮ. ನಿಜವಾಗಿಯೂ ಇದು ಒಂದು ದೊಡ್ಡ ಅಸ್ತ್ರ. ಈ ಪ್ರಚಾರ ಮಾಧ್ಯಮ ಗ್ರಾಮಾಂತರ ಪ್ರದೇಶಗಳಿಗೂ ಹರಿದು ಬರಬೇಕು. ಬೈಗಳ ರೀತಿಯಲ್ಲಿ ಪ್ರಚಾರ ಮಾಡಬೇಕೆಂದು ಹೇಳುವುದಿಲ್ಲ. ತಾವು ಎಷ್ಟು ಸಾಧನೆ ಮಾಡಿರುತ್ತೀರೋ ಅದರ ಪಟ್ಟಿ ಪ್ರತಿ ಹಳ್ಳಿಹಳ್ಳಿಗೂ, ಹೋಬಳಿಗೂ ತಿಳಿಯಬೇಕು ಹಳ್ಳಿಗಳ ಮುಂದೆ ಅಭಿವೃದ್ಧಿ ಫಲಕಗಳನ್ನು ತೂಗಿಹಾಕಬೇಕು.

ಇನ್ನು ದೂರದರ್ಶನ ಮತ್ತು ರೇಡಿಯೋ ಬಗ್ಗೆ ಹೇಳಬೇಕೆಂದರೆ ಇದು ನಮ್ಮ ಕೈಯಲ್ಲಿ ಇಲ್ಲ. ಆದರೆ ಕೇಂದ್ರ ಸರ್ಕಾರದ ಹಿಡಿತದಲ್ಲಿ ಇರತಕ್ಕಂಥ ಒಂದು ಮಾಧ್ಯಮ. ಇದು ಕೇವಲ ಬೆಂಗಳೂರಿನಲ್ಲಿ ಮಾತ್ರ ಕನ್ನಡವನ್ನು ಬಿತ್ತರಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. ಕೇಂದ್ರ ಸರ್ಕಾರದವರು ಬಿತ್ತರಿಸತಕ್ಕಂಥ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಯಶಸ್ವಿಯಾಗಬೇಕಾದರೆ ಕನ್ನಡದಲ್ಲಿ ಪ್ರಸಾರ ಮಾಡಬೇಕು. ಆದರೆ ಕೇಂದ್ರ ಸರ್ಕಾರದವರು ಏನು ಮಾಡುತ್ತಿದ್ದಾರೆ ಎಂದರೆ ಅವರು ಬಿತ್ತರಿಸತಕ್ಕಂಥದ್ದು ಏನೇ ಇರಲಿ ಎಂಥದ್ದೇ ಇರಲಿ ಒಟ್ಟಿನಲ್ಲಿ ಹಿಂದಿ ಭಾಷೆಯನ್ನು ಸಾಮ್ರಾಜ್ಯ ಭಾಷೆಯನ್ನಾಗಿ ಮಾಡಬೇಕು, ಪ್ರತಿಯೊಂದು ರಾಜ್ಯದಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ಒಂದು ವಿಚಾರವನ್ನು ಇಟ್ಟುಕೊಂಡಿರುತ್ತಾರೆ. ಅದರಿಂದ ಕನ್ನಡ ಭಾಷೆಯನ್ನು ಅಭಿವೃದ್ಧಿ ಮಾಡಬೇಕು ಎನ್ನುವುದಷ್ಟೇ ಅಲ್ಲ. ಪ್ರತಿಯೊಂದು ಭಾಷೆಯ ಅಭಿವೃದ್ಧಿಯನ್ನು ಮಾಡಬೇಕು ಎನ್ನುವ ಕಳಕಳಿ ದೂರದರ್ಶನದವರು ಮತ್ತು ರೇಡಿಯೋ ಪ್ರಸಾರ ಮಾಧ್ಯಮದವರು ಇಟ್ಟುಕೊಳ್ಳಬೇಕು. ಕನ್ನಡದ ಪ್ರತಿಯೊಂದು ಭಾಗಕ್ಕೂ ಕನ್ನಡದ ಕಾರ್ಯಕ್ರಮಗಳು ಪ್ರಸಾರವಾಗಬೇಕು. ಇದು ರಾಜಧಾನಿಯಲ್ಲಿ ಮಾತ್ರವಾದರೆ ಸಾಲದು. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕಾಗಿತ್ತು. ಆದರೆ ಕಾಲದ ಮಿತಿ ಇರುವುದರಿಂದ ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಇನ್ನು ನಾಟಕಕಾರರ ಬಗ್ಗೆ ಹೇಳುವುದಾದರೆ ಅವರನ್ನು ಒಂದು ಜೀತದ ಆಳುಗಳಂತೆ ನೋಡುತ್ತಿದ್ದಾರೆ. ಅವರು ಬಹಳ ಕಷ್ಟದಲ್ಲಿ ಇರುತ್ತಾರೆ. ಅವರು ಪಂಜರದ ಗಿಳಿಯಂತೆ ಇರುತ್ತಾರೆ. ನಮ್ಮ ಸರ್ಕಾರದವರು ಮಾಡಬೇಕಾದ್ದು ಏನೆಂದರೆ ನಿಜವಾಗಿಯೂ ಯಾರು ಕಲಾಕಾರರು ಇರುತ್ತಾರೋ ಅವರಿಗೆ ಪ್ರೋತ್ಸಾಹವನ್ನು ನೀಡಬೇಕು. ಕಲಾಕಾರರು ಕೂಡಿಕೊಂಡು ಭಕ್ತಿ ನಾಟಕ ಮಂಡಲಿಗಳನ್ನು ಕಟ್ಟಿಕೊಂಡು ಬಂದರೆ, ಅವರಿಗೆ ಆರ್ಥಿಕ ಸಹಾಯವನ್ನು ನೀಡಬೇಕು, ಅವರಿಗೆ ಏನೋ ಒಂದುನೂರು ರೂಪಾಯಿಗಳ ಗೌರವಧನವನ್ನು ಕೊಟ್ಟರೆ ಸಾಲದು ಅವರು ಜೀವನವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ.

ಇನ್ನು ಸಾಕ್ಷಿ ಚಿತ್ರಗಳ ಬಗ್ಗೆ ಹೇಳುವುದಾದರೆ, ಕನ್ನಡದಲ್ಲಿಯೇ ತಯಾರಾದ ಸಾಕ್ಷಿ ಚಿತ್ರಗಳ ಪ್ರದರ್ಶನ ಹಳ್ಳಿಹಳ್ಳಿಗಳಲ್ಲಿಯೂ ಪ್ರಚಾರ ಮಾಡುವಂತ ವ್ಯವಸ್ಥೆಯಾಗಬೇಕು. ಬೇಂದ್ರೆ, ಡಾ. ಕೆ. ವಿ. ಪುಟ್ಟಪ್ಪನವರ ಸಾಕ್ಷಿ ಚಿತ್ರಗಳನ್ನು ಬೆಂಗಳೂರಿನಲ್ಲಿರುವ ಯಾವುದೋ ಸ್ಟುಡಿಯೋದಲ್ಲಿ ತೋರಿಸಿದರೆ ಆಗುವುದಿಲ್ಲ. ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿಯೂ ಈ ಸಾಕ್ಷಿ ಚಿತ್ರಗಳನ್ನು ತೋರಿಸುವಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಈಗ ಹಳೇ ಚಿತ್ರಮಂದಿರಗಳನ್ನು ಕೆಡವಿ ವ್ಯಾಪಾರ ಮಳಿಗೆಗಳನ್ನು ಕಟ್ಟುತಕ್ಕಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬಹಳ ಶೋಚನೀಯವಾದ ಪರಿಸ್ಥಿತಿ. ಇವುಗಳನ್ನು ತಡೆಯಲು ಕ್ರಮ ಕೈಗೊಳ್ಳಬೇಕು ಹಾಗೂ ಚಿತ್ರಮಂದಿರಗಳನ್ನು ಕೆಡುವುದೇ ಆದಲ್ಲಿ ಸದರಿ ವ್ಯಾಪಾರ ಮಳಿಗೆಯಲ್ಲಿ ಒಂದು ಚಿತ್ರಮಂದಿರವನ್ನು ಕಟ್ಟಬೇಕೆಂಬ ಬಗ್ಗೆ ಕಾನೂನಿನ ತಿದ್ದುಪಡಿ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಹಾಲಿ ಬೆಂಗಳೂರಿನಲ್ಲಿ ಕಟ್ಟಡಗಳ ನಿರ್ಮಾಣದ ನಿಬಂಧನೆಗಳ ಪ್ರಕಾರ ಹಾಗೆ ಮಾಡಲು ಅವಕಾಶವಿಲ್ಲ. ಆದ್ದರಿಂದ ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು.

ಆಮೇಲೆ ನಮ್ಮ ರಾಜ್ಯದಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಅವು ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಯಾಮ ಶಾಲೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಕ್ರಮ ಕೈಗೊಂಡಿದ್ದೀರಿ. ಇದು ಸೂಕ್ತವಾದುದು.

ಸಂಸ್ಕೃತಿ ಹೆಸರಿನಲ್ಲಿ ಯುವಕ ಯುವತಿಯರು ಕ್ಲಬ್‌ಗಳನ್ನು ನಡೆಸುತ್ತಿದ್ದಾರೆ. ನಿಜವಾಗಿಯೂ ಇದರ ಮೇಲೆ ನಿಯಂತ್ರಣ ಇಡಬೇಕಾಗುತ್ತದೆ.

ಇನ್ನು ವಿದ್ಯುತ್ ಮತ್ತು ಗಣಿ ಇಲಾಖೆಗಳ ಬಗ್ಗೆ ಒಂದೆರಡು ಮಾತುಗಳನ್ನು ಆಡಲು ನಾನು ಬಯಸುತ್ತೇನೆ. ನಿಜವಾಗಿ ನಮ್ಮ ಸರ್ಕಾರ ಬಂದ ಮೇಲೆ ಸರ್ಕಾರದ ಖಜಾನೆಗೆ ಇವುಗಳಿಂದ ಸಾಕಷ್ಟು ದುಡ್ಡು ಬಂದಿದೆ. ಹಿಂದೆ ಏನು ಉತ್ತರ ಹೇಳಿದ್ದೀರಿ ಎಂದರೆ ಖಾಸಗಿ ಒಡೆತನದ ಗಣಿ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡುವುದು ಸರ್ಕಾರದ ಉದ್ದೇಶವೆಂದಿದ್ದೀರಿ. ಆದರೆ ಈಗ ಏನು ಹೇಳುತ್ತಿದ್ದೀರೆಂದರೆ ಅವುಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ. ಸಧ್ಯಕ್ಕೆ ಆ ಉದ್ದೇಶ ಇಲ್ಲ ಎಂದು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಗುತ್ತಿಗೆ ಅವಧಿ ೧೦ ವರ್ಷವಿರುವುದನ್ನು ೨೦ ವರ್ಷಕ್ಕೆ ಮಾಡಬೇಕೆಂದು ಖಾಸಗಿಯವರು ದುಂಬಾಲು ಬಿದ್ದಿದ್ದಾರೆ. ಈ ವಿಚಾರವನ್ನು ಪರಿಶೀಲಿಸುವಾಗ ಸರ್ಕಾರದ ಖಜಾನೆಯ ಮೇಲಾಗುವ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ಒಂದು ಪಕ್ಷ ಅವರು ೨೦ ವರ್ಷಕ್ಕೆ ಕೇಳಿದರೂ ೧೦ ವರ್ಷಕ್ಕಿಂತ ಹೆಚ್ಚಿಗೆ ಅವಕಾಶ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಕನ್ನಡದ ಬಗ್ಗೆ ಜಮಖಂಡಿ ಮಹಾರಾಜರು ಹಿಂದೆ ನಿರ್ದಿಷ್ಟವಾಗಿ ಕ್ರಮ ಕೈಗೊಂಡಿದ್ದರೆಂದು ಕೇಳಿದ್ದೇನೆ. ಅದರಂತೆ ನಮ್ಮ ಸರ್ಕಾರವೂ ಸಹ ಆಸಕ್ತಿ ತಳೆಯುತ್ತಿದೆ. ಯಾರು ಕನ್ನಡ ಮಾಧ್ಯಮದಲ್ಲಿ ಓದಿ ಪಾಸಾಗುತ್ತಿದ್ದರೋ ಅಂಥವರಿಗೆ ಬಹುಮಾನ ಇಟ್ಟಿದ್ದುದು ಕಂಡುಬರುತ್ತದೆ. ಕನ್ನಡ ಮಾಧ್ಯಮದಲ್ಲಿ ಯಾರು ಓದಿ ಡಿಗ್ರಿ ಪಡೆಯುತ್ತಾರೋ ಅಂಥವರಿಗೆ ನೌಕರಿಯನ್ನು ಶಾಶ್ವತವಾಗಿ ಕೊಡುತ್ತೇವೆ ಎನ್ನುವ ಆಶ್ವಾಸನೆ ಸರ್ಕಾರದಿಂದ ಬಂದರೆ ಮಾತ್ರ ಭಾಷೆಯೊಂದೇ ಅಲ್ಲ ಇಂಜಿನಿಯರಿಂಗ್ ಮುಂತಾದ ತಾಂತ್ರಿಕ ಸಬ್ಜೆಕ್ಟ್‌ಗಳಲ್ಲೂ ಓದಲು ಅನುಕೂಲವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಂದು ಕೋರಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ವಿದ್ಯುತ್. ಪ್ರವಾಸೋದ್ಯಮ ಮತ್ತು ಯುವಜನ ಇಲಾಖೆಯ ಬೇಡಿಕೆಗಳನ್ನು ವಿರೋಧಿಸುತ್ತ ನಾಲ್ಕು ಮಾತುಗಳನ್ನು ಆಡಲು ಇಚ್ಛಿಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ವಿದ್ಯುತ್ ಇಲಾಖೆ ತುಂಬಾ ಪ್ರಮುಖವಾದುದು ರಾಜ್ಯ ಸರ್ವತೋಮುಖ ಪ್ರಗತಿ ಸಾಧಿಸಲು, ನಿರುದ್ಯೋಗ ಹೋಗಲಾಡಿಸಲು ಈ ಇಲಾಖೆಯ ಪಾತ್ರ ಬಹಳ ಮಹತ್ವವಾದುದಾಗಿದೆ. ಆದರೆ ಸರ್ಕಾರ ಇದಕ್ಕೆ ಸಾಕಷ್ಟು ಗಮನಕೊಡುತ್ತಿಲ್ಲ. ೧೯೮೩–೮೪ರಲ್ಲಿ ಈ ಇಲಾಖೆಗೆ ೧೧೪ ಕೋಟಿ ಪ್ಲಾನ್ ಔಟ್‌ಲೇನಲ್ಲಿ ಕೊಟ್ಟಿದ್ದರು. ೧೯೮೪–೮೫ರಲ್ಲಿ ೯೮ ಕೋಟಿ ಮಾತ್ರ ಇಟ್ಟಿದ್ದಾರೆ. ಈ ವರ್ಷ ತಾವು ೮೧.೩೧ ಕೋಟಿ ಇಟ್ಟಿರುವುದನ್ನು ಕಾಣಬಹುದು. ಇದರಿಂದ ಏನನ್ನಿಸುತ್ತದೆ. ಎಂದರೆ ಕರ್ನಾಟಕವು ಈ ಇಲಾಖೆಯ ಬಲವನ್ನು ಕಡಿಮೆ ಮಾಡುತ್ತಾ ಬಂದು ಇದರ ಪ್ರಾಮುಖ್ಯತೆಯನ್ನು ತಗ್ಗಿಸುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಬಹು ಮಂದಿ ಜನ ಕೃಷಿಯನ್ನೇ ಅವಲಂಬಿಸಿದ್ದಾರೆ ಅಂಕಿ ಸಂಖ್ಯೆಗಳನ್ನು ತೆಗೆದುನೋಡಿದರೆ ನೀರಾವರಿ ಪಂಪ್‌ಸೆಟ್‌ಗಳಿಗೆ ಶೇಕಡ ೨ರಷ್ಟು ಮಾತ್ರ ವಿದ್ಯುತ್ತನ್ನು ಕೊಡುತ್ತಿದ್ದಾರೆಂಬುದು ಮಾತ್ರ ಗೊತ್ತಾಗುತ್ತದೆ ಇದರಿಂದ ನಮ್ಮ ಉತ್ಪನ್ನ ಕಡಿಮೆಯಾಗುತ್ತಿದೆ. ಸಾಕಷ್ಟು ಕಷ್ಟವನ್ನು ನಾವು ಎದುರಿಸಬೇಕಾದಂಥ ಪ್ರಸಂಗ ಬಂದಿದೆ ಈ ದಿವಸ ಕೇವಲ ಶೇಕಡ ೫೦ರಷ್ಟು ಇರ್ರಿಗೇಷನ್ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಿಕೊಟ್ಟಿದ್ದಾರೆ. ಈಗಿರತಕ್ಕ ಬಾವಿಗಳ ಮೂರರಷ್ಟು ಬಾವಿಗಳಲ್ಲಿ ನೀರು ಚೆನ್ನಾಗಿದ್ದರೂ ಕೇವಲ ೬ ಪರ್ಸೆಂಟ್ ಮಾತ್ರ ವಿದ್ಯುತ್ ಕೊಟ್ಟು ರೈತರಿಗೆ ತೊಂದರೆ ಕೊಡುತ್ತಿದ್ದಾರೆ ನಮ್ಮ ಅಕ್ಕ ಪಕ್ಕದ ರಾಜ್ಯಗಳನ್ನು ತೆಗೆದುಕೊಂಡರೆ ಪಕ್ಕದ ಆಂಧ್ರದಲ್ಲಿ ಶೇಕಡ ೨೦ ರಷ್ಟು ತಮಿಳುನಾಡಿನಲ್ಲಿ ಶೇಕಡ ೭೭ರಷ್ಟು ಕೊಟ್ಟಿದ್ದಾರೆ ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಸರ್ಕಾರ ನಮ್ಮ ರೈತರಿಗೆ ಯಾವರೀತಿ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ ಎಂದು.

೩. ೩೦ಪಿ.ಎಂ.

ಇವತ್ತು ೨ ರೂ.ಗೆ ಒಂದು ಕೆ.ಜಿ ಅಕ್ಕಿ ಕೊಡಬೇಕೆಂಬ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಸಾಕಷ್ಟು ಅಕ್ಕಿ ಉತ್ಪನ್ನ ಆಗದಿದ್ದರೆ ಈ ಕಾರ್ಯಕ್ರಮದ ಗತಿಯೇನು? ಈ ಕಾರ್ಯಕ್ರಮಕ್ಕೆ ೬೦ ಕೋಟಿ ಇಟ್ಟಿದ್ದಾರೆ. ಅಕ್ಕಿ ಅಭಾವದಿಂದ ಬರುವ ವರ್ಷ ೧೨೦ ಕೋಟಿ ಇಡಬೇಕಾಗಬಹುದು. ಬಡ ಜನತೆಗೆ ಇದು ಕಷ್ಟತರುತ್ತದೆಂದು ಹೇಳಬಯಸುತ್ತೇನೆ.

ಆದ್ದರಿಂದ ಸರ್ಕಾರದವರು ಬಡವರಿಗೆ ಸಹಾಯ ಮಾಡುವಂತಹ ಯಾವುದೇ ಯೋಜನೆಗಳನ್ನು ಕೈಕೊಳ್ಳುವುದಕ್ಕೆ ಮೊದಲು ನೀರಾವರಿ ಸೌಕರ್ಯಗಳನ್ನು ಹೆಚ್ಚು ಮಾಡಬೇಕು. ಪಂಪ್‌ಸೆಟ್ಟುಗಳಿಗೆ ಹೆಚ್ಚು ವಿದ್ಯುತ್ ಒದಗಿಸಬೇಕು. ಈ ರೀತಿ ಮಾಡುವಾಗ ಮಾತ್ರ ನಾವು ಬರುವ ವರ್ಷಗಳಲ್ಲಿ ಬಡವರಿಗೆ ಅಗ್ಗದ ದರದಲ್ಲಿಅಕ್ಕಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಈಗ ಅಗ್ಗದ ದರದಲ್ಲಿ ಅಕ್ಕಿಯನ್ನು ಒದಗಿಸಲು ಸರ್ಕಾರದವರು ಏನು ಸಬ್ಸಿಡಿ ಕೊಡುತ್ತಿದ್ದಾರೆ, ಈ ಸಬ್ಸಿಡಿ ಹಣ ಕೂಡ ಎಲ್ಲಿಂದ ಬರುತ್ತದೆಂದರೆ, ಬಡವರು ಕೊಡುವಂತಹ ತೆರಿಗೆ ಹಣದಿಂದಲೇ ಬರುತ್ತಿದೆ. ಮಾರಾಟ ತೆರಿಗೆ ಮತ್ತು ಎಕ್ಸೈಜ್ ಡ್ಯೂಟಿ ಎನು ವಿಧಿಸಲಾಗುತ್ತಿದೆ, ಇದು ಹೆಚ್ಚಾಗಿ ಬಡವರಿಂದಲೇ ವಸೂಲಾಗುತ್ತಿರುವುದು. ಈ ಹಣವನ್ನು ಸಬ್ಸಿಡಿಗಾಗಿ ಬಳಸಲಾಗುತ್ತಿದೆ. ಈ ಸಬ್ಸಿಡಿ ಹಣ ವರ್ಷ ವರ್ಷ ಜಾಸ್ತಿಯಾದರೆ ಮುಂ ಮತ್ತೆ ಬಡವರ ರಕ್ತವನ್ನೇ ತೆರಿಗೆ ಹೆಚ್ಚು ಮಾಡುವುದರ ಮೂಲಕ ಹಿಂಡಬೇಕಾಗುತ್ತದೆ. ಆದುದರಿಂದ ಅವಕ್ಕೆ ಅವಧಿ ಕೊಡಬಾರದು ಇದಕ್ಕೆ ಬದಲು ಹೆಚ್ಚಿನ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸಬೇಕು, ಆಗ ಹೆಚ್ಚಿನ ಆಹಾರಧಾನ್ಯ ಉತ್ಪಾದನೆಯಾಗುತ್ತದೆ. ೧೯೬೯ರಲ್ಲಿ ನಮ್ಮ ರಾಜ್ಯದವರು ಕೈಕೊಂಡ ವಿದ್ಯುತ್ ನೀತಿಯು ತಪ್ಪಿನಿಂದಾಗಿ ಇವೊತ್ತು ಯುವ ಜನರು ಸಾಕಷ್ಟು ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಶೇಕಡಾ ೭೦ರಷ್ಟು ವಿದ್ಯುತ್‌ನ್ನು ಕೈಗಾರಿಕೆಗಳೇ ಬಳಸುತ್ತಿವೆ. ಇದರಲ್ಲಿ ಶೇಕಡಾ ೬೫ರಷ್ಟನ್ನು ೨೦ ಎಲೆಕ್ಟ್ರೋ ಮೆಟಲರ್ಜಿಕಲ್ ಕೆಮಿಕಲ್ಸ್ ಕೈಗಾರಿಕೆಗಳು ಉಪಯೋಗಿಸುತ್ತಿವೆ. ಆದರೆ ಇವು ಕೆಲಸ ಕೊಡುತ್ತಿರುವುದು ಕೇವಲ ೪ ಸಾವಿರ ಜನತೆಗೆ ಮಾತ್ರ. ಶೇಕಡಾ ೩೩ರಷ್ಟು ವಿದ್ಯುತ್ತನ್ನು ಉಪಯೋಗ ಮಾಡುವಂತಹ ೧೩೦೦ ಹೈಟೆನ್ಷನ್ ಕೈಗಾರಿಕೆಗಳು ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಕೆಲಸ ಒದಗಿಸುತ್ತಿವೆ. ಅದೇ ಶೇಕಡಾ ೩೩ರಷ್ಟು ವಿದ್ಯುತ್ ಬಳಸುತ್ತಿರುವ ಸಣ್ಣ ಸಣ್ಣ ಕೈಗಾರಿಕೆಗಳು ಎರಡೂವರೆ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸುತ್ತಿವೆ. ಇದನ್ನೆಲ್ಲಾ ಲೆಕ್ಕ ಹಾಕಿದಾಗ ಇನ್ನೂ ೫ ಲಕ್ಷ ಜನರಿಗೆ ಉದ್ಯೋಗ ಸಿಗುವುದು ತಪ್ಪಿಹೋಗಿದೆ. ಸರ್ಕಾರದ ಒಂದು ತಪ್ಪು ಲೆಕ್ಕದಿಂದಾಗಿ ಈ ರೀತಿ ಆಗಿದೆ ಎಂದು ಅರ್ಥವಾಗುತ್ತದೆ, ಇನ್ನು ಮುಂದೆಯಾದರೂ ಸರ್ಕಾರದವರು ಕಾಳಿ ನದಿಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ರಾಯಚೂರಿನ ಥರ್ಮಲ್ ಪ್ಲಾಂಟಿನಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಮತ್ತು ಕೇಂದ್ರದ ಬೇರೆ ಬೇರೆ ಪ್ರಾಜೆಕ್ಟ್‌ಗಳಿಂದ ದೊರೆಯುವಂತಹ ವಿದ್ಯುತ್‌ನ್ನು ಸರಿಯಾಗಿ ಉಪಯೋಗಿಸುವುದು ಒಳ್ಳೆಯದು. ಇವೊತ್ತು ನಾವು ನಮ್ಮ ಆವರೇಜ್ ತೆಗೆದುಕೊಂಡರೂ ಸಹ ಕರ್ನಾಟಕ ರಾಜ್ಯದಲ್ಲಿ ಒಂದು ಮಿಲಿಯನ್ ಯೂನಿಟ್‌ನಿಂದ ೧೧೬ ಜನರಿಗೆ ಉದ್ಯೋಗ ಸಿಕ್ಕಿದ್ದರೆ ಅಖಿಲಭಾರತ ಮಟ್ಟದಲ್ಲಿ ೧೬೭ ಜನರಿಗೆ ಉದ್ಯೋಗ ಸಿಕ್ಕಿದೆ, ವೇಜಸ್ ತೆಗೆದುಕೊಂಡರೂ ಸಹ ಕರ್ನಾಟಕ ರಾಜ್ಯದಲ್ಲಿ ೬.೪ ಲಕ್ಷವಾದರೆ ಅಖಿಲಭಾರತ

ಮಟ್ಟದಲ್ಲಿ ೯.೮೪ ಲಕ್ಷದಷ್ಟಿದೆ. ಫಿಕ್ಸೆಡ್ ಕ್ಯಾಪಿಟಲ್ ತೆಗೆದುಕೊಂಡರೆ, ನಮ್ಮದು ೨೬.೬೭ ಲಕ್ಷದಷ್ಟು ಇದ್ದರೆ ಅಖಿಲಭಾರತ ಮಟ್ಟದಲ್ಲಿ ೯೯.೬೫ರಷ್ಟು ಇದೆ. ಲಾಸ್ ಔಟ್‌ಫುಟ್ ನಮ್ಮದು ಶೇಕಡಾ ೫೧.೫೧ ಇದ್ದರೆ ಅಖಿಲಭಾರತ ಮಟ್ಟದಲ್ಲಿ ೮೫.೧೫ ರಷ್ಟು ಇದೆ. ಇದರಲ್ಲಿಯೂ ಸಹ ನಮ್ಮದೇ ಕೆಳಮಟ್ಟದಲ್ಲಿ ಇದೆ. ಇದನ್ನು ಮೇಲ್ಮಟ್ಟದಲ್ಲಿ ತೆಗೆದುಕೊಂಡು ಬರಬೇಕಾದರೆ ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾಗಬೇಕು ಮತ್ತು ಹೆಚ್ಚಿನ ಜನರಿಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನುಮತಿ ಕೊಡಬೇಕು. ಇದರಿಂದ ಹೆಚ್ಚಿನ ಜನರಿಗೆ ಕೆಲಸ ಒದಗಿಸಿಕೊಡಲು ಸಹ ಸಾಧ್ಯವಾಗುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಕೂಡ ಹೆಚ್ಚಿದೆ. ಶೇಕಡಾ ೨೨.೧ ರಷ್ಟು ಲಾಸ್ ಆಗುತ್ತಿದೆ. ಶೇಕಡಾ ಒಂದರಷ್ಟು ಲಾಸನ್ನು ಮಾಡಿದರೂ ಸಹ ನಮಗೆ ಎರಡು ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಕಡಿಮೆ ಮಟ್ಟಕ್ಕೆ ತರಲು ಸರ್ಕಾರ ಪ್ರಯತ್ನ ಮಾಡಬೇಕು. ನಾವು ನೋಡುತ್ತಿರುವ ಪ್ರಕಾರ ಸರ್ಕಾರ ಆಗಾಗ್ಗೆ ವಿದ್ಯುತ್ ದರವನ್ನು ಹೆಚ್ಚು ಮಾಡುತ್ತಿದೆ. ಇದರಿಂದ ಬರುವಂತಹ ಹಣವನ್ನು ವಿದ್ಯುತ್ ಉತ್ಪಾದನೆಗೆ ಉಪಯೋಗಿಸಿದ್ದರೆ ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಇದರಿಂದ ಬರುವಂತಹ ಹೆಚ್ಚಿನ ಹಣವನ್ನು ಆಡಳಿತದ ಖರ್ಚಿಗೆ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ಗೋಸ್ಕರವಾಗಿ ಬಳಸುತ್ತಿದ್ದಾರೆ. ಇದರಿಂದ ನಮ್ಮ ಜನರಿಗೆ ಯಾವ ಒಂದು ಪ್ರಯೋಜನವೂ ಆಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ದಾರಿ ದೀಪಗಳನ್ನು ಹಾಕಲಾಗಿದೆ ಎಂದು ಹೇಳುತ್ತಾರೆ. ಆದರೆ ಬಲ್ಬುಗಳು ಕೆಟ್ಟಾಗ ಅವುಗಳನ್ನು ಕೂಡಲೇ ಬದಲಾವಣೆ ಮಾಡದಿರುವ ಕಾರಣದಿಂದ ಇವರ ಒಂದು ಕಾರ್ಯಕ್ರಮ ಯಶಸ್ವಿಯಾಗಿಲ್ಲವೆಂದು ಹೇಳುತ್ತಿದ್ದೇನೆ. ಈ ಕೆಲಸವನ್ನು ಈಗ ಆಯಾ ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಆದರೆ ಅವರಲ್ಲಿ ಸಾಕಷ್ಟು ಹಣವಿಲ್ಲದ ಕಾರಣದಿಂದ ಅವರು ಕೆಟ್ಟ ಬಲ್ಬುಗಳನ್ನು ಕೂಡಲೇ ಬದಲಾವಣೆ ಮಾಡುತ್ತಿಲ್ಲ. ಈ ಕಾರಣದಿಂದ ಈ ಕೆಲಸವನ್ನು ವಿದ್ಯುತ್ ಮಂಡಲಿಯವರೇ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ಏನು ವಿದ್ಯುತ್ ಶುಲ್ಕವನ್ನು ಜನರಿಂದ ವಸೂಲಿ ಮಾಡಲಾಗುತ್ತಿದೆ, ಇದು ಮೀಟರ್ ಫಿಕ್ಸ್ ಮಾಡಲು ಮತ್ತು ಶುಲ್ಕ ವಸೂಲು ಮಾಡಲು ಸಹ ಆಗುವ ಖರ್ಚಿಗೂ ಸಾಕಾಗುತ್ತಿಲ್ಲ. ಈ ಕಾರಣದಿಂದ ನೀರಾವರಿ ಪಂಪ್‌ಸೆಟ್ಟುಗಳಿಗೆ ಈಗ ಫ್ಲಾಟ್-ರೇಟ್‌ನ್ನು ಏನು ವಿಧಿಸಲಾಗುತ್ತಿದೆ, ಅದೇರೀತಿ ಫ್ಲಾಟ್-ರೇಟನ್ನು ಸರ್ವವಿದ್ಯುತ್ ಗೃಹಗಳನ್ನು ಬಿಟ್ಟು ಇನ್ನಿತರ ಬಡವರು ಉಪಯೋಗ ಮಾಡುತ್ತಿರುವ ವಿದ್ಯುತ್‌ಗೆ ವಿಧಿಸಬೇಕೆಂದು ಹೇಳುತ್ತೇನೆ. ಇರಿಗೇಷನ್ ಪಂಪ್‌ಸೆಟ್ಟುಗಳಿಗೆ ಫ್ಲಾಟ್-ರೇಟನ್ನು ವಿಧಿಸುತ್ತಿರುವುದರಿಂದ ವಿದ್ಯುತ್ ಮಂಡಲಿಗೆ ಹೆಚ್ಚಿಗೆ ಎರಡು ಕೋಟಿ ರೂಪಾಯಿಗಳಷ್ಟು ಲಾಭ ಬರುತ್ತಿರುವುದರಿಂದ, ಬಡವರು ಮನೆಗಳಿಗೆ ಬಳಸುವ ವಿದ್ಯುತ್‌ಗೂ ಸಹ ಫ್ಲಾಟ್-ರೇಟ್‌ನ್ನು ವಿಧಿಸಿದರೆ ಹೆಚ್ಚಿನ ಆದಾಯ ಬರುತ್ತದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ವಿದ್ಯುತ್ ಮಂಡಲಿಯನ್ನು ಮತ್ತು ಮೈಸೂರು ಪವರ್ ಕಾರ್ಪೊರೇಷನ್‌ನ್ನು ಮರ್ಜ್ ಮಾಡುವ ಕೆಲಸ ನಡೆದಿದೆ. ಇದು ಸರಿಯಲ್ಲ. ಇವೆರಡೂ ಸಹ ಮಾಡುತ್ತಿರುವ ಕೆಲಸಗಳು ಬೇರೆ ಬೇರೆಯಾದ ಕಾರಣ ಇವುಗಳನ್ನು ಮಾಡಬಾರದೆಂದು ಹೇಳುತ್ತೇನೆ.

(ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಪ್ರವಾಸೋದ್ಯಮ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಇಲಾಖೆಯನ್ನು ನೋಡಿಕೊಳ್ಳಲು ತರುಣರಾದಂಥ ಮತ್ತು ಉತ್ಸಾಹಶಾಲಿಗಳಾದಂಥ ಮಂತ್ರಿಗಳು ಇದ್ದಾರೆ. ಈ ಮಂತ್ರಿಗಳು ತಮ್ಮಲ್ಲಿ ಸಾಕಷ್ಟು ಹಣವಿಲ್ಲದಿದ್ದರೂ ಸಹ ಹಲವಾರು ಯೋಜನೆಗಳನ್ನು ಹಾಕಿಕೊಂಡಿರುವುದು ಸರಿಯಲ್ಲ. ಹಣವಿದ್ದಷ್ಟು ಯೋಜನೆಗಳನ್ನು ಹಾಕಿಕೊಂಡು, ಅವುಗಳನ್ನು ಸಫಲಗೊಳಿಸಲು ಪ್ರಯತ್ನ ಮಾಡಬೇಕೇ ಹೊರತು ಹೆಚ್ಚಿನ ಕಾರ್ಯಕ್ರಮ ಹಾಕಿಕೊಳ್ಳುವುದು ಸರಿಯಲ್ಲ. ಇದರಿಂದ ಜನರನ್ನು ಮೋಸಗೊಳಿಸಿದಂತೆ ಆಗುತ್ತದೆ ಮತ್ತು ತಪ್ಪುದಾರಿಗೆ ಎಳೆದಂತೆ ಆಗುತ್ತದೆ. ಬೆಂಗಳೂರು ನಗರದಲ್ಲಿ ಒಂದು ಫುಟ್‌ಬಾಲ್ ಸ್ಟೇಡಿಯಂ ಇದೆ. ಇದರ ಕೆಲಸವನ್ನು ಹಲವಾರು ವರ್ಷಗಳಿಂದ ಮುಗಿಸಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣವೇನು ? ಇದೊಂದು ಸ್ವಾಯತ್ತ ಸಂಸ್ಥೆ ಆಗಿದೆ ಎಂದು ತಾವು ಉತ್ತರ ಕೊಡಬಹುದು. ಆದರೆ ಇದಕ್ಕೆ ಸರ್ಕಾರ ಹಣ

ಕೊಟ್ಟಿದೆ ಮತ್ತು ಭೂಮಿ ಕೊಟ್ಟಿದೆ. ಆದ್ದರಿಂದ ಅಲ್ಲಿ ಏನು ಅವ್ಯವಹಾರ ನಡೆದಿದೆ, ಆ ಬಗ್ಗೆ ಸರ್ಕಾರ ವಿಚಾರಣೆ ಮಾಡಬೇಕು. ಇಲ್ಲಿ ಸಾಕಷ್ಟು ಟೂರ್ನಮೆಂಟ್‌ಗಳು ನಡೆಯುತ್ತಿದೆ. ಇದಕ್ಕೆ ಸಾರ್ವಜನಿಕರೂ ಸಾಕಷ್ಟು ಬೆಂಬಲ ಕೊಡುತ್ತಿದ್ದಾರೆ ಈ ಕಾರಣದಿಂದ ಬಾಕಿಯಿರುವ ಕೆಲಸವನ್ನು ಕೂಡಲೇ ಮುಗಿಸಬೇಕೆಂದು ಸಲಹೆ ಮಾಡುತ್ತೇನೆ. ಈ ಕೆಲಸ ಮಾಡಲು ಅಲ್ಲಿನವರಿಗೆ ಸಾಧ್ಯವಾಗ ದಿದ್ದರೆ ಸರ್ಕಾರದವರು ಆ ಸಂಸ್ಥೆಯನ್ನು ರದ್ದು ಮಾಡಿ ಸರ್ಕಾರದವರೇ ನೇರವಾಗಿ ಅಲ್ಲಿನ ಕೆಲಸಗಳನ್ನು ಮಾಡಿ ಮುಗಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ಬರುವಂತಹ ಅಲಸೂರು ಕೆರೆ ಏನಿದೆ, ಅದನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಬೇಕೆಂದು ಸಾಕಷ್ಟು ಪ್ರಯತ್ನಗಳು ನಡೆದಿವೆ, ಈ ಬಗ್ಗೆ ಸಾಕಷ್ಟು ಪತ್ರಿಕಾ ಹೇಳಿಕೆಗಳೂ ಸಹ ಬಂದಿವೆ. ಈ ಕೆಲಸವನ್ನು ಮಾಡಲು ಹಲವಾರು ಕಮಿಟಿಗಳನ್ನು ಸಹ ಮಾಡಿದ್ದಾರೆ. ಇಷ್ಟೆಲ್ಲಾ ನಡೆದ ಮೇಲೂ ಸಹ ಸಂಜೆ ೬ ಗಂಟೆಯ ನಂತರ ಆ ಕೆರೆಯ ಹತ್ತಿರ ಹೋಗುವುದಕ್ಕಾಗು ವುದಿಲ್ಲ. ಏಕೆಂದರೆ, ಆ ಪ್ರದೇಶದಲ್ಲಿ ಸಾಕಷ್ಟು ದಾರಿ ದೀಪಗಳು ಇಲ್ಲ. ನಮ್ಮ ಸರ್ಕಾರದ ಮೂಗಿನ ಕೆಳಗಿರುವಂತಹ ಜಾಗವೇ ಈ ಸ್ಥಿತಿಗೆ ಬಂದಿದೆ. ಇಂಥಾದ್ದೇ ಒಂದು ಕೆರೆ ಬೇರೆ ನಗರಗಳಲ್ಲಿ ಇದ್ದಿದ್ದರೆ ಅಲ್ಲಿನವರು ಒಂದು ದೊಡ್ಡ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮತ್ತು ಒಂದು ಸುಂದರ ತಾಣವನ್ನಾಗಿ ಮಾಡುತ್ತಿದ್ದರು. ಈಗ ಅಲಸೂರು ಕೆರೆಯ ಬಳಿ ಅದಷ್ಟು ಮಟ್ಟಿಗೆ ಈ ಕೆರೆಯನ್ನು ಶುದ್ಧವಾಗಿಡ ಬೇಕು, ಎಂಬತಕ್ಕಂಥ ಬೋರ್ಡನ್ನು ಹಾಕಿದ್ದಾರೆ. ಇದರ ಜೊತೆಗೆ 'ಬಿಬಿಬಿ' ಎನ್ನತಕ್ಕಂಥ ಬೋರ್ಡನ್ನು ಸಹ ಹಾಕಿದ್ದಾರೆ. 'ಬಿ.ಬಿ.ಬಿ.' ಎಂದರೆ 'Bring back Bangalore beauty' ಎಂದು. ಈ ರೀತಿಯಲ್ಲಿ ಬೋರ್ಡ್ ಬರೆದುಬಿಟ್ಟರೆ ಅಷ್ಟು ಸುಲಭವಾಗಿ ಕೆಲಸವಾಗುತ್ತದೆಂದು ಮಾನ್ಯ ಮಂತ್ರಿಯವರು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಸೌಂದರ್ಯವನ್ನು ಹೆಚ್ಚು ಮಾಡ ಬೇಕಾದರೆ ಅದಕ್ಕೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಅದಕ್ಕಾಗಿ ಹೆಚ್ಚು ಹಣವನ್ನು ವೆಚ್ಚ ಮಾಡಿದರೆ ಮಾತ್ರ ಸೌಂದರ್ಯವನ್ನು ಉಳಿಸಿಕೊಳ್ಳಲು ಸಾಧ್ಯ. ಇನ್ನೊಂದು ವಿಷಯವನ್ನು ನಮ್ಮ ಸ್ನೇಹಿತರು ಮಾತನಾಡುತ್ತಾ ಹೇಳಿದರು ಕೇಂದ್ರ ಸರ್ಕಾರದವರು ಹಿಂದಿಯನ್ನು ತರಲಿಕ್ಕೆ ಎಲ್ಲಾ ಕಡೆ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ರಾಷ್ಟ್ರ ಭಾಷೆಯಾದ ಹಿಂದಿಯನ್ನೇ ಎಲ್ಲಾ ಕಡೆಗೂ ತರಬೇಕೇ ಹೊರತು ಬೇರೆ ಯಾವುದೇ ಭಾಷೆಯನ್ನು ತರಲಿಕ್ಕೆ ಸಾಧ್ಯವಿಲ್ಲ. ಇವತ್ತು ಎಲ್ಲಾ ಕಡೆ ರಾಷ್ಟ್ರ ಧ್ವಜ ಇದೆ, ನ್ಯಾಷನಲ್ ಆಂತಮ್ ಇದೆ, ಹಿಂದಿ ಭಾಷೆ ಬೇಡ ಎಂದರೆ ಅದು ಸರಿಯಲ್ಲ ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಮಾಡದೆ ಬೇರೆ ಭಾಷೆಯನ್ನು ರಾಷ್ಟ್ರಭಾಷೆಯಾಗಿ ಮಾಡುವುದಕ್ಕಾಗುವುದಿಲ್ಲ. ನಾವೆಲ್ಲರೂ ಕನ್ನಡವನ್ನು ಕಲಿಯಬೇಕು ಆದರೆ ದೇಶದ ಐಕ್ಯತೆಗಾಗಿ ಹಿಂದಿ ನಮಗೆ ಬೇಕಾಗಿದೆ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ). ಸನ್ಮಾನ್ಯ ಅಧ್ಯಕ್ಷರೇ, ಈ ದಿನ ೩-೪ ಬೇಡಿಕೆ ಗಳನ್ನು ಒಟ್ಟಿಗೆ ಸೇರಿಸಿ ಮಾತನಾಡಬೇಕೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಇದು ಬಹಳ ಕಷ್ಟವಾದ ಕೆಲಸ. ಏಕೆಂದರೆ ಒಂದೊಂದು ವಿಷಯದ ಮೇಲೂ ಹಲವಾರು ಗಂಟೆಗಳ ಕಾಲ ಮಾತನಾಡಬಹು ದಾಗಿತ್ತು. ಈಗ ವೇಳೆ ಕಡಿಮೆ ಇರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ ಗಣಿಗಳ ಬಗ್ಗೆ ಹೇಳಬೇಕಾದರೆ, ಇದರ ಮೇಲೆ ಎರಡು ಮಾತುಗಳನ್ನು ಹೇಳ ಬಹುದು. ಒಂದು ಮಾತನ್ನು ಈಗಾಗಲೇ ಶ್ರೀಮಾನ್ ದೊಡ್ಡಮೇಟಿಯವರು ಹೇಳಿದ್ದಾರೆ. ಗಣಿ ಗಳನ್ನು ರಾಷ್ಟ್ರೀಕರಣ ಮಾಡುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಏಕೆಂದರೆ, ಗಣಿ ಎನ್ನುವುದು ಅತಿ ಮುಖ್ಯವಾದಂತಹ ಮತ್ತು ನಮ್ಮ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಬೇಕಾಗುವಂತಹ ಅನುಕೂಲತೆಗಳನ್ನು ಮತ್ತು ಸಂಪನ್ಮೂಲಗಳನ್ನು ಕೊಡುವಂತಹ ಇಲಾಖೆ ಇದು. ಈ ಇಲಾಖೆಯಲ್ಲಿ ಬೇಕಾದಹಾಗೆ ಅವ್ಯವಹಾರಗಳು ನಡೆಯುತ್ತಿವೆ. ಗಣಿ ಪ್ರದೇಶವನ್ನು ಲೀಸ್ ಕೊಡುವ ವಿಷಯದಲ್ಲಿ ಅವ್ಯವಹಾರ ನಡೆಯುತ್ತಿದೆ. ಮತ್ತೆ ರಾಜ್ಯ ಸರ್ಕಾರಕ್ಕೆ ಬರಬೇಕಾದ ರಾಯಲ್ಟಿ ಮತ್ತು ಗಣಿಗಳ ಟ್ಯಾಕ್ಸಸ್‌ನಲ್ಲಿ ಅವ್ಯವಹಾರ ನಡೆಯುತ್ತಿದೆ ಅದರಲ್ಲೂ ಮಾರಾಟ ಮಾಡುವುದರಲ್ಲಿ ಬಹಳ ಮೋಸ ನಡೆಯುತ್ತಿದೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ರಾಯಲ್ಟಿ ಮತ್ತು ಟ್ಯಾಕ್ಸಸ್ ಬರುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ನಮ್ಮ ರಾಷ್ಟ್ರದಲ್ಲಿ ಇರುವ ಎಲ್ಲಾ ಗಣಿಗಳನ್ನು

ರಾಷ್ಟ್ರೀಕರಣ ಮಾಡಬೇಕೆಂದು ಕೇಂದ್ರ ಸರ್ಕಾರವು ಆಲೋಚನೆ ಮಾಡುತ್ತಿದೆ ಎಂದು ಬಹಳ ದಿನಗಳ ಹಿಂದೆ ಹೇಳಿಕೆಯನ್ನು ಕೊಟ್ಟಿತ್ತು. ಆದರೆ ಇದುವರೆಗೂ ಈ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಏಕೋ ಏನೋ ಗಮನ ಹರಿಸಿದಂತೆ ಕಾಣುತ್ತಿಲ್ಲ. ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರವು ಇದರ ಬಗ್ಗೆ ಒತ್ತಾಯ ತಂದು ಆದಷ್ಟು ಬೇಗ ಈ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ಹಾಗೆ ಮಾಡಬೇಕು. ಇದೇ ಸಂದರ್ಭದಲ್ಲಿ ಹಟ್ಟಿ ಚಿನ್ನದ ಗಣಿ ಬಗ್ಗೆ ಹೇಳಬೇಕಾದರೆ, ಹಟ್ಟಿ ಚಿನ್ನದ ಗಣಿಯಲ್ಲಿ ಸಿಗುವ ಚಿನ್ನಕ್ಕೂ ಮತ್ತು ನಾವು ಅದನ್ನು ಹೊರಕ್ಕೆತೆಗೆಯುವಚಿನ್ನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಂಕಿ ಅಂಶಗಳಪ್ರಕಾರ ಹಟ್ಟಿ ಚಿನ್ನದ ಗಣಿಯಲ್ಲಿ ಸುಮಾರು ೯೦ ಸಹಸ್ರ ಕಿಲೋಗ್ರಾಂ ಚಿನ್ನದೊರಕುತ್ತದೆ ಆದರೆ ನಾವು ಹೊರಕ್ಕೆ ತೆಗೆಯುವ ಚಿನ್ನ ವರ್ಷಕ್ಕೆ ಕೇವಲ ೩೦ ಸಹಸ್ರ ಕಿಲೋಗ್ರಾಂ ಮಾತ್ರ. ಈ ೩೦ ಸಹಸ್ರ ಕಿಲೋಗ್ರಾಂ ಚಿನ್ನವನ್ನು ಹೊರಕ್ಕೆ ತೆಗೆಯುವ ಮಟ್ಟಕ್ಕೆ ಇನ್ನೂ ತಲುಪಿಲ್ಲವೆಂದು ಗೊತ್ತಾಗಿದೆ. ಇದು ಏತಕ್ಕೆ ಹೀಗೆ ಮಾಡುತ್ತಾರೆ ? ನಮಗೆ ತಿಳಿದು ಬಂದ ಪ್ರಕಾರ ಕೇಂದ್ರ ಸರ್ಕಾರದವರು ಈ ಹಟ್ಟಿ ಚಿನ್ನದ ಗಣಿ ಮ್ಯಾನೇಜ್‌ಮೆಂಟಿನವರಿಗೆ ಹೆಚ್ಚು ಚಿನ್ನವನ್ನು ಹೊರಗೆ ತೆಗೆಯಬೇಡಿ ಈಗ ಇರುವಷ್ಟೇ ಇರಲಿ ಎಂದು ಹೇಳಿದ್ದಾರೆಂದು ತಿಳಿದು ಬಂದಿದೆ. ಹಾಗೇನಾದರೂ ಕೇಂದ್ರ ಸರ್ಕಾರದವರು ಚಿನ್ನವನ್ನು ಹೊರಕ್ಕೆ ಹೆಚ್ಚು ತೆಗೆಯಬೇಡಿ ಎಂದು ಡೈರಕ್ಷನ್ ಕೊಟ್ಟಿರುವರೇ ಎಂಬುದನ್ನು ನಮಗೆ ತಿಳಿಸಬೇಕು. ಹಾಗೇನಾದರೂ ಕೇಂದ್ರ ಸರ್ಕಾರದವರು ಡೈರೆಕ್ಷನ್ ಕೊಟ್ಟಿದ್ದರೆ, ಅದಕ್ಕೆ ಸರಿಯಾಗಿ ವಿರೋಧವನ್ನು ನಾವು ವ್ಯಕ್ತಪಡಿಸಿ ಪ್ರತಿಭಟನೆಯನ್ನು ತಾವು ಮಾಡುತ್ತೀರಾ ? ಅದನ್ನು ಸರಿಪಡಿಸಲಿಕ್ಕೆ ಏನು ಮಾಡುತ್ತೀರಾ ? ಎನ್ನುವುದರ ಬಗ್ಗೆ ತಾವು ಉತ್ತರ ಹೇಳುವಾಗ ಇದಕ್ಕೂ ಉತ್ತರ ಹೇಳಬೇಕು. ಇನ್ನು ಚಿನ್ನದ ಪ್ರೈಸ್ ಬಗ್ಗೆ ಕೂಡ ತಾರತಮ್ಯ ಇದೆ. ಚಿನ್ನದ ಬೆಲೆಯನ್ನು ಕೇಂದ್ರದವರು ನಿಗದಿ ಮಾಡುತ್ತಾರೆ. ಬೇರೆ ದೇಶದಿಂದ ಬರತಕ್ಕ ಚಿನ್ನಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತಾರೆ. ಆದರೆ ಅದೇ ನಮ್ಮ ದೇಶದಲ್ಲಿ ತಯಾರಾಗುವ ಚಿನ್ನಕ್ಕೆ ಕಡಿಮೆ ಬೆಲೆಯನ್ನು ಕೊಡುತ್ತಾರೆ. ಇದರ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕು ಹಾಗೂ ಒತ್ತಾಯವನ್ನು ತರಬೇಕು. ಇನ್ನು ಮಿನರಲ್ ರೈಟ್ಸ್ ಟ್ಯಾಕ್ಸ್ ಬಗ್ಗೆ ಹೇಳಬೇಕಾದರೆ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ೧೦ ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿದೆ. ಈ ವಿಷಯದ ಬಗ್ಗೆ ಹೈಕೋರ್ಟಿನಲ್ಲಿ ರಿಟ್‌ಪಿಟೀಷನ್‌ನ್ನು ರಾಜ್ಯ ಸರ್ಕಾರವು ಹಾಕಿದೆ. ಈ ರಿಟ್‌ಪಿಟೀಷನ್‌ನ್ನು ಬೇಗ ಇತ್ಯರ್ಥಗೊಳಿಸುವ ಕಡೆ ರಾಜ್ಯ ಸರ್ಕಾರ ಗಮನ ಕೊಡುತ್ತಿಲ್ಲ. ನಿಮ್ಮ ಲಾ ಡಿಪಾರ್ಟ್‌ಮೆಂಟಿನವರು ಏನು ಮಾಡುತ್ತಿದ್ದಾರೆ ? ೧೦ ಕೋಟಿ ರೂಪಾಯಿಗಳು ಎಂದರೆ ಅದು ದೊಡ್ಡ ಪ್ರಮಾಣದ ಹಣ ಆಗುತ್ತದೆ. ಆದುದರಿಂದ ಈ ಹಣವನ್ನು ಪಡೆಯುವುದಕ್ಕೆ ತಾವು ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ರಾಯಲ್ಟಿ ಹಣ ಸರಿಯಾಗಿ ಬರುತ್ತಿಲ್ಲ. ಇದುವರೆಗೆ ಎಷ್ಟು ರಾಯಲ್ಟಿ ಬಂದಿದೆ ಹಾಗೂ ಎಷ್ಟು ಬರಬೇಕಾಗಿದೆ ಎಂಬುದು ತಮ್ಮ ವರದಿಯಲ್ಲೇ ಇಲ್ಲ. ಅದನ್ನು ಸ್ಪಷ್ಟವಾಗಿ ತಾವು ವಿವರಣೆಯನ್ನು ಕೊಡಬೇಕು.

ಶ್ರೀ. ಎಂ. ಎಸ್. ಕೃಷ್ಣನ್ ([illegible])

ಇನ್ನು ಯುವ ಜನ ಸೇವೆ ಮತ್ತು ಪ್ರವಾಸೋದ್ಯಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕಾಗುವುದಿಲ್ಲ. ಈ ಯುವಜನ ಸೇವೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಇನ್ನೂ ಯುವಕರು ಹಾಗು ಉತ್ಸಾಹಶಾಲಿಗಳು. ಇವರು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆಂದು ನನ್ನ ಭಾವನೆ. ಆದರೆ ಪ್ರವಾಸೋದ್ಯಮದ ವಿಷಯದಲ್ಲಿ ರಾಜ್ಯ ಸರ್ಕಾರದ ಒಂದು ನೀತಿ ಮತ್ತು ಕೇಂದ್ರ ಸರ್ಕಾರದ ಒಂದು ನೀತಿ ಇದೆಯೇನೋ ಎನ್ನುವ ಪ್ರಶ್ನೆ ಬರುತ್ತಿದೆ. ಏಕೆಂದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಈ ಪ್ರವಾಸೋದ್ಯಮದ ಬಗ್ಗೆ ನೋಡಿದರೆ, ಎಲ್ಲಾ ಪ್ರವಾಸೋದ್ಯಮವೂ ಖಾಸಗಿಯವರಿಗೆ ಸೇರಿದೆಯೇನೋ ಎಂಬ ಭಾವನೆ ಬರುತ್ತದೆ. ವಿಂಡ್ಸರ್ ಮ್ಯಾನರ್, ಒಬೆರಾಯ್ ಮುಂತಾದ ಹೋಟೆಲ್‌ಗಳಲ್ಲಿ ಪ್ರವಾಸಿಗರು ತಂಗುತ್ತಾರೆ. ವಿಂಡ್ಸರ್ ಮ್ಯಾನರ್ ಮತ್ತು ಒಬೆರಾಯ್ ಹಾಗು ಇನ್ನೂ ಮುಂತಾದ ದೊಡ್ಡ ದೊಡ್ಡ ಪ್ರವಾಸಿ ಹೋಟೆಲುಗಳೆಲ್ಲಾ ಖಾಸಗಿಯವರ ಕೈಯಲ್ಲೇ ಈ ದಿನ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇಂತಹ ಖಾಸಗಿಯವರನ್ನು ಹೆಚ್ಚು ಬೆಳೆಸುತ್ತಿದ್ದಾರೆ ಇದರಿಂದ ನಿಜವಾಗಿ ಸರ್ಕಾರಕ್ಕೆ ಏನು ಆದಾಯ ಬರಬೇಕಾಗಿತ್ತೋ ಆ ಆದಾಯ ಇವತ್ತು ಖಾಸಗಿಯವರಿಗೆ ಹೋಗುತ್ತಿದೆ. ಈ ರೀತಿ ನೀವು ಖಾಸಗಿಯವರಿಗೆ ಏಕೆ ಕೊಡುತ್ತೀರೆಂದು ಕೇಂದ್ರ ಸರ್ಕಾರದ ಮಂತ್ರಿಯವರಿಗೆ ಕೇಳಿದರೆ, ನಾವು

ಏನು ಮಾಡುವುದಕ್ಕೆ ಆಗುತ್ತದೆ ? ಸರ್ಕಾರದಲ್ಲಿ ಹಣ ಇಲ್ಲದೇ ಇರುವುದರಿಂದ ನಾವು ಅವುಗಳನ್ನು ನಡೆಸುವುದಕ್ಕೆ ಆಗುವುದಿಲ್ಲ ಆದುದರಿಂದ ಪ್ರವಾಸೋದ್ಯಮ ಹೋಟೆಲುಗಳನ್ನು ಖಾಸಗಿಯವರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಪ್ರವಾಸೋದ್ಯಮದ ಬಗ್ಗೆ ಎಷ್ಟು ನಿಗವನ್ನು ಕೊಡಬೇಕಾಗಿತ್ತೋ ಅಷ್ಟು ನಿಗವನ್ನು ಕೇಂದ್ರ ಸರ್ಕಾರ ಕೊಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕೇಂದ್ರ ಸರ್ಕಾರದ ಒಡೆತನದಲ್ಲಿ ಕೆಲವು ಹೋಟೆಲ್‌ಗಳು ನಡೆಯುತ್ತಿವೆ, ಆದರೆ ಅವುಗಳು ನಿರೀಕ್ಷೆ ಮಟ್ಟದಲ್ಲಿ ಚೆನ್ನಾಗಿ ನಡೆಯುತ್ತಿಲ್ಲ. ಒಂದು ಉದಾಹರಣೆ ನಿಮಗೆ ಕೊಡಬೇಕಾದರೆ ಬೆಂಗಳೂರಿನಲ್ಲಿ ಅಶೋಕ ಹೋಟೆಲ್ ಇದೆಯಲ್ಲಾ ಅಲ್ಲಿಗೆ ಯಾರಾದರೂ ವಿದೇಶಿ ಪ್ರವಾಸಿಗರು ಬಂದರೆ ಅವರುಗಳನ್ನು ಪಕ್ಕದಲ್ಲೇ ಇರುವ ವಿಂಡ್ಸರ್ ಮ್ಯಾನರ್ ಹೋಟೆಲ್ ಕಡೆ ಹೋಗುವ ಹಾಗೆ ಮಾಡುತ್ತಾರೆ. ಇದರಿಂದ ಸರ್ಕಾರಿ ಹೋಟೆಲ್‌ಗಳಿಗೆ ನ್ಯಾಯವಾಗಿ ಬರಬೇಕಾದ ಹಣ ಬರುವುದು ಕೈತಪ್ಪಿ ಹೋಗುತ್ತಿದೆ. ಇಂತದ್ದರ ಬಗ್ಗೆ ಸರ್ಕಾರ ಸರಿಯಾದಂತಹ ಧೋರಣೆ ಇಡಬೇಕು. ಇನ್ನು ಈ ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರವರ್ತಕರು ಎಂದು ಏನು ಇದ್ದಾರೆ ಅಂದರೆ ಟೂರಿಸ್ಟ್ ಗೈಡ್ಸ್. ಈ ಪ್ರವರ್ತಕರುಗಳಿಗೆ ತಾವು ಯಾವ ರೀತಿಯಾದ ಸೌಲಭ್ಯವನ್ನೂ ಕೊಡುತ್ತಿಲ್ಲಾ ಹಾಗೂ ಈ ಪ್ರವರ್ತಕರನ್ನು ಮನೆಗೆ ಕಳುಹಿಸುವ ಒಂದು ಪರಿಸ್ಥಿತಿಯನ್ನು ನೀವು ಮಾಡುತ್ತಿದ್ದೀರೆಂದು ನನಗೆ ತಿಳಿದುಬಂದಿದೆ. ಇವರಿಗೆ ಸಾಕಷ್ಟು ಟ್ರೈನಿಂಗ್ ಕೊಟ್ಟಿದ್ದೀರಿ.

ಅವರನ್ನು ಖಾಯಂ ಮಾಡುವುದಕ್ಕೆ ಪ್ರಯತ್ನಿಸಿಲ್ಲ. ಅವರುಗಳು ೧೦–೧೨ ವರ್ಷಗಳಿಂದ ಈ ದಿಶೆಯಲ್ಲಿ ಪ್ರಯತ್ನ ಮಾಡುತ್ತಾ ಇದ್ದಾರೆ. ಎಷ್ಟೋಸಲ ಮನವಿಗಳನ್ನು ಅರ್ಪಿಸಿದ್ದಾರೆ. ಮಾನ್ಯ ವಿ.ಎಲ್. ಪಾಟೀಲರವರು ಅವರು ಉಪವಾಸ ಮಾಡುತ್ತಿದ್ದಾಗ ಅವರನ್ನು ಪರ್ಮನೆಂಟ್ ಮಾಡುತ್ತೇವೆ ಎಂದು ಹೇಳಿದ್ದರು. ಆದುದರಿಂದ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದು ಏನೆಂದರೆ ತತ್‌ಕ್ಷಣ ಇವರ ಬಗ್ಗೆ ಗಮನ ಹರಿಸಿ ಅವರನ್ನು ಖಾಯಂ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ, ಈ ಅಕಾಡಮಿಗಳ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಸಂಗೀತ, ನಾಟಕ ಎಕಾಡಮಿ, ಲಲಿತಕಲಾ ಅಕಾಡಮಿ, ಇವೆಲ್ಲವೂ ಇವೆ. ಈ ಲಲಿತಕಲಾ ಅಕಾಡಮಿಯ ಬಗ್ಗೆ ನಮಗೆ ದೂರುಗಳು ಬಂದಿರುವುದು ಏನೆಂದರೆ, ನೀವು ಯಾರ್ಯಾರನ್ನು ಇದರಲ್ಲಿ ಸೇರಿಸಿಕೊಂಡಿದ್ದಾರೋ, ಅವರಲ್ಲಿ ಅನೇಕರಿಗೆ ಈ ಅಕಾಡಮಿಯ ಬಗ್ಗೆ ಆಸಕ್ತಿ ಇಲ್ಲದವರನ್ನು, ಅಭ್ಯಾಸ ಇಲ್ಲದವರನ್ನು. ಹೊಸಬರನ್ನು ಸೇರಿಸಿಕೊಂಡಿದ್ದೀರಿ ಎಂದು ಯಾರಿಗೆ ಲಲಿತಕಲೆಯಲ್ಲಿ ಪರಿಶ್ರಮ, ಅನುಭವ ಇದೆಯೋ, ಆಸಕ್ತಿ ಇದೆಯೋ ಅವರನ್ನು ಬಿಟ್ಟಿದ್ದೀರಿ ಎಂಬ ಆರೋಪಣೆ ಇದೆ. ಇದರ ಬಗ್ಗೆ ಸಂಬಂಧಪಟ್ಟವರು ತಮಗೂ ಬರೆದಿರಬಹುದು ನನಗೂ ಗೊತ್ತಿದೆ. ಈ ವಿಷಯದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಈ ವಿಷಯದ ಬಗ್ಗೆ ಪುನರ್ ವಿಮರ್ಶೆ ಮಾಡಿ ಸರಿಯಾದವರನ್ನು ಅಕಾಡಮಿಗೆ ಸೇರಿಸಿಕೊಳ್ಳಬೇಕು.

ಇನ್ನೊಂದು ವಿಷಯ ಏನೆಂದರೆ ನಮ್ಮ ಸ್ನೇಹಿತರು ಹಾಗೂ ಎಲ್ಲರಿಗೂ ಪರಿಚಿತರಾದ ಅದರಲ್ಲೂ ರಾಜಾಜಿನಗರದಲ್ಲಿನ ಎಲ್ಲರಿಗೂ ಗೊತ್ತಿರುವ ಮಾನ್ಯ ಸೂರ್ಯನಾರಾಯಣ ಚಡಗ ಇವರ ವಿಷಯವಾಗಿ ಅವರು ಪರಿಶ್ರಮದಿಂದ ಸಂಗ್ರಹಿಸಿದ ಹಳೆಯ ಕಾಲದ ನಾಣ್ಯಗಳು ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವಂತಹವುಗಳು, ಹಾಗೆಯೇ ಶಿಲ್ಪ ಮತ್ತಿತರ ಕಲೆಗೆ ಸಂಬಂಧಪಟ್ಟಿರತಕ್ಕಂತಹ ವಸ್ತುಗಳನ್ನು ಅವರು ತಾವುಗಳು ಒಳ್ಳೆಯ ರೀತಿಯಲ್ಲಿ ಇಟ್ಟುಕೊಳ್ಳಿ ಎಂದು ಕೊಟ್ಟರು, ಹಾಗೆಯೇ ಸಾಹಿತ್ಯ ಪರಿಷತ್ತಿಗೂ ಕೊಟ್ಟರು. ಎಷ್ಟೋ ಅಮೂಲ್ಯವಾದಂತಹ ನಾಣ್ಯ, ಶಿಲ್ಪಗಳು ಅವು. ಕರ್ನಾಟಕದ ಜನರೆಲ್ಲರಿಗೂ ಅವುಗಳು ಪರಿಚಿತ ಆಗಿರಲಿ, ಹಳೆಯ ಕಾಲದ ನಾಣ್ಯಗಳನ್ನು ಮುಂದಿನ ಜನರಿಗೆ ನೋಡಲು ದೊರೆಯಲಿ ಎಂದು ನಿಮಗೆ ಕೊಟ್ಟಿದ್ದರು. ಆ ವಿಷಯವೆಲ್ಲ ತಮಗೆ ತಿಳಿದಿದೆ. ಆದರೆ ಅದು ಏನಾಗಿದೆ ಎಂದು ಯಾರಿಗೂ ಗೊತ್ತಿಲ್ಲದಂತಹ ಪರಿಸ್ಥಿತಿಗೆ ಬಂದಿದೆ ಅವುಗಳನ್ನು ಕೊಟ್ಟವರಿಗೂ ಕೂಡಾ ಅದು ಏನಾಗಿದೆ ಎಂದು ಗೊತ್ತಿಲ್ಲ. ಅಂತಹ ಒಳ್ಳೆಯ, ಅಮೂಲ್ಯವಾದಂತಹ ನಾಣ್ಯಗಳು ಎಲ್ಲಿವೆ ಹಾಗೂ ಏನಾಗಿವೆ ಎಂಬುದನ್ನು ಅವರು ಕೇಳಿದರೂ ಕೂಡಾ ಸರಕಾರವು ಈ ವಿಷಯದ ಬಗ್ಗೆ ಗಮನ ಹರಿಸಿಲ್ಲ ಎಂದು ಆರೋಪಣೆ ಇದೆ. ಅದಕ್ಕಿಂತ ಹೆಚ್ಚಾಗಿ ಎರಡು ಲಕ್ಷ ರೂಪಾಯಿಗಳ ಮೌಲ್ಯದ ಅಂತಹ ನಾಣ್ಯಗಳನ್ನು ಮಾನ್ಯರು ಕೊಟ್ಟಿದ್ದಾರೆ. ಆದುದರಿಂದ ಅಂತಹವೆಲ್ಲವನ್ನೂ ಸಂಗ್ರಹಿಸಿ ಒಂದು ಕಡೆ ಮ್ಯೂಸಿಯಂ ನಂತಹ ಒಳ್ಳೆಯ ಜಾಗದಲ್ಲಿಟ್ಟು ಅವುಗಳು ಸದಾ

ಕಾಲ ಉಳಿಯುವಂತೆ ಮಾಡಿ ಮುಂದೆ ಎಲ್ಲರಿಗೂ ಅದನ್ನು ನೋಡುವ ಹಾಗೆ ಒಂದು ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವ್ಯಾಯಾಮ ಶಾಲೆಯ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಯುವಕ ಯುವ ಜನ ಮಂತ್ರಿಪರ್ಯರು ತುಂಬಾ ಒಳ್ಳೆಯವರು, ಯುವ ಜನಾಂಗದ ಬಗ್ಗೆ ಚಿಂತನೆಯುಳ್ಳವರು. ಎಲ್ಲಾ ತರಹದಲ್ಲಿಯೂ ಪ್ರೋತ್ಸಾಹ ನೀಡತಕ್ಕಂತವರು ಆಗಿದ್ದಾರೆ. ಆದರೆ ಅವರು ಈ ವ್ಯಾಯಾಮ ಶಾಲೆಗಳ ಬಗ್ಗೆ ಏಕಾಗಿಯೋ ಮತ್ಸರ ಭಾವನೆ ಹೊಂದಿದ ಹಾಗೆ ಕಾಣುತ್ತದೆ. ಅದರ ಬಗ್ಗೆ ಯಾವ ಕಾಳಜಿಯನ್ನೂ ವಹಿಸಿಲ್ಲ. ವ್ಯಾಯಾಮ ಶಾಲೆಗಳಿಗೆ ಬೇಕಾಗುವ ವಸ್ತುಗಳ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನು ಶಾಲೆಗಳವರು ಕಳುಹಿಸಿದ್ದಾರೆ. ನಾನೂ ಕಳುಹಿಸಿದ್ದೇನೆ. ಆದರೆ ಅದರಿಂದ ಏನೂ ಪ್ರಯೋಜನ ಆಗಿಲ್ಲ. ಆದರೂ ಕೂಡಾ ವ್ಯಾಯಾಮ ಶಾಲೆಗಳ ಕುರಿತಾಗಿ ತಮ್ಮ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದೀರಿ. ಆದರೆ ಹೆಚ್ಚು ವ್ಯಾಯಾಮ ಶಾಲೆಗಳಿರುವ ರಾಜಾಜಿನಗರ ಕ್ಷೇತ್ರಕ್ಕೆ ಯಾವ ರೀತಿಯಲ್ಲಿಯೂ ಸಹಕಾರ ಮಾಡಿಲ್ಲ. ದಯವಿಟ್ಟು ನಮ್ಮ ವ್ಯಾಯಾಮ ಶಾಲೆಗಳಿಗೆ ಸೂಕ್ತ ಸಲಕರಣೆಗಳು, ವಸ್ತುಗಳನ್ನು ಕಳುಹಿಸುವ ವ್ಯವಸ್ಥೆ ಮಾಡಬೇಕು.

ಇನ್ನು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆ ಬಹಳ ಪ್ರಾಮುಖ್ಯವಾದಂತಾ ಇಲಾಖೆಯಾಗಿದೆ. ನಮ್ಮ ದೇಶದ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸ ಬೇಕಾದರೆ, ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳ ಬೇಕಾದರೆ, ವಿದ್ಯುಚ್ಛಕ್ತಿಯಿಂದ ಮಾತ್ರ ಸಾಧ್ಯ ಎಂದು ಹೇಳಬೇಕಾಗಿದೆ. ವಿದ್ಯುಚ್ಛಕ್ತಿ ಇಲ್ಲದೇ ಹೋದರೆ ಏನೂ ಆಗುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಎಲ್ಲ ರೀತಿಯಲ್ಲಿಯೂ ಪವರ್ ಬೇಕು. ರಾಜಕೀಯಕ್ಕೂ ಪವರ್ ಬೇಕು. ಅದು ಪೊಲಿಟಿಕಲ್ ಪವರ್. ಆದರೆ ವಿದ್ಯುಚ್ಛಕ್ತಿಯ ವಿಷಯದಲ್ಲಿ ರಾಜ್ಯದ ಪರಿಸ್ಥಿತಿ ಶೋಚನೀಯವಾದುದು ಎಂದು ಹೇಳಬೇಕಾಗುತ್ತದೆ. ಮಾನ್ಯ ರೆಡ್ಡಿಯವರೂ ಕೂಡಾ ಮಾತನಾಡುವಾಗ ಇದನ್ನು ಹೇಳಿದರು. ಈ ವಿದ್ಯುಚ್ಛಕ್ತಿ ವಿಚಾರದಲ್ಲಿ ಅತ್ಯಂತ ಕಠಿಣವಾದ ಪರಿಸ್ಥಿತಿ ಇರುವ ರಾಜ್ಯ ಎಂದರೆ ನಮ್ಮ ರಾಜ್ಯ ಎಂದು ಹೇಳಬಹುದು. ನಮ್ಮಲ್ಲಿ ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟ್ಸ್ ಇವೆ ಎಂದು ನಾವು ಹೇಳಿಕೊಳ್ಳುತ್ತಾ ಇದ್ದೇವೆ. ಆದರೆ ನಮ್ಮಲ್ಲಿ ವಿಪರೀತವಾಗಿ ವಿದ್ಯುತ್‌ಚ್ಛಕ್ತಿಯ ಕೊರತೆ ಇದೆ. ಈ ವಿದ್ಯುಚ್ಛಕ್ತಿಯ ಬವಣೆಯಿಂದಾಗಿ ನಮ್ಮ ರಾಜ್ಯಕ್ಕೆ ಬರಬೇಕಾದ ೩೦ ಪರ್ಸೆಂಟ್‌ನಷ್ಟು ಕೈಗಾರಿಕೆಗಳು ಬೇರೆ ರಾಜ್ಯಗಳಿಗೆ ಹೋಗಿವೆ ಎಂದು ತಿಳಿದು ಬಂದಿದೆ. ಈ ಇಲಾಖೆಯಲ್ಲಿ ಕೆ.ಇ.ಬಿ ಯವರು ಯಾವ ರೀತಿಯಲ್ಲಿ ನಡೆದು ಕೊಳ್ಳುತ್ತಿದ್ದಾರೆ ಎಂದು ಗೊತ್ತಿರುವ ವಿಷಯ. ಎಲ್ಲಾ ಕಡೆಗಳಲ್ಲೂ ಇರುವಂತೆ ಇಲ್ಲಿಯೂ ಕೂಡಾ ಒಳ್ಳೆಯವರು, ಕೆಟ್ಟವರು ಇದ್ದಾರೆ. ಒಳ್ಳೆಯವರ ಬಗ್ಗೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಅಲ್ಲಿರುವ ಕೆಟ್ಟ ವರ್ಗದವರಿಂದ ಇಲಾಖೆಗೆ ಕೆಟ್ಟ ಹೆಸರು ಬರುತ್ತಿದೆ. ನನ್ನ ಅನುಭವದ ಮಾತು ಹೇಳುವುದಾದರೆ ಕೆ.ಇ.ಬಿ ಯಲ್ಲಿ ಕೂಡ ಕೆಲಸ ಕಾರ್ಯಗಳ ವಿಷಯದಲ್ಲಿ ಬಹಳ ನಿಧಾನ ಪ್ರವೃತ್ತಿ ಇದೆ. ಅವ್ಯವಹಾರ ಇದೆ. ಅದಕ್ಷತೆ ಹಾಗೂ ಭ್ರಷ್ಟಾಚಾರ ಈ ಮೂರೂ ಕೂಡಾ ಇಲಾಖೆಯಲ್ಲಿ ತುಂಬಿ ತುಳುಕುತ್ತಾ ಇವೆ. ಕೆ.ಇ.ಬಿ ಯಲ್ಲಿ ರಾಜಕೀಯವೂ ಸಹ ಇದೆ. ರಾಜಕೀಯದ ವಿಚಾರದಲ್ಲಿ ಅದು ತೀರಾ ಹೆಚ್ಚಿನ ಮಟ್ಟಕ್ಕೆ ಹೋಗಿ ತಲುಪಿದೆ ಎಂದರೆ ತಪ್ಪಾಗಲಾರದು ಎಂದು ನಾನು ಹೇಳ ಬಯಸುತ್ತೇನೆ ಇದರಲ್ಲಿ ರಾಜಕೀಯವೂ ಎರಡು, ಮೂರು ರೀತಿಯಲ್ಲಿ ಇದೆ. ಒಂದು, ರಾಜ್ಯ ಮಂತ್ರಿಗಳ ಮತ್ತು ಆಫೀಸರ್ಸ್‌ಗಳ ರಾಜಕಾರಣ, ಎರಡನೇಯದು. ಆಫೀಸರ್ಸ್‌ಗಳ ಮಧ್ಯೆ ಇರುವಂತಹ ರಾಜಕಾರಣ. ಇನ್ನೊಂದು ಆಫೀಸರ್ಸ್ ಮತ್ತು ಇತರ ನೌಕರರ ಮಧ್ಯೆ ಇರತಕ್ಕಂತಹ ರಾಜಕಾರಣ. ಈ ಎಲ್ಲಾ ರಾಜಕಾರಣಗಳು ಒಟ್ಟಾಗಿ ಸೇರಿಕೊಂಡು ಕೆ.ಇ.ಬಿ.ಯನ್ನು ಹಾಳು ಮಾಡುತ್ತಿವೆ. ಈ ರಾಜಕಾರಣದಲ್ಲಿಯೂ ಎರಡು ರೀತಿಯಾಗಿದೆ. ಅವುಗಳು ಕೇಂದ್ರ ಸರಕಾರದ್ದು ಮತ್ತು ರಾಜ್ಯ ಸರಕಾರದ್ದು ಎಂದು. ರಾಜ್ಯದಲ್ಲಿಯ ಪವರ್ ಬಗ್ಗೆ ಏನಾಗಿದೆ ಎಂದರೆ, ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ. ನಮ್ಮ ಕಾಳಿನದಿ ಜಲವಿದ್ಯುತ್ ಯೋಜನೆಯನ್ನು ತೆಗೆದುಕೊಳ್ಳೋಣ, ಈ ಯೋಜನೆಯಿಂದ ನಮಗೆ ೧,೩೧೬ ಮಿಲಿಯನ್ ಯೂನಿಟ್ಸ್ ಪವರನ್ನು ನಮಗೆ ಕೊಡಬೇಕಾಗಿದೆ. ಇದನ್ನು ಮೂರು ಸ್ಟೇಜ್‌ನಲ್ಲಿ ಮಾಡುವುದು ಎಂದು ಯೋಜನೆ ಹಾಕಿದೆ. ೧೯೭೦ರಲ್ಲಿ ಇದಕ್ಕೆ ಫೌಂಡೇಶನ್ ಹಾಕಲಾಯಿತು ೧೯೭೩ರಲ್ಲಿ One stage started. Even after 12 years it has not been completed. Ue are in 1985. Twelve years have passed. ೧೯೮೫ ಆದರೂ ಕೂಡಾ ಇನ್ನೂ ಮುಗಿದಿಲ್ಲ ಎಂದರೆ, ಇದು ಏಕೆ ಹೀಗೆ

ಆಯಿತು ಎಂದು ವಿಚಾರ ಮಾಡಬೇಕಾಗುತ್ತದೆ. ಒಂದನೇ ಸ್ಟೇಜ್‌ನ್ನು ಮುಗಿಸಲಿಕ್ಕೆ ೧೨ ವರ್ಷಗಳು ಬೇಕಾದರೆ ಇದನ್ನು ಪೂರ್ಣವಾಗಿ ಮುಗಿಸಲಿಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕಾದೀತು ಎಂದು ನಾವು ಗಳು ಯೋಚನೆ ಮಾಡಬೇಕಾಗುತ್ತದೆ. ಹಾಗೆಯೇ ವರ್ಷಗಳು ಸಂದಂತೆ ಎರಡನೇ ಮತ್ತು ಮೂರನೇ ಸ್ಟೇಜ್‌ಗಳನ್ನು ಮಾಡುವುದಕ್ಕೆ ವೆಚ್ಚವೂ ಕೂಡಾ ಜಾಸ್ತಿಯಾಗ ಬಹುದೆಂದು ತಾವು ಹೇಳ ಬಹುದ.. ಹಾಗಾದರೆ ಈ ಕರ್ನಾಟಕ ರಾಜ್ಯದ ಜನತೆಗೆ ನಿಗದಿತ ದರದಲ್ಲಿ ಎಷ್ಟು ವಿದ್ಯುಚ್ಛಕ್ತಿ ಬೇಕೋ ಅದನ್ನು ಒದಗಿಸಲಿಕ್ಕೆ ಆಗುವುದಿಲ್ಲ ಎಂದು ಹೇಳ ಬೇಕಾಗಿದೆ. ಇದು ಕೆ.ಇ.ಬಿ. ಯವರ ತಪ್ಪು ಅಲ್ಲ. ಕೆ.ಪಿ.ಸಿ ಯವರ ತಪ್ಪು ಎಂದು ಹೇಳ ಬೇಕಾಗಿದೆ. ರಾಯಚೂರು ಥರ್ಮಲ್ ಪ್ಲಾಂಟ್‌ನಿಂದ ೧,೨೦೦– ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಜನರೇಟ್ ಮಾಡಬೇಕಾಗಿದೆ. ಮೊದಲನೇ ಸ್ಟೇಜಿನಲ್ಲಿ ೨೧೦ ಮೆಗಾವ್ಯಾಟ್ಸ್ ಜನರೇಟ್ ಆಗಬೇಕು. ಎರಡನೇದು ಯಾವಾಗ ಆಗುತ್ತದೆಂದು ತಿಳಿದಿಲ್ಲ ನವೆಂಬರ್ ಎಂದು ಹೇಳುತ್ತಿದ್ದಾರೆ. ಅಲ್ಲಿಯೂ ಕೂಡಾ ಬಹಳ ತೊಂದರೆ ಇದೆ. ಮೊದಲನೇ ಸ್ಟೇಜಿಗೆ ೨೭೦– ೩೭೦ ಕೋಟಿ ಆದರೆ, ಬೇರೆ ಸ್ಟೇಜ್‌ಗಳಿಗೆ ಎಷ್ಟು ಆಗುತ್ತದೆ ಎನ್ನುವುದರ ಬಗ್ಗೆ ಇನ್ನೂ ಸ್ಪಷ್ಟವಾಗಿ ತೀರ್ಮಾನ ಹೇಳುವುದಕ್ಕೆ ಸಾಧ್ಯವಿಲ್ಲ. ಬೇಡ್ತಿ ವಿಚಾರ ತೆಗೆದುಕೊಂಡರೆ, ಅದನ್ನು ವಾರಾಹಿ ಜೊತೆಗೆ ತೆಗೆದುಕೊಂಡರು. ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಆ ವಿಚಾರದಲ್ಲಿ ಇಲ್ಲಿ ಸದನದಲ್ಲಿಯೂ ವಿರೋಧ ಮಾಡಿದರು, ಸಾರ್ವಜನಿಕರೂ ವಿರೋಧ ಮಾಡಿದರು. ಈಗ ಆ ಯೋಜನೆ ಇದೆಯೋ ಇಲ್ಲವೋ ಎಂದು ತಿಳಿಯಬೇಕಾಗಿದೆ.

೪–೦೦ ಪಿ. ಎಂ.

ನನಗೆ ಗೊತ್ತಿದ್ದ ಮಟ್ಟಿಗೆ ನಾನು ಹೇಳುತ್ತಿದ್ದೇನೆ. ಒಂದು ವೇಳೆ ಇದ್ದರೆ ಆ ಯೋಜನೆ ಇದೆ ಎಂದು ಸರ್ಕಾರ ಹೇಳಲಿ ನೋಡೋಣ, ಮತ್ತೆ ಇಲ್ಲಿ ಏನಾಗಿದೆ ಎಂದರೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ರಚನೆ ಮಾಡಿದ್ದಾರೆ: ಆ ಎಕ್ಸ್‌ಪರ್ಟ್ ಕಮಿಟಿಯವರು ಏನು ಮಾಡಿದರು? ಅವರು ಕಾಳಿ ಎರಡನೆ ಹಂತದ ಯೋಜನೆಯ ಬಗ್ಗೆ ಮಾತನಾಡಿದರೇ ವಿನಹ: ಈ ಬೇಡತಿ ಯೋಜನೆಯ ಬಗ್ಗೆ ಮಾತನಾಡಿಲ್ಲ ಈ ಬಗ್ಗೆ ಸುಮ್ಮನೆ ಇದ್ದುಬಿಟ್ಟಿದ್ದಾರೆ. ಇದರಲ್ಲಿಯೂ ಸಹ ರಾಜಕೀಯ ಇದೆ. ಇದನ್ನು ತಾವು ಯೋಚನೆ ಮಾಡಬೇಕು. ಇದರಲ್ಲಿ ಯಾರೋ ಒಬ್ಬರು ಪ್ರಭಾವಿಶಾಲಿಗಳು ಇದ್ದಾರೆ. ಇದರಿಂದ ಈ ಯೋಜನೆ ನಿಲ್ಲಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಈ ಬಗ್ಗೆ ಸರ್ಕಾರದವರು ಏನು ತೀರ್ಮಾನ ಮಾಡಿದ್ದಾರೆಂದು ಸ್ಪಷ್ಟ ವಾಗಿ ಹೇಳಬೇಕು. ಇನ್ನು ವರಾಹಿ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ಇದರಲ್ಲಿ ಎರಡು ಯೂನಿಟ್ಸ್ ಇವೆ. ಇದರಿಂದ ಸುಮಾರು ೧೧೫ ಮೆಗಾವಾಟ್ಸ್ ವಿದ್ಯುಚ್ಛಕ್ತಿ ಸಿಗುತ್ತದೆ. ಇದಕ್ಕೆ ಸರ್ಕಾರದವರು ಈಗಾಗಲೇ ಸುಮಾರು ೧೦೩.೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರ ಒಟ್ಟು ಅಂದಾಜು ಸುಮಾರು ೧೯೧.೭೦ ಕೋಟಿ ರೂಪಾಯಿಗಳೆಂದು ನಿಮ್ಮ ೧೯೮೪-೮೫ನೇ ವರದಿಯಿಂದ ಗೊತ್ತಾಗುತ್ತದೆ. ಈ ವರದಿಯಲ್ಲಿ ತಾವು ಈ ಯೋಜನೆ ಯಾವ ಹಂತದಲ್ಲಿದೆ, ಯಾವಾಗ ಪೂರ್ತಿ ಯಾಗುತ್ತದೆ ಎನ್ನುವುದನ್ನು ಮಾತ್ರ ಪ್ರಸ್ತಾಪ ಮಾಡಿಲ್ಲ. ಇದರಲ್ಲಿ ಇಷ್ಟು ಮಾತ್ರ ಹೇಳಿದ್ದೀರಿ ಅದೇನೆಂದರೆ ಪಿಕ್ಕಿಂಗ್ ಅಪ್ ಎಂದು, ಮತ್ತೆ ಪುಟ ೪೪ರಲ್ಲಿ ಏನು ಹೇಳಿದ್ದೀರೋ ಅದು ನಮಗೆ ಅರ್ಥವಾಗದ ರೀತಿಯಲ್ಲಿ ಹೇಳಿದ್ದೀರಿ, ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕು. ಇದು ಯಾವ ಹಂತದಲ್ಲಿದೆ ಎಂಬುದು ಗೊತ್ತಿಲ್ಲ. ನಮ್ಮ ರಾಜ್ಯಕ್ಕೆ ತಾವು ಎಷ್ಟುವೇಗವಾಗಿ ವಿದ್ಯುಚ್ಛಕ್ತಿಯನ್ನು ತರಬೇಕಾಗಿತ್ತೋ ಅಷ್ಟು ವೇಗವಾಗಿ ವಿದ್ಯುಚ್ಛಕ್ತಿಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಈ ಬಗ್ಗೆ ಕೂಡ ತಮ್ಮ ನಿಲುವು ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಪವರ್ ಕಾರ್ಪೋರೇಷನ್ ಇದೆ. ಅದರ ವೈಫಲ್ಯವನ್ನು ನಾವು ಇಲ್ಲಿ ಹೇಳಲೇಬೇಕಾಗುತ್ತದೆ. ಇದರ ಒಂದು ವೈಫಲ್ಯದಿಂದ ಕರ್ನಾಟಕ ರಾಜ್ಯದ ಜನತೆಗೆ ವಿದ್ಯುಚ್ಛಕ್ತಿ ಇಲ್ಲ ಕೈಗಾರಿಕೆಗಳು ಬರುವುದಕ್ಕೆ ಅವಕಾಶವಿಲ್ಲ. ಕೈಗಾರಿಕೆಗಳು ಇಲ್ಲದಿರುವುದರಿಂದ ನಿರುದ್ಯೋಗ ಸಮಸ್ಯೆ ಜಾಸ್ತಿ ಯಾಗಿದೆ. ಅದೇ ರೀತಿಯಲ್ಲಿ ನಗರವಾಸಿಗಳಿಗೂ ವಿದ್ಯುಚ್ಛಕ್ತಿ ಇಲ್ಲ ಗ್ರಾಮಾಂತರ ಪ್ರದೇಶದ ಜನರಿಗೂ ವಿದ್ಯುಚ್ಛಕ್ತಿ ಇಲ್ಲ. ಇದಕ್ಕೆಲ್ಲ ಕಾರಣವೇನು ? ನಾನು ಕಾರಣ ಕೇಳಿದರೆ ತಾವು ಒಂದೇ ಒಂದು ಕಾರಣವನ್ನು ಕೊಡುತ್ತೀರಿ ಅದೇನೆಂದರೆ ನಮ್ಮಲ್ಲಿ ಹಣವಿಲ್ಲ. ನಮ್ಮಲ್ಲಿ ನಿಧಿ ಇಲ್ಲ ಎಂದು. ಇದಕ್ಕೆ

ಕೇಂದ್ರ ಸರ್ಕಾರದವರು ಕೊಡುತ್ತಾರೋ ಯಾರು ಕೊಡುತ್ತಾರೋ ಗೊತ್ತಿಲ್ಲ, ಈ ಬಗ್ಗೆ ಸರ್ಕಾರದ ಧೋರಣೆ ಏನು? ಈ ಜನತಾ ಸರ್ಕಾರದ ಧೋರಣೆ ಏನೆಂದರೆ ವಿದ್ಯುಚ್ಛಕ್ತಿಗೆ ಪ್ರಥಮ ಆದ್ಯತೆ ಕೊಡಬೇಕು ಆ ಆದ್ಯತೆಗೆ ಅನುಗುಣವಾಗಿ ವಿದ್ಯುಚ್ಛಕ್ತಿಯನ್ನು ಬೆಳೆಸಬೇಕು, ಬೇರೆ ಕಡೆಯಿಂದ ಹಣವನ್ನು ತಂದರೂ ಪರವಾಗಿಲ್ಲ ಎನ್ನುವ ಧೋರಣೆಯನ್ನು ತಾವು ಹೇಳಿದ್ದೀರಿ. ಆ ಧೋರಣೆ ಈಗ ಎಲ್ಲ ಹೋಯಿತು ? ಸರ್ಕಾರದವರು ಇದರ ಬಗ್ಗೆ ಉತ್ತರ ಹೇಳಬೇಕಾಗುತ್ತದೆ ತಮ್ಮ ವಾರ್ಷಿಕ ವರದಿಯನ್ನು ನೋಡಿ. ಆ ವಾರ್ಷಿಕ ವರದಿಯನ್ನು ಬಹಳ ಚೆನ್ನಾಗಿ ಪ್ರಿಂಟ್ ಮಾಡಿದ್ದೀರಿ. ಇದರಲ್ಲಿ ಜೋಗ್‌ಫಾಲ್ಸ್ ಮುದ್ರಿಸಿದ್ದೀರಿ. ಅಮೇರಿಕಾ ದೇಶದಲ್ಲಿ ಪ್ರಿಂಟ್ ಮಾಡಿಸಿದಂತೆ ಇದೆ. ಈ ವಾರ್ಷಿಕ ವರದಿ. ಅಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಬಹಳ ಸಂತೋಷ. ಆದರೆ ತಮ್ಮ ವಾರ್ಷಿಕ ವರದಿಯಲ್ಲಿ ಕೊಟ್ಟಿರುವ ವರದಿ ನೋಡಿದರೆ ಈ ಮನೆಯನ್ನು ತಪ್ಪುದಾರಿಗೆ ಎಳೆಯುವಂಥಾದ್ದು. ಇದನ್ನು ಬೇರೆ ಯಾರಾದರೂ ನೋಡಿದರೆ ಛೀಮಾರಿ ಹಾಕುತ್ತಾರೆ. ೧೯೮೩-೮೪ನೇ ವಾರ್ಷಿಕ ವರದಿಯ ಪುಟ ೨೪ರಲ್ಲಿ ಏನು ಕೊಟ್ಟಿದ್ದಾರೆಂದು ತಾವು ಸ್ವಲ್ಪ ತೆಗೆದು ನೋಡಿ. ಅದರಲ್ಲಿ ಏನು ಹೇಳಿದ್ದಾರೆಂದರೆ ಅದು ಈ ರೀತಿ ಇದೆ. Energy generated in 1981-82 is 7723 million units, ಅದೇ ೧೯೮೨-೮೩ರಲ್ಲಿ ೭೮೨೦ ಮಿಲಿಯನ್ ಯೂನಿಟ್ಸ್ ಎಂದು ಹೇಳಿದ್ದಾರೆ. ಇವೆರಡನ್ನು ನೋಡಿದರೆ ಒಂದಕ್ಕೊಂದು ವಿರೋಧಭಾಸವಾಗಿ ಕಾಣುತ್ತಿದೆ. ಇವೆರಡನ್ನು ಅವರು ಪರಿಗಣನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಮಗೆ ೧೯೮೩-೮೪ನೇ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ. ಅದೇ ೧೯೮೪-೮೫ನೇ ಸಾಲಿನ ವಾರ್ಷಿಕ ವರದಿಯನ್ನು ಕೊಟ್ಟಿಲ್ಲ. ತಾವು ಯಾವುದಾದರೊಂದು ವರದಿಯನ್ನು ಕೊಟ್ಟರೆ ಅದನ್ನು ನಾವು ಯಾವ ರೀತಿಯಲ್ಲಿ ನಂಬಬೇಕು? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಸ್ಪಷ್ಟವಾಗಿ ಹೇಳಬೇಕು ಇವರು ೧೯೮೨-೮೩ನೇ ವಾರ್ಷಿಕ ವರದಿಯಲ್ಲಿ ಒಂದು ರೀತಿಯಲ್ಲಿ ಕೊಟ್ಟಿದ್ದಾಗ, ಅದೇ ೧೯೮೩-೮೪ನೇ ಸಾಲಿನ ವಾರ್ಷಿಕ ವರದಿಯಲ್ಲಿ ಮತ್ತೊಂದು ರೀತಿಯಲ್ಲಿ ಕೊಟ್ಟಿದ್ದಾರೆ ಇದರಲ್ಲಿ ನಾವು ಯಾವುದು ನಂಬಬೇಕು ? ಆಮೇಲೆ ೧೯೮೩-೮೪ನೇ ಸಾಲಿನ ವಾರ್ಷಿಕ ವರದಿಯ ಪುಟ ೪೨ರಲ್ಲಿ ಕರ್ನಾಟಕ ರಾಜ್ಯಕ್ಕೆ ಆಮದು ಮಾಡಿಕೊಂಡಂತಹ ವಿದ್ಯುಚ್ಛಕ್ತಿ ಎಷ್ಟು? ನಮ್ಮ ಜನರೇಟರ್ಸ್‌ಗಳಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಅದರಲ್ಲೂ ಕೂಡ ತಪ್ಪು ತಪ್ಪಾಗಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಇದಕ್ಕೆ ತಾವು ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತೀರಿ? ತಾವು ಹೇಳಬಹುದು ಪ್ರಿಂಟ್ ತಪ್ಪಾಗಿದೆ ಎಂದು. ತಾವು ಏನು ವರದಿಯನ್ನು ಕೊಟ್ಟಿರುತ್ತೀರೋ ಅದನ್ನು ಅನುಸರಿಸಿ ನಾವು ಚರ್ಚೆ ಮಾಡಬೇಕಾಗುತ್ತದೆ. ಇದು ನೋಡಿದರೆ ಅಕ್ಷಮ್ಯ ಅಪರಾಧ. ಇದರ ಬಗ್ಗೆ ತಾವು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲೇ ಬೇಕು. ಎಷ್ಟು ವಿದ್ಯುಚ್ಛಕ್ತಿ ಜನರೇಟರ್ ಆಗಿದೆ.? ಎಷ್ಟು ಜಾಸ್ತಿ ಆಗಿದೆ ಎಂಬುದನ್ನು ವಿಮರ್ಶೆ ಮಾಡಬೇಕಾಗುತ್ತದೆ. ಹಾಗೆ ಇದನ್ನು ನಾವು ವಿಮರ್ಶೆ ಮಾಡಿ ನೋಡಿದಾಗ ೧೯೮೧-೮೨ ಮತ್ತು ೧೯೮೨-೮೩ಕ್ಕೆ ಹೋಲಿಕೆ ಮಾಡಿ ನೋಡಿದಾಗ [illegible] ಮಿಲಿಯನ್ ಯೂನಿಟ್ಸ್ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಮತ್ತೆ ೧೯೮೨-೮೩ ಮತ್ತು ೧೯೮೩-೮೪ಕ್ಕೆ ಹೋಲಿಕೆ ಮಾಡಿ ನೋಡಿದಾಗ ಹೇಳಿದ್ದಾರೆ ೯೭.೬ ಮಿಲಿಯನ್ ಯೂನಿಟ್ಸ್ ಜಾಸ್ತಿಯಾಗಿದೆ ಎಂದು. ಇದನ್ನು ನೋಡಿ ನಾವು ಯಾವ ತೀರ್ಮಾನಕ್ಕೆ ಬರಬೇಕು? ನಿಮ್ಮ ಪ್ಲಾನ್ ಔಟ್‌ಲೇ ಅನ್ನು ಕೊಡಿ. ನಿಮ್ಮ ವರ್ಕ್ ಪ್ರೋಗ್ರಾಂ ಏನು? ನಿಮ್ಮ ಯೋಜನೆಯಲ್ಲಿ ಎಷ್ಟು ಹಣ ಇಟ್ಟಿದ್ದೀರಿ? ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಮತ್ತೆ ತಮ್ಮ ವಾರ್ಷಿಕ ವರದಿಯ ಪುಟ [illegible]ರಲ್ಲಿ ಏನು ಹೇಳಿದ್ದೀರೆಂದರೆ ೧೯೮೪-೮೫ನೇ ಸಾಲಿನಲ್ಲಿ ಈ ಯೋಜನೆಯಲ್ಲಿ ಸುಮಾರು ೯೦.೩೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ತಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಮಾನ್ಯ ಅಧ್ಯಕ್ಷರೇ, ಅವರ ವರದಿಯ ಪ್ರಕಾರ ಇದಕ್ಕೆ ಎಷ್ಟು ಇಟ್ಟಿರುತ್ತಾರೆ, ಎಂದರೆ ೨೯.೫೬ ಕೋಟಿ ಇಟ್ಟಿದ್ದಾರೆ. ಆದುದರಿಂದ ಖಂಡಿತವಾಗಲೂ ಇದಕ್ಕೆ ಎಷ್ಟು ಆದ್ಯತೆಯನ್ನು ಕೊಡಬೇಕೆಂದು ಹೇಳಿಕೊಳ್ಳುತ್ತಿದ್ದರೋ, ಅಷ್ಟು ಕೊಡುತ್ತಿಲ್ಲ ಎಂದು ಸ್ಪಷ್ಟವಾಗಿ ಅಂಕಿ ಅಂಶಗಳಿಂದ ಗೊತ್ತಾಗುತ್ತಿದೆ. ಇನ್ನೊಂದು ತಮ್ಮ ಮುಖಚಿತ್ರ ಏನಿದೆ ಅದು ಸ್ಪಷ್ಟವಾಗಿ ಗೊತ್ತಾಗಬೇಕೆಂದರೆ ಅದನ್ನೂ ಕೂಡಾ ಹೇಳಿಬಿಡುತ್ತೇನೆ ಎಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ ರಿಪೋರ್ಟ್‌ನ ೩೯ನೇ ಪುಟ ತಾವು ತೆಗೆದು ನೋಡಿದರೆ, ಅವರು ಏನು ಹೇಳುತ್ತಾರೆ ಎಂದು ಒಂದು ವಿಷಯ ನಾನು ಹೇಳಿಬಿಡುತ್ತೇನೆ. ನಮ್ಮ ರಾಜ್ಯಕ್ಕೂ ಬೇರೆ ರಾಜ್ಯಕ್ಕೂ ಹೋಲಿಸಿದರೆ ನಾವು ಎಷ್ಟು ಹಿಂದೆ ಬಿದ್ದಿದ್ದೇವೆ ಎಂದು ಹೇಳಿಬಿಟ್ಟರೆ ಸಾಕು ಗೊತ್ತಾಗುತ್ತದೆ.

I would like to quote here from the background papers written for Economic and Planning Council of Karnataka. Volume-I, Page 39. ಅದರಲ್ಲಿ ಈ ರೀತಿ ಇದೆ.

"It may be revealing, that the ratio of number of jobs created per million units consumption of energy by industry in Karnataka is only 116, which is the lowest amongst the States compared, Whereas the corresponding figures for other States are—Gujarat (163), Maharashtra (173), Andhra (299), Tamil Nadu (182) and All-India (177). Similarly in terms of ratio of value of industrial output per million units of energy consumpion—the figure for Karnataka is only Rs. 52 lakhs, whereas corresponding figures for others are—Gujurat (Rs. 108 lakhs), Maharashtra (Rs. 130 lakhs), Andhra (Rs. 97 lakhs), Tamil Nadu (Rs. 107 lakhs) and ALL-INDIA Average (Rs. 91 lakhs). As can be seen, this feature is true even in the case of gross wages paid and of gross capital employed.

The general impression one can gather is that the previous industrial growth and development as a whole in the State appear to represent an extreme example of the most inefficient utilisation of power. The situation here is that of the industry making the lowest possible investment, producing the smallest output, creating least number of jobs in relation to the quantum of energy consumed, when compared with other States and with the huge investment made in the Power Sector."

It is a damaging statement and indictment of the power situation.

ಆದುದರಿಂದ ಇಷ್ಟು ಮಾತ್ರ ಹೇಳಬಲ್ಲೆ. ಆದುದರಿಂದ ನಾನು ಹೇಳುವುದು ಪರಿಸ್ಥಿತಿ ಬಹಳ ಹದಗೆಟ್ಟಿದೆ.

ಚೇರ್ಮನ್.—ಇನ್ನೂ ತುಂಬ ಜನ ಮಾತನಾಡುವವರು ಇದ್ದಾರೆ, ಬೇಗ ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಐದು ಹತ್ತು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಇದನ್ನು ಕೆ.ಇ.ಬಿ. ಬಗ್ಗೆ ನಾನು ಆಗಲೇ ಹೇಳಿದೆ, ಅಲ್ಲಿ ಅದಕ್ಷತೆ ಇದೆ ಎಂದು ಹೇಳಿದ್ದೇನೆ. ಈಗ ಏನಾಗಿದೆ ಎಂದರೆ, ಬೆಂಗಳೂರು ನಗರದಲ್ಲಿ ವೋಲ್ಟೇಜ್ ಡ್ರಾಪ್ ಇರುವುದು ಎಲ್ಲರಿಗೂ ಗೊತ್ತಿದೆ. ನಿಮ್ಮ ಮನೆಯಲ್ಲೂ ಇದೆ, ನಮ್ಮ ಮನೆಯಲ್ಲೂ ವೋಲ್ಟೇಜ್ ಡ್ರಾಪ್ ಇದೆ ಎಲ್ಲರಿಗೂ ವೋಲ್ಟೇಜ್ ಡ್ರಾಪ್ ಇದೆ, ಮಂತ್ರಿಗಳಿಗೂ ವೋಲ್ಟೇಜ್ ಡ್ರಾಪ್ ಇದೆ. ವಿದ್ಯಾರ್ಥಿಗಳಿಗೆ ಓದುವುದಕ್ಕೆ ಆಗುತ್ತಿಲ್ಲ. ಇಂತಹ ಪರಿಸ್ಥಿತಿ ಇದೆ. ಬೇರೆ ದೇಶಗಳಲ್ಲಿ ಈ ರೀತಿ ಆಗಿದ್ದರೆ ಕೇಸ್ ಹಾಕುತ್ತಿದ್ದರು. ಅಮೇರಿಕಾದಲ್ಲಿ ಈ ರೀತಿ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಒದಗಿಸಲಿಲ್ಲ ಎಂದರೆ, ವಿದ್ಯುಚ್ಛಕ್ತಿ ಸರಿಯಾಗಿ ಒದಗಿಸಿಲ್ಲ, ಆದರೆ ತೆರಿಗೆ ವಸೂಲು ಮಾಡುತ್ತಿದ್ದಾರೆ ಎಂದು ಕೇಸ್ ಹಾಕುತ್ತಿದ್ದರು. ಆದರೆ ಭಾರತ ದೇಶದಲ್ಲಿರ ತಕ್ಕಂಥ ಜನ ಅವರಿಗೆ ದೊರಕಿದಂತಹ ಕಾಂಪೆನ್‌ಸೇಷನ್ ಏನಿದೆ, ಪರಿಹಾರ ಏನಿದೆ ಅದನ್ನು ಕೇಳತಕ್ಕ ಶಕ್ತಿ ಅವರಿಗೆ ಇಲ್ಲ. ಇನ್ನು ಸರಕಾರದ ಮೇಲೆ ವಿದ್ಯುಚ್ಛಕ್ತಿ ಮಂಡಲಿ ಮೇಲೆ ಹೇಗೆ ಕೇಳುತ್ತಾರೆ. ಅವರು ನೊಂದುಕೊಂಡು, ಅನುಭವಿಸಿಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಒಂದು ಎಲೆಕ್ಟ್ರಿಕ್

ಪೋಲ್ ತೆಗೆದು ಬೇರೆ ಹಾಕಿ ಎಂದರೆ ಅದಕ್ಕೆ ಭ್ರಷ್ಟಾಚಾರ. ಬಲ್ಬ್ ಹಾಕಬೇಕಾದರೆ ದಂಡುಕೊಡಬೇಕು. ಟ್ರಾನ್ಸ್‌ಫಾರ್ಮರ್ ಚೇಂಜ್ ಮಾಡುವುದಿಲ್ಲ ಲೈನ್ಸ್ ಚೇಂಜ್ ಮಾಡುವುದಿಲ್ಲ ಅಂಡರ್‌ಗ್ರೌಂಡ್ ಕೇಬಲ್ ಹಾಕುವುದಿಲ್ಲ. ಕೇಳಿ ಕೇಳಿ ಸುಸ್ತಾಗಿ ಹೋಗಿದೆ. ಬಹಳ ಇನ್‌ಎಫಿಷಿಯೆಂಟ್ ಆರ್ಗನೈಸೇಷನ್ ಎಂದರೆ, ಅದು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾವು ರಾಜಾಜಿನಗರ ಪವರ್‌ಹೌಸ್ ಮುಂದೆ ಒಂದು ಧರಣಿ ಮಾಡಿದ್ದೆವು. ಆಗ ಅಲ್ಲಿಗೆ ಗಿರಿಯಪ್ಪನವರು ಎಂಬ ಒಬ್ಬರು ಸೂಪರಿಂಟೆಂಡಿಂಗ್ ಎಂಜಿನಿಯರ್ ಬಂದಿದ್ದರು. ಅವರು ಅದು ಆಗುತ್ತದೆ, ಇದು ಆಗುತ್ತದೆ ಎಂದು ಆಶ್ವಾಸನೆ ಕೊಟ್ಟರು. ಆ ಆಶ್ವಾಸನೆಗಳಲ್ಲಿ ೭೫ ಪರ್ಸೆಂಟ್ ಆಗದೆ ಹಾಗೆ ಉಳಿದಿದೆ, ಇನ್ನು ೨೫ ಪರ್ಸೆಂಟ್ ಆಗಿದೆ. ನಾನು ಭ್ರಷ್ಟಾಚಾರದ ಬಗ್ಗೆ ಹೇಳಿದರೆ ಹೇಗೆ ಎಂದು ಕೇಳಬಹುದು. ಆದರೆ ಆ ಸಂಸ್ಥೆಯ ಚೇರ್ಮನ್ ಆಗಿರುವ ರುದ್ರಪ್ಪನವರೇ, ದಿನಾಂಕ ೧-೪-೧೯೮೫ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಹೇಳಿದ್ದಾರೆ. ಅವನ್ನು ಕೋಟ್ ಮಾಡುವುದಕ್ಕೆ ಟೈಮ್ ಇಲ್ಲ. ಭ್ರಷ್ಟಾಚಾರ ಇದೆ ಎಂದು ಹೇಳಿದ್ದಾರೆ. I am not very happy about it......ಎಂದು ಹೇಳಿದ್ದಾರೆ. I am not very happy about K.E.B. There is corruption in K.E.B. ಎಂದು ಚೇರ್ಮನ್‌ರವರೇ ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ರಾಜಕಾರಣಕ್ಕೂ ಅದಕ್ಕೂ ಸಂಬಂಧ ಇಲ್ಲ. ಅದರಲ್ಲಿ ರಾಜಕಾರಣ ತರಬೇಡಿ.

ಚೇರ್ಮನ್.—ನೀವು ಏತಕ್ಕೆ ಮಧ್ಯೆ ಮಾತನಾಡುತ್ತೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮೌಲ್ಯಾಧಾರಿತ ರಾಜಕಾರಣದ ಮಾತನಾಡುವ ಜನ ಅವರ ಮೌಲ್ಯಗಳನ್ನು ಬೇರೆಯವರು ಕಂಡು ಹಿಡಿದು ಹೇಳಬೇಕೆಂದು ಇಷ್ಟಪಡುತ್ತಾರೆ. ಇನ್ನು ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅದನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ. ನಾನೂ ಕೂಡಾ ಅದರ ಬಗ್ಗೆ ಒತ್ತಿ ಹೇಳಬೇಕಾಗಿದೆ. ಅದರ ಬಗ್ಗೆ ನೀವು ಮಾತನಾಡಲಿಲ್ಲವಲ್ಲ ಎಂದು ಹೇಳಬೇಕಾಗಿದೆ, ಹಾಗೂ ಅದನ್ನು ಖಂಡಿಸಬೇಕಾಗಿದೆ. ಪೇಜ್ ೩೯ರಲ್ಲಿ ಏನು ಹೇಳಿದ್ದೀರಿ ಎಂದರೆ. "To minimise losses steps have been taken to strengthen the transmission lines network." ಎಂದು ಈ ರೀತಿ ಮಿಸ್ ಬಿಲೀವ್ ಮಾಡುವ ರೀತಿಯಲ್ಲಿ ಮಾತನಾಡಬೇಡಿ. ಗೊತ್ತಿಲ್ಲ ಎಂದು ಹೇಳಿ. ವಿಷಯ ತಿಳಿದುಕೊಳ್ಳುವುದಕ್ಕೆ ಅವಕಾಶ ಇದೆ. ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ ನಿಮ್ಮ ಕ್ಲೇಮ್ ಏನಿದೆ, ರಿಪೋರ್ಟ್ ಏನಿದೆ, ಇದು ಬೋಗಸ್ ಕ್ಲೇಮ್ ೧೯೮೧-೮೨ರಲ್ಲಿ ೨೧.೦೨ ಪರ್ಸೆಂಟ್ ಇತ್ತು, ೧೯೮೩-೮೪ರಲ್ಲಿ ೨೧.೭೪ ಪರ್ಸೆಂಟ್ ಆಯಿತು. ೧೯೮೩-೮೪ರಲ್ಲಿ ರಿಪೋರ್ಟ್ ಕೊಟ್ಟಿಲ್ಲ. ಗೌರ್ನಮೆಂಟ್‌ನವರೂ ಹೇಳಿಲ್ಲ, ಕೆ.ಇ.ಬಿ.ಯವರೂ ಹೇಳಿಲ್ಲ ಯಾರೂ ಹೇಳಿಲ್ಲ. ಆದರೆ ನೀವು ಹೇಳದಿರಬಹುದು ಬೇರೆಯವರು ಹೇಳಿದ್ದಾರೆ. ಬೇರೆಯವರು ಎಂದರೆ, ಆಡಿಟರ್ ಜನರಲ್ ಹೇಳಿದ್ದಾರೆ. ನಮ್ಮ ರಾಜ್ಯದ ಆಡಿಟರ್ ಜನರಲ್‌ರವರು ಏನು ಹೇಳಿದ್ದಾರೆ ಎಂದರೆ:

"While on the one hand there was no acute shortage of power in the State the power lost in the process of transmission and distribution has been considerable ranging up to 23.4% which was higher than the norm of 15% fixed by the Central Water and Power Commission. The Report pointed out that though it has been stressed by Rajyadaksha Committee that investment in cutting down transmission and distribution losses was the far cheaper way of getting more power to the consumer than the investment in new generation capacity and that should receive higher priority, the K.E.B. had not taken up any specific schemes directed to reduce the losses till 1982-83." ಎಂದು

MR. SPEAKER (SRI B. G. BANAKAR) in the Chair.

ಅಧ್ಯಕ್ಷರು.—ಇನ್ನು ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅದರ ಪರ್ಸೆಂಟೇಜ್ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಜಾಸ್ತಿ ಇದೆ. ಆಲ್ ಇಂಡಿಯಾ ಆವರೇಜ್‌ಗಿಂತ ಜಾಸ್ತಿ ಇದೆ. ಇಂಟರ್ ನ್ಯಾಷನಲ್ ಸ್ಟ್ಯಾಂಡರ್ಡ್ ತೆಗೆದುಕೊಂಡಾಗ ಬಹಳ ಹಿಂದೆ ಇದೆ. ಫ್ರಾನ್ಸ್‌ನಲ್ಲಿ ೮ ಪರ್ಸೆಂಟ್ ಇದೆ. ಇಂಟರ್‌ನ್ಯಾಷನಲ್ ಟ್ರಾನ್ಸ್‌ಮಿಷನ್ ಲಾಸ್ ೧೦ ಪರ್ಸೆಂಟ್ ಇದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಏನು ಹೇಳುತ್ತಾರೆ ಎಂದರೆ

ಇದರಲ್ಲಿ ಮೊದಲು ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಮಾಡುವುದಕ್ಕೆ ಏನು ಮಾಡಿದ್ದೇವೆ ಎಂಬುದನ್ನು ಹೇಳಿದ್ದಾರೆ. ಹೊಸ ರೀತಿಯ ಸ್ವಿಚ್ ಕೆಪಾಸಿಟರ್ಸ್ ಹಾಕಿದ್ದೇವೆಂದು ಹೇಳಿದ್ದಾರೆ. ಈ ಒಂದು ರೀತಿಯ ಲಾಸ್ ನೀವು ಬಂದ ಮೇಲೆ ಆಗಿದೆ ಎಂದಲ್ಲ. ಪುಸ್ತಕವನ್ನೇನೋ ಬಹಳ ಚೆನ್ನಾಗಿ ಪ್ರಿಂಟ್ ಮಾಡಿಸಿ ಕೊಟ್ಟಿದ್ದೀರಿ. ಹಿಂದೆ ಎಲ್ಲಿಯವರೆಗೆ ಟ್ರಾನ್ಸ್‌ಮಿಷನ್ ಲಾಸ್ ಇತ್ತೋ, ಈಗಲೂ ಅದು ಜಾಸ್ತಿ ಆಗಿಲ್ಲ. ನೀವು ಯಾವ ರೀತಿಯ ಪರಿಣಾಮಕಾರಿ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಕೈಗಾರಿಕೆಯವರು ಕದಿಯುತ್ತಾರೆ, ಅಲ್ಲದೇ ಬೇರೆ ರೀತಿಯಲ್ಲೂ ನೋಡಿ. ಇಂಡೆಕ್ಸ್ ಸ್ಟಡಿ ಮಾಡಬೇಕು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಪಂಪ್‌ಸೆಟ್ ಬಗ್ಗೆ ಹೇಳಿದ್ದೀರಿ. ಪಂಪ್‌ಸೆಟ್‌ಗಳನ್ನು ಪಾರುವಂಥ ನಿಮ್ಮ ಪರ್‌ಫಾರ್ಮೆನ್ಸ್ ತೆಗೆದುಕೊಂಡರೆ, ಇದರಲ್ಲಿ ನೀವು ಎಷ್ಟು ಮಾಡಿದ್ದೇವೆಂದು ಹೇಳಿದ್ದೀರೋ ಅಷ್ಟು ಮಾಡಿಲ್ಲವೆಂದು ಗೊತ್ತಾಗುತ್ತದೆ. ಬೇರೆ ರಾಜ್ಯಗಳಿಗೂ, ನಮ್ಮ ರಾಜ್ಯಕ್ಕೂ ಇದನ್ನು ಹೋಲಿಸಿ ನೋಡಿದರೆ, ಈ ಅಂಶ ಗೊತ್ತಾಗುತ್ತದೆ. It is a hallow claim. ಎಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ ಪೇಜ್ ೫೦ರಲ್ಲಿ ಬೇರೆ ರಾಜ್ಯಗಳಿಗೂ ನಮ್ಮ ರಾಜ್ಯಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. Andhra Pradesh No. of I.P. sets 3,45,460 March 1980.. Energy consumed per set 276, Sales of IP sets 946. Andhra pradesh percentage 20.4

Maharashtra 16.7% to total sales

Haryana 41.6%

Punjab 41.15%

Gujarat 23.5%

Karnataka 7.4% We are nowhere near. They have advanced far greater than Karnataka.

ಐ.ಪಿ. ಸೆಟ್ ಜಾಸ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಹರಿಜನ ಬಸ್ತಿಗಳ ಬಗ್ಗೆ ಮಾತನಾಡಿದ್ದಾರೆ. ಅನುಸೂಚಿತ ಜಾತಿಗಳವರಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತಿದ್ದಾರೆ, ಅನುಸೂಚಿತ ಜಾತಿಗಳವರ ಮನೆಗಳಿಗೆ ಎಲೆಕ್ಟ್ರಿಸಿಟಿ ಕೊಡಲು ೯೭೯ ಬಸ್ತಿಗಳನ್ನು ಗುರುತಿಸಿದ್ದಾರೆ. ಸುಮಾರು ೧.೪ ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ ಇಂತಹ ಸ್ಕೀಂಗಳಲ್ಲಿ ಸುಮಾರು ೮೧ ಬಸ್ತಿಗಳಿಗೆ ೧೦.೯೪ ಲಕ್ಷ ರೂಪಾಯಿಗಳಾಗುತ್ತದೆ ಎಂದು ಹೇಳಿದ್ದಾರೆ. ಒಟ್ಟು ೧೦೬೨ ಬಸ್ತಿಗಳಿಗೆ ೧.೭೫ ಕೋಟಿ ರೂಪಾಯಿ ಆಗುತ್ತದೆ ೩೧-೩-೧೯೮೫ರವರೆಗೆ ಎಷ್ಟು ಎಲೆಕ್ಟ್ರಿಫಿಕೇಷನ್ ಮಾಡಿದ್ದೀರಿ. ಹರಿಜನ ಬಸ್ತಿಗಳಿಗೆ ೩೩೧ ಬಸ್ತಿಗಳಿಗೆ ಮಾತ್ರ ಆಗಿದೆ. ಇದಕ್ಕೆ ಎಷ್ಟು ಖರ್ಚಾಗಿದೆ? ಎಲ್ಲೆಲ್ಲಿ ಉಳಿದಿದೆ ಎಂದು ಹೇಳಲಿ. Why did it lapsed? who is responsible for it? ನೀವು ಕಣ್ಣೀರು ಸುರಿಸಿ ಏನು ಪ್ರಯೋಜನ? ನಾನು ಇದನ್ನು ಖಡಾ-ಖಂಡಿತವಾಗಿ ಟೀಕೆ ಮಾಡಬೇಕಾಗಿದೆ. ನಿಮ್ಮದು ಮೊಸಳೆ ಕಣ್ಣೀರು ಎಂದು ಹೇಳಬೇಕಾಗುತ್ತದೆ, ಈ ಕೆ.ಇ.ಬಿ.ನಲ್ಲಿ ಏನಾಗಿದೆ ಎಂದರೆ. There is a difference between engineers and also the Administrators. This is alse one of the contributing factors. President of KEB Engineers, Association Mr. Fakirappa has

blamed the board for starving engineers of the needed materials and men.

ಅವರು ಇವರನ್ನು ಬೈಯ್ಯುತ್ತಾರೆ. ಇವರು ಅವರನ್ನು ಬೈಯುತ್ತಾರೆ. ಅಧಿಕಾರಿಗಳು, ಇಂಜಿನಿಯರ್ಸ್, ಒಬ್ಬೊಬ್ಬರಲ್ಲೂ ರಾಜಕೀಯ ತುಂಬಿರುತ್ತದೆ. ಇದಕ್ಕೆ ತೀವ್ರವಾದ ಕ್ರಮ ತೆಗೆದು-ಕೊಳ್ಳಬೇಕು. ಕೆ ಇ ಬಿ ನಲ್ಲಿ ಕೋ-ಆರ್ಡಿನೇಷನ್ ಇಲ್ಲ. ಜನಗಳ ಮೇಲೆ ಹೆಚ್ಚು ಚಾರ್ಜಸ್ ಹಾಕಿ, ಹೊರೆ ಹೊರಿಸುತ್ತಾರೆಂಬುದೇ ನನ್ನ ಆರೋಪ. ಕೆ.ಪಿ.ಸಿ.ಯನ್ನು ನೀವು ಮರ್ಜ್ ಮಾಡಿ ಎಂದು ನಾನು ಹೇಳುವುದಿಲ್ಲ. ಆ ವ್ಯವಹಾರ ಸರಿಯಲ್ಲ. ಆದುದರಿಂದ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಕೇಂದ್ರ ಸರ್ಕಾರದ ಬಗ್ಗೆ ಒಂದು ಮಾತು. ಕೇಂದ್ರ ಸರ್ಕಾರ ಯಾವಾಗಲೂ ಒಂದು ರೀತಿಯ ಮಲ ತಾಯಿ ಧೋರಣೆ ತಳೆಯುತ್ತಿದೆ. ಕರ್ನಾಟಕ ರಾಜ್ಯಕ್ಕೆ ಇದರಿಂದ ಅನ್ಯಾಯವಾಗಿದೆ. ಒಂದು ನ್ಯೂಕ್ಲಿಯರ್ ಪವರ್ ಸ್ಟೇಷನ್ ಬರುತ್ತದೆಂದು ಹೇಳುತ್ತಿದ್ದಾರೆ. ಅದು ಬಂದರೆ ಬಹಳ ಸಂತೋಷ. Gas turbin Unit, Bangalore, Mangalore Thermal power station ಇದರ ಬಗ್ಗೆ ಇನ್ನೂ ಕ್ಲಿಯರೆನ್ಸ್ ಕೊಟ್ಟಿಲ್ಲ. ಈಗ ಏನಾಗಿದೆಯೋ ಗೊತ್ತಿಲ್ಲ. ನಮಗೆ ಬರಬೇಕಾಗಿರುವ ವಿದ್ಯುಚ್ಛಕ್ತಿ ರಾಮಗುಂಡಂನಿಂದ, ಕಲ್ಪಾಕಂನಿಂದ, Raichur Thermal power II and III stageಗೆ ಕೇಂದ್ರ ಸರ್ಕಾರ ಏತಕ್ಕಾಗಿ ಕ್ಲಿಯರೆನ್ಸ್ ಕೊಡುತ್ತಾ ಇಲ್ಲ. ಹೋಗುತ್ತಿಲ್ಲ ಅವರು ಏನು ಮಾಡುತ್ತಿದ್ದಾರೆ? ಹೇಳದೆ ಹೋದರೆ ನಮಗೆ ಇದರ ಬಗ್ಗೆ ಅನುಮಾನ ಬರುತ್ತದೆ. ಕೇಂದ್ರ ಸರ್ಕಾರ ಎಲ್ಲಾ ರೀತಿಯ ಯೋಜನೆಗಳನ್ನು ಮಾಡಿದ್ದರೂ, ರಾಜ್ಯ ಸರ್ಕಾರಕ್ಕೆ ಅನುಕೂಲಗಳನ್ನು ಕೊಡುತ್ತಾ ಇಲ್ಲ. ರಾಜ್ಯ ಸರ್ಕಾರ ಇದರ ಬಗ್ಗೆ ಒತ್ತಾಯ ತರಬೇಕು. ಕೈಗಾ ಗ್ಯಾಸ್ ಟರ್ಬೈನ್‌ನಿಂದ ಹೆಚ್ಚು ಪವರ್ ಪಡೆಯುವುದಕ್ಕೆ ಒತ್ತಾಯ ಮಾಡಬೇಕು.

ಹಾಗೆಯೇ ಕಾರ್ಮಿಕರ ಸಹಾಯ, ಸಹಕಾರ ಪಡೆಯಬೇಕು. ಕಾರ್ಮಿಕರ ಸಹಕಾರವನ್ನು ಪಡೆದರೆ ಎಷ್ಟೋ ತೊಂದರೆಗಳು ಕಡಿಮೆಯಾಗುತ್ತವೆ. ನೀವು ಮುಂದೆ ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ ಎಂ. ಇದಿನಬ್ಬ (ಉಲ್ಲಾಳ) – ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ವಾರ್ತಾ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಚಿವರು ಮತ್ತು ವಿದ್ಯುಚ್ಛಕ್ತಿ ಇಲಾಖೆ ಸಚಿವರು ತಂದಿರತಕ್ಕ ಬೇಡಿಕೆಗಳಿಗೆ ಕೆಲವು ಕಾರಣಗಳಿಗಾಗಿ ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ಮುಖ್ಯವಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಹೆಚ್ಚು ಮಾತನಾಡಲು ಅಪೇಕ್ಷೆ ಪಡುತ್ತೇನೆ. ಕರ್ನಾಟಕ ಎನ್ನುವ ರಾಜ್ಯದಲ್ಲಿ, ಕನ್ನಡ ಕರ್ನಾಟಕದ ಉಸಿರಾಗಿದೆ, ಇದನ್ನು ಯಾರು ಅಲ್ಲಗಳೆಯತಕ್ಕ ವಿಚಾರ ಅಲ್ಲ. ಕರ್ನಾಟಕ ಎಂಬ ದೇಹದಲ್ಲಿ ಪ್ರಾಣದ ಉಸಿರಾಗಿರತಕ್ಕ ಕನ್ನಡದ ಬೆಳವಣಿಗೆ ಆಗಬೇಕು. ಇದಕ್ಕಾಗಿ ನಾವು ಈ ೨೫ ವರ್ಷಗಳಲ್ಲಿ ಎಷ್ಟು ಕೆಲಸ ಮಾಡಿದ್ದೇವೆ. ಏನಾಗಿದ್ದೇವೆ ಎಂಬುದನ್ನು ಆಲೋಚನೆ ಮಾಡಬೇಕು. ಈ ಇಲಾಖೆಗೆ ಇಟ್ಟಿರತಕ್ಕ ಯೋಜನೆ ಕಡಿಮೆ ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ಇನ್ನು ಹೆಚ್ಚು ಹಣ ಪಡೆದು, ಅದ್ಭುತ ಕೆಲಸಗಳನ್ನು ಮಾಡಬೇಕಿತ್ತು. ಮೊದಲು ನಮ್ಮ ರಾಷ್ಟ್ರ ಭಾರತ ದೇಶ ಎಂದು ಇತ್ತು. ಕರ್ನಾಟಕ ಎನ್ನುವ ಹೆಸರೇ ಇರಲಿಲ್ಲ. ಆಂಧ್ರದಲ್ಲಿ ಭಾಷಾವಾರು ರಾಜ್ಯ ಆಗಬೇಕೆಂದ ಹೇಳತಕ್ಕಂಥ ಚಳುವಳಿ ಆಯಿತು. ಬೇರೆ ಬೇರೆ ರಾಜ್ಯಗಳಲ್ಲಿಯೂ ಇದರ ಬಗ್ಗೆ ಕಾರ್ಯಕ್ರಮಗಳು ಆದವು. ಫಜಲ್ ಅಲಿ ಕಮಿಟಿಯೂ ಕೂಡ ಭಾಷಾವಾರು ರಾಜ್ಯ ಸಿಗಬೇಕೆಂದು ಹೇಳಿದ್ದು, ಇವತ್ತು ಭಾಷಾವಾರು ರಾಜ್ಯಗಳಾಗಿವೆ. ಅದರಂತೆ ಕರ್ನಾಟಕವೂ ಕೂಡ ಭಾಷಾವಾರು ರಾಜ್ಯವಾಗಿದೆ. ಇದನ್ನು ಅಲ್ಲಗಳೆಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ.

೪-೩೦ ಪಿ. ಎಂ.

ಈವೊತ್ತು ಕರ್ನಾಟಕದಲ್ಲಿ ಕನ್ನಡ ಎಷ್ಟು ಮೇಲಕ್ಕೆತ್ತಿದ್ದಾರೆ ಎನ್ನುವುದನ್ನು ನೋಡಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಇನ್ನೂ ಎಚ್ಚರ ವಹಿಸಬೇಕು. ಈವೊತ್ತಿನ ದಿವಸ ನಮ್ಮ ನೆರೆ ರಾಜ್ಯವಾದ ಕೇರಳಕ್ಕೆ ಹೋಗಿ ನೋಡಿದರೆ ಅಲ್ಲಿ ಯಾವನಾದರೂ ಒಬ್ಬ ಈ ಊರಿನಿಂದ

ಹೋದವರು ಇದ್ದರೆ ಅವರಿಗೆ ಮಾತ್ರ ಕನ್ನಡ ಬರುತ್ತದೆ, ಬೇರೆಯಾರೂ ಮಾತನಾಡುವುದಿಲ್ಲ. ಅಲ್ಲಿ ಅವರು ಎಂ.ಎ., ಬಿ.ಎ., ಪಾಸು ಮಾಡಿಕೊಂಡರೂ ಕೂಡ ಮಲೆಯಾಳಿಯಲ್ಲಿ ಮಾತನಾಡುತ್ತಾರೇ ವಿನಾಃ ಬೇರೆ ಯಾವ ಭಾಷೆಯಲ್ಲೂ ಮಾತನಾಡುವುದಿಲ್ಲ. ಅಲ್ಲಿ ಪತ್ರಿಕೆಯೂ ಮಲೆಯಾಳಿ ಭಾಷೆಯಲ್ಲೇ ಬರುತ್ತದೆ, ಅಲ್ಲದೆ ಅಲ್ಲಿ ಅಸೆಂಬ್ಲಿಯಲ್ಲಿ ೧ಳಳ ಜನರು ಏನು ಇದ್ದಾರೆ ಅವರೆಲ್ಲರೂ ಕೂಡ ಮಲೆಯಾಳಿಯಲ್ಲೇ ಮಾತನಾಡುತ್ತಾರೆ, ಇಂಗ್ಲಿಷ್‌ನಲ್ಲಿ ಯಾವುದೇ ಒಂದು ವ್ಯವಹಾರವನ್ನು ಮಾಡುವುದಿಲ್ಲ. ಹಾಗೆಯೇ ತಮಿಳ್‌ನಾಡಿನಲ್ಲೂ ಸಹ ಎಲ್ಲರೂ ತಮಿಳನ್ನೇ ಉಪಯೋಗಿಸುತ್ತಿದ್ದಾರೆ. ಕನ್ನಡದ ಒಂದು ಶಬ್ದವನ್ನೂ ಉಪಯೋಗಿಸುವುದಿಲ್ಲ, ಹಾಗೆಯೇ ಆಂಧ್ರದಲ್ಲೂ ಸಹ, ತೆಲುಗನ್ನೇ ಉಪಯೋಗಿಸುತ್ತಿದ್ದಾರೆ, ಕನ್ನಡ ಒಂದು ಶಬ್ದವೂ ಇಲ್ಲ. ಯಾರಾದರೂ ಕೂಡ ನಮ್ಮ ಕರ್ನಾಟಕದವರು ಅಲ್ಲಿ ಹೋಗಿದ್ದರೆ ಅವರು ಮಾತ್ರ ಕನ್ನಡ ಉಪಯೋಗಿಸುತ್ತಾರೇ ವಿನಾ ಇನ್ನುಯಾರು ಆ ದೇಶದವರು ನಮ್ಮ ಕನ್ನಡವನ್ನು ಉಪಯೋಗಿಸುವುದಿಲ್ಲ. ನಾವು ಭಾಷಾವಾರು ರಾಜ್ಯ ಮಾಡಿ ಕರ್ನಾಟಕದಲ್ಲಿ ಕನ್ನಡವನ್ನು ಸರಿಯಾಗಿ ಬಳಸುವುದಕ್ಕೆ ಶಕ್ಯವಿಲ್ಲದ ಹಾಗಾಗಿದೆ. ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಒಂದೊಂದು ಸರ್ಕಲ್‌ನಲ್ಲೂ ೧೦-೧೦ ನಿಮಿಷ ನಿಂತುಕೊಂಡು ನೋಡಿದರೆ ಆ ಜನರು ಆಡುವ ಭಾಷೆ ೫೦ ಪರ್ಸೆಂಟ್ ತಮಿಳ್‌ನವರು, ಇನ್ನೂ ೪೦ ಪರ್ಸೆಂಟ್ ಉಳಿದವರು ಇರುತ್ತಾರೆ, ೧೦ ಪರ್ಸೆಂಟ್ ಮಾತ್ರ ಕನ್ನಡದವರು ಇದ್ದಾರೆ. ಬೇಕಾದರೆ ಎಲ್ಲಾ ಸರ್ಕಲ್‌ಗೂ ಹೋಗಿ ಪರೀಕ್ಷೆ ಮಾಡಿ ನೋಡಿ. ಹಾಗೆಯೇ ಮಂಗಳೂರಿನಲ್ಲಿ ಯಾವುದೇ ಸರ್ಕಲ್‌ಗೆ ಹೋಗಿ ನೋಡಿ ಅಲ್ಲಿ ೬೦ ಪರ್ಸೆಂಟ್ ಜನ ಮಲೆಯಾಳದವರು ಸಹ ಇದ್ದಾರೆ, ಕನ್ನಡದಲ್ಲಿ ಮಾತನಾಡುವ ಜನರು ಬಹಳ ಕಡಿಮೆ. ಹೀಗಾದರೆ ಕರ್ನಾಟಕದ ಗತಿ ಏನಾಗುತ್ತದೆ ? ಕನ್ನಡದ ಗತಿ ಏನಾಗುತ್ತದೆ ? ತಮಗೆ ಒಂದು ವಿಚಾರ ಹೇಳುವುದಾದರೆ ಕೇಳಪ್ಪನ್ ಎನ್ನುವವರು ಗೋಕರ್ಣವನ್ನು ಕೇರಳಕ್ಕೆ ಹೋಗಬೇಕು ಎಂದು ಹೇಳುತ್ತಿದ್ದಾರೆ. ಇನ್ನು ೧೦-೨೦ ವರ್ಷವಾದ ಮೇಲೆ ಅವರೆಲ್ಲಾ ಇಲ್ಲಿ ವೋಟರ್ಸ್ ಆಗಿರುವುದರಿಂದ ಮುಂದೆ ನಮ್ಮ ಕರ್ನಾಟಕದ ಗತಿ ಏನು ? ಅವರು ನಮ್ಮ ಕೊರಳಿಗೇನೇ ಈಡು ಕಟ್ಟಿರುತ್ತಾರೆ. ಆವಾಗ ಕನ್ನಡಿಗರು ಅವರ ಒಂದು ನೆಲೆಯಲ್ಲಿ ಉಳಿಯಬೇಕಾಗುತ್ತದೆ. ನಾವು ಕರ್ನಾಟಕದವರು, ಕನ್ನಡಿಗರು ಎಂದು ಹೇಳಬೇಕಾದರೆ, ಈವೊತ್ತು ಕನ್ನಡದ ಅಭಿಮಾನ ಬೆಳೆಯಬೇಕಾದರೆ ಈ ಕನ್ನಡವನ್ನು ಬೆಳೆಸಬೇಕು ಜೊತೆಗೆ ಕನ್ನಡ ಸಾಹಿತ್ಯವನ್ನೂ ಸಹ ಬೆಳೆಸಬೇಕು. ಈ ಒಂದು ಹಿನ್ನೆಲೆಯಲ್ಲಿ ಕವಿ ಪುಟ್ಟಪ್ಪನವರು ಕನ್ನಡದ ಬಗ್ಗೆ ಏನು ಒಂದು ಕವಿತೆ ಹೇಳಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈರೀತಿ ಇದೆ.—

"ರಾಜ ನುಡಿಯೆಂದೊಂದು, ದೇವನುಡಿಯೊಂದೊಂದು,
ರಾಷ್ಟ್ರ ನುಡಿಯೆಂದೊಂದೆಂ ಹತ್ತಿ ಜಗ್ಗಿ,
ಸಿರಿಸಿಟಲು ಸಿಟಿಲೆಂದು ಮುದಿಮೂಳೆ,
ಮುರಿಯುತಿದೆ, ಕನ್ನಡಮ್ಮನ ಬೆನ್ನುಬಳುಕಿ ಬಗ್ಗಿ"

ಕೆಲವು ಜನರ ಬಾಯಿಯಲ್ಲಿ ವ್ಯಕ್ತವಾದುದನ್ನು ಹೇಳುತ್ತೇನೆ. ಪ್ರತಿನಿತ್ಯವೂ ನಾವು ಈ ಒಂದು ವಿಷಯವನ್ನು ಕೇಳುತ್ತಿದ್ದೇವೆ, ಅದೇನೆಂದರೆ ಈವೊತ್ತು ನಮ್ಮ ಕನ್ನಡ ಸಂಸ್ಕೃತಿಗೆ ಇಟ್ಟಿರತಕ್ಕಂಥಾ ಹಣ ಸಾಲದು, ಇದನ್ನು ಇನ್ನೂ ಹೆಚ್ಚಿಸಬೇಕಾಗಿದೆ ಮತ್ತು ಆಡಳಿತ ಭಾಷೆ ಕನ್ನಡವೇ ಆಗಬೇಕು ಎಂದು ಇದು ಹಂತ ಹಂತವಾಗಿ ಬರುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ೧೯೬೭ನೇ ಇಸವಿಯಲ್ಲಿ ಮಹಾಜನ್ ವರದಿ ಬಗ್ಗೆ ಇಲ್ಲಿ ಚರ್ಚೆಗೆ ಬಂದಾಗ ಇದನ್ನು ಒಪ್ಪಿಕೊಳ್ಳಿ ಎಂದು ಹೇಳಿದರು. ಅದರಂತೆ ಈ ಸದನ ಒಪ್ಪಿಕೊಂಡಿತು. ಇದರ ಬಗ್ಗೆ ಆವಾಗ ಅವರು ಒಳ್ಳೆಯ ಹೇಳಿಕೆಯನ್ನೂ ಸಹ ಕೊಟ್ಟಿದ್ದಾರೆ. ಇತ್ತೀಚೆಗೆ ಬೆಳಗಾಂ ಬಗ್ಗೆ ಮಹಾರಾಷ್ಟ್ರ ಜನತಾ ನಾಯಕರು ಏನು ಹೇಳಿದ್ದಾರೆ ಅದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿದ್ದಾರೆ. ಮಹಾರಾಷ್ಟ್ರ ನಾಯಕರು ಪುಣೆಯಲ್ಲಿ ಈ ಬೆಳಗಾಂ ಬಗ್ಗೆ ಏನು ಹೇಳಿದ್ದಾನೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.—

ಗಡಿ ಪ್ರಶ್ನೆ : ಮಹಾರಾಷ್ಟ್ರ, ಜನತಾ ನಾಯಕರ ಒತ್ತಾಯ

"ಕಳೆದ ೨೫ ವರ್ಷಗಳಿಂದ ನನೆಗುದಿ ಬಿದ್ದಿರುವ ಮಹಾರಾಷ್ಟ್ರ-ಕರ್ನಾಟಕ ಗಡಿ ಪ್ರಶ್ನೆ ನಿವಾರಿಸಲು ಪಂಜಾಬ್ ಮಾದರಿ ಸೂತ್ರ ಅಳವಡಿಸಬೇಕು ಎಂದು ಮಹಾರಾಷ್ಟ್ರ ಜನತಾ ಪಕ್ಷದ ನಾಯಕರು ಒತ್ತಾಯ ಪಡಿಸಿದ್ದಾರೆ.

ಜನತಾ ಪಕ್ಷದ ಹಿರಿಯ ನಾಯಕರಾದ ಎಸ್.ಎಂ.ಜೋಷಿ, ಮತ್ತು ಎನ್.ಜಿ ಗೋರೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ಗಡಿ ಪ್ರಶ್ನೆ ಕೂಡಲೇ ಪರಿಹರಿಸದಿದ್ದರೆ ಕರ್ನಾಟಕದ ಗಡಿ ಪ್ರದೇಶದಲ್ಲಿರುವ ಮರಾಠಿ ಭಾಷಿಕ ಯುವಕರು ಈ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಆಗ್ರಹಿಸಿ ಆಂದೋಲನ ಮಾಡುತ್ತಾರೆ ಎಂದು ಅವರು ತಿಳಿಸಿದರು",

ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಕೊಟ್ಟಂಥಾ ಹೇಳಿಕೆಗೆ ಪ್ರತಿಯಾಗಿ ಶ್ರೀ ಎಂ.ಜಿ. ಗೋರೆಯವರು ಇದರ ವಿರುದ್ಧವಾಗಿ ಸೂಚಿಸಿದ್ದಾರೆ. ಆದರೂ ಸಹ ನಮ್ಮ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಬಹಳ ಗಟ್ಟಿಯಾಗಿ ನಿಂತಿದ್ದಾರೆ, ಬಹಳ ಸಂತೋಷ ತಮಗೆ ಹೇಳಬೇಕಾದರೆ ಈ ಮಹಾಜನ ವರದಿ ಬೇಕು ಎಂದು ಯಾರೂ ಹೇಳಲಿಲ್ಲ, ಮೊದಲು ಶುರು ಮಾಡಿದ್ದು ಮಹಾರಾಷ್ಟ್ರದವರೇ, ಅವರು ಇದರ ಬಗ್ಗೆ ಏಕ ಸಮಿತಿ ಆಗಬೇಕು ಎಂದು ಕೇಳಿದ್ದು ಅವರೇ, ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದು ಅವರೇ, ಕೊನೆಗೆ ಅದನ್ನು ಒಪ್ಪಿಕೊಂಡಾದಮೇಲೆ ನಾವು ಅದನ್ನು ಒಪ್ಪುವುದಿಲ್ಲ ಎಂದರೆ ಆ ಸಮಿತಿ ಮಾಡಿದ್ದು ಏತಕ್ಕೆ ? ಅದನ್ನು ಒಪ್ಪುವುದಿಲ್ಲ ಅಂತ ಹೇಳುವುದು ಅದು ಸರಿಯೂ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಒಂದು ಬಿಗಿಯಾದ ನಿಲುವನ್ನು ತೆಗೆದುಕೊಂಡಿರುವುದಕ್ಕೆ ನಾನು ಸಂತೋಷ ಪಡುತ್ತೇನೆ.

ಇನ್ನು ಕನ್ನಡ ಸಾಹಿತ್ಯದ ಬಗ್ಗೆ ಕನ್ನಡ ಬೆಳೆಸುವ ಬಗ್ಗೆ ನಾವು ಹೆಚ್ಚಿನ ಕೆಲಸ ಮಾಡಬೇಕಾಗಿದೆ. ಕನ್ನಡ ಆಡಳಿತ ಭಾಷೆಯಾಗಿ ಬರುವುದಕ್ಕೆ ಏನೇನು ಸಾಧ್ಯವೋ ಅಷ್ಟೇಲ್ಲಾ ಮಾಡಬೇಕಾಗಿದೆ. ಈ ಬಗ್ಗೆ ಅಧಿಕಾರಿಗಳು ಸರಿಯಾಗಿ ಮನಸ್ಸು ಮಾಡಬೇಕು. ಈವೊತ್ತು ವಿಧಾನಸಭೆಯಲ್ಲಾಗಲಿ ಅಥವಾ ವಿಧಾನ ಸೌಧದ ಎಲ್ಲ ಆಫೀಸಿನಲಾಗಲಿ ಎಲ್ಲವನ್ನೂ ಕನ್ನಡದಲ್ಲಿಯೇ ವ್ಯವಹಾರ ಮಾಡುವಂತೆ ಮಾಡ ಬೇಕು. ಎಲ್ಲಾ ಕಛೇರಿಯಲ್ಲೂ ಎಲ್ಲಾ, ಆದೇಶಗಳೂ ಕನ್ನಡದಲ್ಲೇ ಬರುವಂತೆ ಮಾನ್ಯ ಮಂತ್ರಿಗಳು ಮನಸ್ಸು ಮಾಡಬೇಕು. ಅರ್ಧ ಇಂಗ್ಲಿಷ್, ಅರ್ಧ ಕನ್ನಡ, ಅಥವಾ ಅರ್ಧ ಕನ್ನಡ ಅರ್ಧ ಇಂಗ್ಲಿಷ್ ನಲ್ಲಿ ಇರುವಂತೆ ಆಗಬಾರದು. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗುವುದಕ್ಕೆ ಸಂಪೂರ್ಣವಾಗಿ ಎಲ್ಲ ವ್ಯವಹಾರಗಳೂ ಕನ್ನಡದಲ್ಲೇ ಆಗುವ ಹಾಗೆ ತೋರಿಸಲು ನಮ್ಮ ಕನ್ನಡಕ್ಕೆ ಎಷ್ಟು ಶಕ್ತಿ ಇದೆ ಎನ್ನುವುದನ್ನು ತೋರಿಸುವ ಹಾಗೆ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಬೆಂಗಳೂರಿನಲ್ಲಿ ಅನೇಕ ಕೇಂದ್ರ ಸರ್ಕಾರದ ಕಾರ್ಖಾನೆಗಳು ಇವೆ, ಹೆಚ್.ಎಂ.ಟಿ., ಹೆಚ್.ಎ.ಎಲ್ ಮುಂತಾದವು ಇದೆ. ಇವಕ್ಕೆ ನಮ್ಮ ಕರ್ನಾಟಕದವರ ಪ್ರಮುಖ ಹೆಸರುಗಳಾದ ವಿಶ್ವೇಶ್ವರಯ್ಯ, ಟಿಪ್ಪು ಸುಲ್ತಾನ್ ಇಂಥಾವರ ಹೆಸರುಗಳನ್ನಿಡಬೇಕೆಂದು ಹೇಳುತ್ತೇನೆ. ಅದು ಬಿಟ್ಟು ಯಾವುದೋ ಪರದೇಶೀಯರ ಹೆಸರನ್ನು ಇಡುವುದು ಸರಿಯಾದುದಲ್ಲ. ಭಾಷಾವಾರು ರಾಜ್ಯವಾದಮೇಲೆ, ಅದರಲ್ಲೂ ಕರ್ನಾಟಕ ಎಂದು ಆದಮೇಲೆ ನಮ್ಮ ಶಕ್ತಿಯನ್ನು ನಾವು ತೋರಿಸ ಬೇಕು. ಆಂಧ್ರದಲ್ಲಿ. ತಮಿಳುನಾಡಿನಲ್ಲಿ, ಕೇರಳದಲ್ಲಿ ಯಾವ್ಯಾವ ರೀತಿಯೂ ಅವರವರ ಭಾಷೆಗೆ ಉತ್ತೇಜನ ಕೊಟ್ಟು ಯಾವರೀತಿ ಬೆಳೆಸಿದ್ದಾರೋ ಅದೇರೀತಿಯಾಗಿ ನಮ್ಮ ಕರ್ನಾಟಕದಲ್ಲಿ ಕನ್ನಡವನ್ನು ಬೆಳೆಸುವಂತೆ ತಾವು ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡದೇಹೋದರೆ ಇನ್ನು ೧೫–೨೦ ವರ್ಷದಲ್ಲಿ ಏನಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ತಾವು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಲೆಯ ವಿಚಾರವಾಗಿ ಹೇಳುವುದಾದರೆ ಅದರಲ್ಲೂ ಯಕ್ಷಗಾನ ಕಲಾವಿದರಿಗೆ ಏನು ಸ್ವಲ್ಪ ಧನಸಹಾಯವನ್ನು ಕೊಡುತ್ತಿದ್ದೀರಿ ಬಹಳ ಸಂತೋಷ. ಈ ಬಗ್ಗೆ ಒಂದು ವಿಚಾರ ಏನೆಂದರೆ ಯಾರು ಇದರಲ್ಲಿ ೬೦ ವರ್ಷವಾಗಿದ್ದಾರೋ, ಯಾರು ಬಹಳ ಸೇವೆ ಮಾಡಿ ವಯಸ್ಸಾಗಿದ್ದಾರೋ ಅವರನ್ನು ಕಂಡುಹಿಡಿದು ಇವರಿಗೆ ಕೊಡಬೇಕು. ಸಣ್ಣ ವಯಸ್ಸಿನವರಿಗೆ ಏನು ಕೊಡುತ್ತೀರೋ ಹಾಗೆಯೇ ೬೦ ವರ್ಷವಾಗಿರುವವನ್ನೂ ಸಹ ನೋಡಿಕೊಳ್ಳಬೇಕು.

ಇನ್ನು ಈ ಸಲ ಕನ್ನಡ ವಿಶ್ವ ಸಮ್ಮೇಳನ ಮಾಡುತ್ತಾ ಇರುವುದು ಬಹಳ ಸಂತೋಷ. ಕನ್ನಡದಲ್ಲಿ ಇಂಥಾ ಒಂದು ಸಮ್ಮೇಳನ ಆಗಬೇಕು. ತಮಿಳ್‌ನಾಡಿನಲ್ಲಿ ಹಿಂದೆ ಈ ತರಹ ಒಂದು ಸಮ್ಮೇಳನ ನಡೆದಿದ್ದರಿಂದಲೇನೇ ಆ ಭಾಷೆ ಬಹಳ ಮುಂದಕ್ಕೆ ಬಂತು. ಇಗರಲ್ಲಿ ಅಲ್ಪಸಂಖ್ಯಾತರಿಗೆ, ಹಾಗೂ ಪರಿಶಿಷ್ಟ ವರ್ಗದವರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು ಎಂದು ಹೇಳುತ್ತೇನೆ,

ಇನ್ನು ಸಾಹಿತಿಗಳಿಗೆ ಉಚಿತ ವೈದ್ಯಕೀಯ ನೆರವನ್ನು ಕೊಟ್ಟಿರುವುದು ಬಹಳ ಸಂತೋಷ. ಆದರೆ ಇದರಲ್ಲಿ ಆದಾಯ ೧೨ ಸಾವಿರ ರೂಪಾಯಿ ಇರಬೇಕು ಅಂತ ಒಂದು ಮಿತಿ ಹಾಕಿದ್ದೀರಿ. ಅದಕ್ಕಿಂತ ಮೇಲ್ಪಟ್ಟಿದ್ದವರಿಗೆ ಈ ಉಚಿತ ನೆರವು ಇಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಈ ೧೨ ಸಾವಿರ ರೂಪಾಯಿ ಏನು ಇದೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಇದಕ್ಕಿಂತಲೂ ಜಾಸ್ತಿ ಬರುತ್ತದೆ. ಆದುದರಿಂದ ಈ ಒಂದು ಮಿತಿಯನ್ನು ಬಿಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ಯಕ್ಷಗಾನದಲ್ಲಿ ಕ್ರಿಶ್ಚಿಯನ್ ಬಾಬು ಅಂತ ನಮ್ಮ ಕಡೆ ಇದ್ದನು. ಅವನು ಬಬ್ರುವಾಹನ, ರಾವಣನ ಪಾತ್ರದಲ್ಲಿ ಬಹಳ ಹೆಸರುವಾಸಿಯಾಗಿದ್ದನು. ಅವನಿಂದಲೇ ಈ ಯಕ್ಷಗಾನ ಮೇಲ್ಮಟ್ಟಕ್ಕೆ ಬಂತು. ಅವನು ೨-೩ ತಿಂಗಳ ಕೆಳಗೆ ಸತ್ತು ಹೋದವನು ಅವನ ಸಂಸಾರಕ್ಕೆ ಬಹಳ ತೊಂದರೆಯಾಗಿದೆ, ಅಂಥಾವರನ್ನು ಕಂಡುಹಿಡಿದು ಅವರಿಗೆ ಏನಾದರೂ ಪರಿಹಾರ ಕೊಟ್ಟರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಹಾಗೆಯೇ ಕವಿ ಮುದ್ದಣ್ಣ ಅಂತ ಇದ್ದರು, ಹೆಸರಾಂತ ಕನ್ನಡ ಕವಿ ಅವರು ೨ ಲಕ್ಷ ರೂಪಾಯಿ ನಿಧಿಯನ್ನೂ ಸಹ ಮಾಡಿದ್ದರು. ಅನೇಕ ವರ್ಷ ಅವರು ನಮ್ಮ ಕನ್ನಡಕ್ಕಾಗಿ ದುಡಿದಿದ್ದಾರೆ ಹಾಗೆಯೇ ಮಂಜೇಶ್ವರ ಕವಿ ಅನ್ನುವವರು ಇದ್ದರು, ಕಾಸರಗೋಡು ಕೇರಳಕ್ಕೆ ಹೋಗದೇ ಇದ್ದಿದ್ದರೆ ಅವರು ನಮ್ಮವರೇ ಆಗುತ್ತಿದ್ದರು ಅವರಿಗೆ ಒಂದು ಸ್ಮಾರಕವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಲಾ ಕ್ಷೇತ್ರ ಅಂದರೆ ಈ ಯಕ್ಷಗಾನ ಹೆಸರುವಾಸಿ ಪಡೆದದ್ದು ಮಂಗಳೂರು ಮತ್ತು ಬೈಂದೂರಿನಲ್ಲಿ ಆದುದದರಿಂದ ಯಾವುದಾದರೂ ಈ ಒಂದು ಜಾಗದಲ್ಲಿ ಕಲಾಕ್ಷೇತ್ರವನ್ನು ಮಾಡಿ ಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚು ಧನಸಹಾಯ ಮಾಡಬೇಕು. ಮತ್ತು ೧೯ ಜಿಲ್ಲೆಗಳಲ್ಲೂ ಸಹ ಇಂತಹ ಸಭೆ ಸಮ್ಮೇಳನವನ್ನು ನಡೆಸಿ ಕನ್ನಡ ಸಾಹಿತ್ಯವನ್ನು ಒಳ್ಳೆಯ ರೀತಿಯಲ್ಲಿ ಪ್ರತಿಬಿಂಬಿಸುವ ಹಾಗೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಕೇಂದ್ರದವರು ಏನು ಟೋಕನ್ ಗ್ರಾಂಟ್ ತರಹ ಇದಕ್ಕೆ ಕೊಡುತ್ತಾರೆ ಅದು ಸಾಕಾಗುವುದಿಲ್ಲ. ಅವರು ಎಲ್ಲಾ ಸಭೆಗಳನ್ನು, ಎಲ್ಲಾ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಹಾಗಾದರೆ ೧೯ ಜಿಲ್ಲೆಗಳಿಗೂ ಕೊಡುವುದು ಒಳ್ಳೆಯದು. ಕನ್ನಡ ಸಾಹಿತ್ಯ ಪರಿಷತ್ತಿಗೆ ಬೇಕಾದಷ್ಟು ಹಣವನ್ನು ಕೊಡುತ್ತಿದ್ದೀರಿ. ಈಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಯಾವುದೋ ಗುಂಪುಗಾರಿಕೆ ಇದೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಸರ್ಕಾರ ಅಲ್ಲಿ ಪ್ರವೇಶ ಮಾಡಬೇಕು. ಏಕೆಂದರೆ ಸರ್ಕಾರದಿಂದ ಬೇಕಾದಷ್ಟು ಹಣ ಹೋಗುತ್ತಿದೆ. ಸರ್ಕಾರ ಮಧ್ಯ ಪ್ರವೇಶ ಮಾಡಿ ಅಲ್ಲಿ ಸರಿಯಾಗಿ ನಡೆಯುವ ಹಾಗೆ ನೋಡಬೇಕು.

ಇನ್ನು ಗ್ರಂಥಾಲಯದ ಬಗ್ಗೆ ಹೇಳುವುದಾದರೆ ಮೊದಲು ಗ್ರಂಥಾಲಯದವರು ೩೦೦ ಪುಸ್ತಕಗಳನ್ನು ತೆಗೆದುಕೊಳ್ಳುತ್ತಾ ಇದ್ದರು ಈಗ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಇವತ್ತು ಲೇಖಕರು ಬರೆದಂಥ ಪುಸ್ತಕಗಳ ಮುನ್ನೂರು ಪ್ರತಿಗಳನ್ನು ತೆಗೆದುಕೊಂಡರೆ ಸುಲಭವಾಗುತ್ತದೆ. ಅದನ್ನು ಬಿಟ್ಟು ಇವತ್ತು ಕುರ್ಚಿ, ಮೇಜುಗಳನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಿದೆ, ಇದು ಸರಿಯಲ್ಲ. ಕನ್ನಡ ಬೆಳೆಯಬೇಕು, ಸಾಹಿತ್ಯ ಬೆಳೆಯಬೇಕು ಅಂದರೆ

"ಮೊಲೆವಾಲಿನೊಡಗೂಡಿ ಬಂದನುಡಿ ತಾಯಿನುಡಿ
ಕೊಲೆಗೈಯಿಸಿದಮ್ಮನನ ಕೊಲಿಸಿದಂತೆ
ತಾಯ್ ಮುತ್ತು ಕೊಡುವಂದು ನಿಮ್ಮ ಕೆನ್ನೆಯ
ಮೇಲೆ ಅದು ಪೋಣಿಸಿದ ಮುತ್ತಿನಂತೆ"

ಎಂದು ಕುವೆಂಪುರವರು ಹೇಳಿದ್ದಾರೆ. ಮೊಲೆವಾಲಿನ ಜೊತೆಯಲ್ಲಿ ಕೂಡಿಬಂದಂಥ ಕನ್ನಡವನ್ನು ಬೆಳೆಸಬೇಕು, ಸಾಹಿತ್ಯವನ್ನು ಬೆಳೆಸಬೇಕು. ನನಗೆ ಬಹಳ ಸಂತೋಷ, ಮಾನ್ಯ ಜೀವರಾಜ ಆಳ್ವರವರು ಈ ಬಗ್ಗೆ ಬಹಳ ಮನಸ್ಸು ಮಾಡಿದ್ದಾರೆ. ಅವರು ಚುರುಕಾಗಿ ಸಂತ್ಸಾಡುತ್ತಾ ಇದ್ದಾರೆ. ಕನ್ನಡ

ಸಂಸ್ಕೃತಿಯ ಬಗ್ಗೆ ಒಳ್ಳೆಯ ಕೆಲಸ ಮಾಡಬೇಕು ಎಂದು ಅವರಿಗೆ ಹುಮ್ಮಸ್ಸು ಉಂಟು ಆದರೆ ಇದಕ್ಕೆ ಇಟ್ಟಿರತಕ್ಕ ಹಣ ಏನೇನೂ ಸಾಲದು. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಕನ್ನಡದ ಬಗ್ಗೆ ಅಭಿಮಾನವಿದ್ದವರು. ಈ ಬಗ್ಗೆ ಬೇಕಾದಷ್ಟು ಹೇಳಿಕೆಗಳನ್ನು ಅನೇಕಬಾರಿ ಕೊಟ್ಟವರು. ಕನ್ನಡವನ್ನು ಮೇಲೆತ್ತಿ, ಕನ್ನಡ ಬಾವುಟವನ್ನು ಏರಿಸಲಿಕ್ಕೆ ಸಿದ್ಧವಾಗುತ್ತಿದ್ದಾರೆ, ಮಹಾಜನ್ ವರದಿಯ ವಿವಾದದ ಬಗ್ಗೆ ಸರ್ವ ಪಕ್ಷಗಳ ಸಮಿತಿಯನ್ನು ಕೇಂದ್ರಕ್ಕೆ ಕಳಿಸುವಂಥ ಸಂದರ್ಭ ಬಂದರೆ ಅದನ್ನು ಮಾಡುವುದು ಒಳ್ಳೆಯದು. ನಮಗೆ ಕಾಸರಗೋಡು ಬಹಳ ಪ್ರಾಮುಖ್ಯವಾದುದು. ಮಹಾಜನ್ ವರದಿಯಲ್ಲಿ ಅದರ ವಿಷಯ ಬಂದಿತ್ತು, ಅಲ್ಲಿಯ ಜನ ೨೦ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಮಹಾಜನ್ ವರದಿ ಪಾಸ್ ಆದರೆ ಬೆಳಗಾವಿ, ಕಾಸರಗೋಡು ಬರುತ್ತದೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ವಿದ್ಯುಚ್ಛಕ್ತಿಯ ಬಗ್ಗೆ ಮಾನ್ಯ ಕೃಷ್ಣನ್‌ರವರು ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಆಗಾಗ ಅನೇಕಬಾರಿ ವಿದ್ಯುತ್ ಹೋಗಿಬಿಡುತ್ತದೆ. ವೋಲ್ಟೇಜ್ ಕಡಿಮೆ ಇದೆ ಎಂದು ಹೇಳಿ ಉಲ್ಲಾಳ ಕ್ಷೇತ್ರದಲ್ಲಿ ವಿದ್ಯುತ್ ಹೋಗುವುದನ್ನು ಪ್ರತಿದಿನವೂ ಕಾಣುತ್ತಿದ್ದೇವೆ. ಎರಡು ಗಂಟೆಗೊಮ್ಮೆ, ಒಂದು ಗಂಟೆಗೊಮ್ಮೆ, ಅರ್ಧಗಂಟೆಗೊಮ್ಮೆ ವಿದ್ಯುತ್ ಹೋಗುತ್ತದೆ, ರಾತ್ರಿಹೊತ್ತೂ ಕೂಡ ವಿದ್ಯುತ್ ಹೋಗುತ್ತದೆ. ಆದ್ದರಿಂದ ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಮತ್ತೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡಬೇಕು ಎಂದು ಅನೇಕರು ಕೇಳುತ್ತಾ ಇದ್ದಾರೆ, ಕೆಲವರಿಗೆ ಸಿಗುತ್ತದೆ, ಕೆಲವರಿಗೆ ಸಿಕ್ಕುವುದಿಲ್ಲ, ಎಲ್ಲರಿಗೂ ಸಿಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತೆ ಉಲ್ಲಾಳ ಕ್ಷೇತ್ರದಲ್ಲಿ ಬೇರಳಕಟ್ಟೆಯಲ್ಲಿ ಸಬ್‌ಸ್ಟೇಷನ್ ಮಾಡಬೇಕು ಎಂದು ಹಿಂದಿನವರು ಕಂಡುಕೊಂಡಂಥ ವಿಚಾರ. ಅದು ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲ. ಅದಕ್ಕೆ ಮಾನ್ಯ ಮಂತ್ರಿಗಳು ಬೇರಳಕಟ್ಟೆಯಲ್ಲಿ ಜಾಗ ತೆಗೆದು ಒಂದು ಸಬ್‌ಸ್ಟೇಷನ್ ಮಾಡಿದರೆ ಬೇರಳಕಟ್ಟೆಯವರಿಗೆ ಅನುಕೂಲವಾಗುತ್ತದೆ

ಇನ್ನು ಗಣಿ ಮತ್ತು ಭೂವಿಜ್ಞಾನದ ಬಗ್ಗೆ ಹೇಳುವುದಾದರೆ ಭೂಗರ್ಭದಲ್ಲಿ ಸಿಗತಕ್ಕಂಥ ಕಲ್ಲುಗಳನ್ನು ಮಧ್ಯವರ್ತಿಗಳು, ದಲ್ಲಾಳಿಗಳು ಲೈಸನ್ಸ್ ಪಡೆದುಕೊಂಡು ಕಡಿಯುತ್ತಾ ಇದ್ದಾರೆ. ಭೂಗರ್ಭದಲ್ಲಿ ಸಿಗತಕ್ಕ ಕಲ್ಲುಗಳನ್ನು ಹಣವಂತರು, ದಲ್ಲಾಳಿಗಳು ಪರ್ಮಿಷನ ತೆಗೆದುಕೊಂಡು ಕಲ್ಲುಗಳನ್ನು ಕಡಿಯುತ್ತಿದ್ದಾರೆ. ಇದರಿಂದ ಬಡವರಿಗೆ ಅನುಕೂಲವಾಗುತ್ತಿಲ್ಲ. ಕಲ್ಲು ಕಡಿಯತಕ್ಕ ಬಡವರ, ಕೆಲಸಗಾರರ ಸಹಕಾರ ಸಂಘ ಮಾಡಿ ಈ ಕೂಲಿಗಾರರಿಗೆ ಅದರ ಲಾಭ ಸಿಗತಕ್ಕ ವ್ಯವಸ್ಥೆಯಾದರೆ ಒಳ್ಳೆಯದು. ದಲ್ಲಾಳಿಗಳು ಲೈಸನ್ಸ್ ಪಡೆದುಕೊಂಡು, ಲಾಭ ಮಾಡಿಕೊಂಡು ಬಡವರನ್ನು ಕಷ್ಟದಲ್ಲಿ ಹಾಕಿದ್ದಾರೆ. ಆದ್ದರಿಂದ ಕೂಲಿಗಾರರಿಗೆ ಅದರ ಲಾಭ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಬೆಲ್ ಮಾಡುತಿದ್ದಾರೆ. ಕನ್ನಡದ ಬಗ್ಗೆ, ಸಂಸ್ಕೃತಿಯ ಬಗ್ಗೆ ಇನ್ನೂ ಹೇಳಬೇಕಾದ ಅಭಿಪ್ರಾಯಗಳಿದ್ದರೂ ಕೂಡ ಸಮಯಾವಕಾಶವಿಲ್ಲದೇ ಇರುವುದರಿಂದ, ಕನ್ನಡ ಸಾಹಿತ್ಯ ಉತ್ತುಂಗ ಶಿಖರಕ್ಕೆ ಏರುವ ಹಾಗೆ, ಆಡಳಿತ ಭಾಷೆಯಾಗಿ ಕನ್ನಡ ಆದಷ್ಟು ಬೇಗ ಎಲ್ಲಾ ಹಂತಗಳಲ್ಲಿ ಬರುವ ಹಾಗೆ ಕಾಯಾ, ವಾಚಾ, ಮನಸಾ ಎಲ್ಲರೂ ಕೆಲಸ ಮಾಡಬೇಕು. ಆ ರೀತಿ ಮಂತ್ರಿಗಳು ವ್ಯವಸ್ಥೆ ಮಾಡಿ ನಮ್ಮ ಕನ್ನಡ ನಾಡಿಗೆ ಒಂದು ಒಳ್ಳೆಯದನ್ನು ಮಾಡಿ ತೋರಿಸಲಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ವಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ಇವತ್ತು ಚರ್ಚೆಗೆ ಇಟ್ಟಂಥ ಎಲ್ಲಾ ಬೇಡಿಕೆಗಳು, ಆ ಇಲಾಖೆಗಳ ಕಾರ್ಯಕ್ರಮಗಳು ನನ್ನ ದೃಷ್ಟಿಯಿಂದ ಸಮರ್ಪಕವಾಗಿಲ್ಲ ಎನ್ನುವ ಕಾರಣದಿಂದ ನಾನು ವಿರೋಧಿಸುತ್ತೇನೆ. ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಕನ್ನಡಕ್ಕೆ ಸರ್ವೋಚ್ಚ ಸ್ಥಾನ ನೀಡಬೇಕು ಕನ್ನಡಿಗರ ಹೃದಯ ಸಿಂಹಾಸನ ಅಲಂಕರಿಸಬೇಕು ಎನ್ನುವುದು ಎಲ್ಲರ ಅಭಿಲಾಷೆಯಾಗಿತ್ತು. ಆದರೆ ಕಾರಣಾಂತರದಿಂದ ಅದು ಆಗಿಲ್ಲ. ೧೯೬೨ನೇ ಇಸವಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ೧೯೬೦ನೇ ಇಸವಿಯಲ್ಲಿ ಉಪವಿಭಾಗಮಟ್ಟದಲ್ಲಿ ೧೯೬೨ನೇ ಇಸವಿಯಲ್ಲಿ ಜಿಲ್ಲಾ ಕಛೇರಿ ಮಟ್ಟದಲ್ಲಿ, ೧೯೬೪ನೇ ಇಸವಿಯಲ್ಲಿ ಕ್ರಿಮಿನಲ್ ನ್ಯಾಯಾಲಯ ಮಟ್ಟದಲ್ಲಿ ೧೯೬೬–೬೮ ರಲ್ಲಿ ಸಿವಿಲ್ ನ್ಯಾಯಾಲಯ ಮಟ್ಟದಲ್ಲಿ—ಹೀಗೆ ಎಲ್ಲಾ ಹಂತಗಳಲ್ಲಿ ಕನ್ನಡ ಆಡಳಿತಭಾಷೆ ಆಗಬೇಕು ಎಂದು ಸರ್ಕಾರ ಒಪ್ಪಿಕೊಂಡಿದ್ದರೂ ಸಹ ಇಷ್ಟರವರೆಗೆ ಅದು ಪೂರ್ತಿಯಾಗಿಲ್ಲ, ಅದು

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಗುವಂಥಾದ್ದು ಬಹಳ ಅಗತ್ಯವಿದೆ. ನಮ್ಮ ರಾಜ್ಯದಲ್ಲಿ ಭಾಷಾಂತರ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದು ಎರಡು ಇಲಾಖೆಗಳಿವೆ. ಈ ಎರಡು ಇಲಾಖೆಗಳು ಬೇರೆ ಬೇರೆ ಮಂತ್ರಿಗಳ ಕಾರ್ಯನಿರ್ವಹಣೆಯಲ್ಲಿವೆ ಎಂದು ನಾನು ತಿಳಿದಿದ್ದೇನೆ. ನನಗೆ ತಿಳಿದ ಹಾಗೆ, ಭಾಷಾಂತರ ಇಲಾಖೆಯಲ್ಲಿ ೧೯ ಇಲಾಖಾ ಕೈಪಿಡಿಗಳನ್ನು ತಯಾರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅದು ಸಮರ್ಪಕವಾಗಿಲ್ಲ ಎಂದು ಅದನ್ನು ಪ್ರಕಟಿಸಲೇ ಇಲ್ಲ. ಯಾವುದರಿಂದಲೇ ಆಗಲಿ ಕೆಲಸ ಆಗಬೇಕು. ಮಂದಗತಿಯಿಂದ ಅಥವಾ ಇಲಾಖೆಗಳ ಸವತಿಮಾತ್ಸರ್ಯದಿಂದ, ಸಾಮರಸ್ಯವಿಲ್ಲದೇ ಇರುವುದರಿಂದ ಕನ್ನಡದ ಅಭಿವೃದ್ಧಿ ಕುಂಠಿತವಾಗುವುದು ಸರಿಯಲ್ಲ, ಈ ಶೀತಲ ಸಮರ ಮುಗಿಯಬೇಕು. ಯಾವುದಾದರೂ ಒಂದು ಇಲಾಖೆಯಿಂದ ತಂದರೆ ಆಗುತ್ತದೆ. ಕನ್ನಡದ ಬಗ್ಗೆ ಕೆಲಸ ಮಾಡುವಂಥ ಇಲಾಖೆಗಳನ್ನು ಒಂದು ಇಲಾಖೆಯ ಕೆಳಗೆ ತರುವಂಥಾದ್ದು ಉತ್ತಮ. ಇನ್ನೊಂದು ವಿಷಯವೇನೆಂದರೆ, ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಕಡಿಮೆ ಖರ್ಚಿನಲ್ಲಿ ಕನ್ನಡಕ್ಕೆ ಪರಿವರ್ತಿಸಲು ರಾಮರಾವ್ ಎಂಬುವರಿಂದ ಪ್ರಯೋಗ ನಡೆದಿದೆ ಎಂದು ಕೇಳಿದ್ದೇನೆ. ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಕನ್ನಡ ಕಾವಲು ಸಮಿತಿ ಅದನ್ನು ಅನುಮೋದಿಸಿತ್ತು. ಈ ಒಂದು ವಿಚಾರವನ್ನು ಪತ್ರಿಕೆಯಲ್ಲಿ ಓದಿದ್ದು ನಿಜ. ಹಾಗಿದ್ದರೆ ಸುಲಭದಲ್ಲಿ ಪರಿವರ್ತನೆ ಮಾಡಬೇಕಾದ ಕೆಲಸವನ್ನು ಪುರಸ್ಕರಿಸುವ ಬದಲಿಗೆ ಹಾಲ್ಡಾ, ಗೋಡ್ರೇಜ್ ಯಂತ್ರಗಳನ್ನು ಖರೀದಿಸುವುದಕ್ಕೆ ಆರ್ಡರ್ ಆಗಿದೆಯೆಂದು ತಿಳಿದಿದ್ದೇನೆ. ಈ ಹೊಸ ಯಂತ್ರಗಳನ್ನು ಖರೀದಿಸುವುದಕ್ಕಿಂತ ಇಂಗ್ಲಿಷ್ ಯಂತ್ರಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡುವುದು ಉತ್ತಮವೆಂದು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ. ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸ್ನಾತಕೋತ್ತರ ಪದವೀಧರರು ಅನೇಕ ವರ್ಷಗಳಿಂದ ಇದ್ದಾರೆ. ನಾಲ್ಕೈದು ವರ್ಷಗಳಿಂದ ಅವರಿಗೆ ಸೇವಾ ಭದ್ರತೆ ಇಲ್ಲ. ಪ್ರತಿ ತಿಂಗಳೂ ನೇಮಕವಾಗುತ್ತಾರೆ. ಆದ್ದರಿಂದ ಇವರ ಕೆಲಸ ಖಾಯಂಗೊಳಿಸುವ ಅವಶ್ಯಕತೆ ಇದೆ. ನಾನು ಪತ್ರಿಕೆಯಲ್ಲಿ ಓದಿದ ನೆನಪು.

ಕನ್ನಡ ಎಂ. ಎ. ಪದವೀಧರರು ಇಡೀ ರಾಜ್ಯದಲ್ಲಿ ಅತ್ಯಂತ ಕಷ್ಟದಲ್ಲಿದ್ದಾರೆ. ಕನ್ನಡಕ್ಕಾಗಿ ಕೆಲಸಮಾಡುವ ಅಭಿಮಾನದಿಂದ ಸ್ನಾತಕೋತ್ತರ ಪದವಿಯನ್ನು ಪಡೆದಿರತಕ್ಕದ್ದು. ಸ್ನಾತಕೋತ್ತರ ಪದವೀಧರರು ಕಾಲೇಜು ಉಪನ್ಯಾಸಕರಾಗಿ ಸೇರಬೇಕು ಇಲ್ಲವೇ ಭಾಷಾಂತರ ಕಾರರಾಗಿ ಸೇರಬೇಕು. ಅವರಿಗೆ ಸೇವಾ ಭದ್ರತೆ ಇಲ್ಲದೇ ಹೋದರೆ ಸ್ನಾತಕೋತ್ತರ ಪದವಿಗೆ ಹೋಗುವವರೇ ಇಲ್ಲದ ಹಾಗೆ ಆಗುತ್ತದೆ, ಕನ್ನಡ ಅಭಿಮಾನ ತರುಣರಲ್ಲಿ ಕುಂಠಿತವಾಗುತ್ತದೆ. ಆದುದರಿಂದ ಆದಷ್ಟು ಬೇಗ ಇವರನ್ನು ಖಾಯಂಗೊಳಿಸುವ ಕಾರ್ಯ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ, ೧೯೮೦ ರಲ್ಲಿ ನಾರಾಯಣಸ್ವಾಮಿಯವರ ನೇತೃತ್ವದಲ್ಲಿ 'ಕನ್ನಡ ಭಾಷಾ ಸಮಿತಿ' ರಚನೆಯಾಯಿತು. ಆ ಸಮಿತಿ ೧೯೮೧ ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆ ವರದಿಯಲ್ಲಿ ಕೆಲವು ಶಿಫಾರಸ್ಸುಗಳನ್ನು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಈ ರೀತಿ ಇದೆ.

ಕನ್ನಡವನ್ನು ಎಲ್ಲಾ ಮಟ್ಟದಲ್ಲಿ ಜಾರಿಗೆ ತರಬೇಕು ಹಾಗೂ ಆಡಳಿತ ಶಬ್ದಕೋಶ, ಕಾರ್ಯಾಲಯ ಕೈಪಿಡಿಗಳನ್ನು ರಾಜ್ಯದ ಎಲ್ಲ ಕಚೇರಿಯ ಉದ್ಯೋಗಿಗಳಿಗೂ ಒದಗಿಸಬೇಕು. ಸಚಿವಾಲಯದಿಂದ ಹಿಡಿದು ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳಿಂದ ಹೊರಡಿಸಲಾಗುವ ಸರ್ಕಾರಿ ಆದೇಶಗಳೆಲ್ಲವೂ ಕನ್ನಡದಲ್ಲಿರಬೇಕು. ಕನ್ನಡದಲ್ಲಿ ಪತ್ರವ್ಯವಹಾರ ಮಾಡುವುದು ಟಿಪ್ಪಣಿ ಬರೆಯುವುದನ್ನು ಕಲಿಸಲು ಕನಿಷ್ಟ ಪಕ್ಷ ಒಂದು ವಾರ ಕಾಲ ತರಬೇತಿ ನೀಡಬೇಕು. ತಾಲ್ಲೂಕು ಮಟ್ಟದಿಂದ ಸಚಿವಾಲಯ ಮಟ್ಟದವರೆಗಿನ ಸರ್ಕಾರದ ಎಲ್ಲಾ ಇಲಾಖೆಯ ಕಚೇರಿಗಳಿಗೂ ಕನ್ನಡ ಬೆರಳಚ್ಚು ಯಂತ್ರಗಳನ್ನು ಕೂಡಲೇ ಸರಬರಾಜು ಮಾಡಬೇಕು. ತಾಲ್ಲೂಕು ಉಪವಿಭಾಗ ಹಾಗೂ ಅದಕ್ಕೆ ಮೇಲಿನ ಹಂತಗಳಲ್ಲಿ ಈಗಿರುವ ಇಂಗ್ಲೀಷ್ ಬೆರಳಚ್ಚುಗಾರರಿಗೆ ಕೂಡಲೇ ಕನ್ನಡ ಬೆರಳಚ್ಚು ಕಲಿಯುವಂತೆ ಆದೇಶ ನೀಡಬೇಕು. ಸರ್ಕಾರದ ವ್ಯವಹಾರ ಕನ್ನಡದಲ್ಲಿ ಯಶಸ್ವಿಯಾಗಿ ನಡೆಯಬೇಕಾದರೆ ಮೇಲಾಧಿಕಾರಿಗಳಿಂದ ಮೊದಲ್ಗೊಂಡು ಕೆಳಗಿನ ಎಲ್ಲ ಅಧಿಕಾರಿಗಳೂ ಕನ್ನಡ ಬಲ್ಲವರಿರಬೇಕು. ಕನ್ನಡ ಬಳಸುವಲ್ಲಿ ವಿಳಂಬ ಅಥವಾ ತಾತ್ಸಾರ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಕನ್ನಡ ಬಲ್ಲವರನ್ನೇ ರಾಜ್ಯದ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ಮಾಡಬೇಕು. ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕಚೇರಿ, ಉದ್ದಿಮೆ ಆಕಾಶವಾಣಿ ಮುಂತಾದ ಇಲಾಖೆಗಳಲ್ಲಿ ಕನ್ನಡ ಬಲ್ಲವರಿಗೇ ನೌಕರಿ ನೀಡುವಲ್ಲಿ ಆದ್ಯತೆ ನೀಡಬೇಕು. ಕೆಲವು ವಿಚಾರಗಳಲ್ಲಿಯಾದರೂ ಆದ್ಯತೆ ಕೊಟ್ಟು ಆದಷ್ಟು ಬೇಗ ಕನ್ನಡ ಜಾರಿಗೆ ಬರುವಂತೆ ಮಾಡಬೇಕು. ಕನ್ನಡದ ವಿಷಯವನ್ನು ಇಲ್ಲಿಗೆ ಮುಗಿಸಿ ಇನ್ನೂ ಪ್ರವಾಸೋದ್ಯಮದ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳು

ವುದಕ್ಕೆ ಇಚ್ಛೆಪಡುತ್ತೇನೆ, ಸಮಯಾವಕಾಶ ಹೆಚ್ಚಿಗೆ ಇಲ್ಲದ್ದರಿಂದ, ನನ್ನ ಕ್ಷೇತ್ರದ ಮಟ್ಟಿಗೆ ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ ಮರವಂತೆ ಪ್ರವಾಸೀ ಕೇಂದ್ರವಿದೆ, ಅದು ಸುಂದರ ನಿಸರ್ಗ ತಾಣವಾಗಿದೆ. ಅಲ್ಲಿ ಒಂದು ಕಡೆ ಸಮುದ್ರ ಇನ್ನೊಂದು ಕಡೆ ಕೊಲ್ಲೂರು ಹೊಳೆ ಇದೆ, ಇದರ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಹೋಗಿದೆ. ಕನ್ನಡಿಗರು ಚಲನ ಚಿತ್ರದಲ್ಲಿ ಇದರ ಚೆಂದವನ್ನು ನೋಡಿ ಆನಂದಿಸಿದ್ದಾರೆ. ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡಬೇಕೆಂದು ಸರ್ಕಾರದ ಇಚ್ಛೆಯಿದ್ದು, ಅನೇಕ ಮಂದಿ ಅಧಿಕಾರಿಗಳೂ ಸಹ ಬಂದು ಹೋದರು. ಅಲ್ಲಿ ಜಾಗ ಚೆನ್ನಾಗಿ ಇದೆ. ಅದನ್ನು ಅಭಿವೃದ್ಧಿ ಪಡಿಸುವ ಅಗತ್ಯವೂ ಕೂಡ ಇದೆ, ಮಲ್ಪೆಯಲ್ಲಿ ಪ್ರವಾಸಿ ಕೇಂದ್ರವಾಗುತ್ತಿದ್ದು, ಕಾರಣಾಂತರದಿಂದಾಗಿ ಎರಡು ವರ್ಷಗಳಿಂದ ಈ ಕೆಲಸ ಸ್ಥಗಿತಗೊಂಡಿದೆ. ಉಡುಪಿ, ಮಣಿಪಾಲದಲ್ಲಿ ಶೈಕ್ಷಣಿಕ ಕೇಂದ್ರ ಹಾಗೂ ಪ್ರಮುಖ ಕೈಗಾರಿಕಾ ಕೇಂದ್ರಗಳೂ ಕೂಡ ಇದೆ. ಮತ್ತು ಬ್ಯಾಂಕಿಂಗ್ ಉದ್ದೇಶಕ್ಕೆ ಬರುವಂತಹ ಜನರು ನಿಸರ್ಗ ಸುಂದರವಾದ ಮಲ್ಪೆಯನ್ನು ಸಂದರ್ಶಿಸುತ್ತಾರೆ. ಆದುದರಿಂದಾಗಿ, ಈ ಪ್ರವಾಸಿ ಕೇಂದ್ರವನ್ನು ಬೇಗ ಮುಗಿಸಿ ಅಭಿವೃದ್ಧಿ ಪಡಿಸುವಂತಾದ್ದು ಅಗತ್ಯವಿದೆ. ಇನ್ನು ಮಂಗಳೂರಿನಲ್ಲಿ ಮಂಗಳಾ ಕ್ರೀಡಾಂಗಣ ಇದ್ದು, ಅದಕ್ಕೆ ಸರ್ಕಾರದ ನೆರವು ಕೂಡ ಸಿಕ್ಕಿದೆ. ಆದರೆ ಅದನ್ನು ನಿರ್ವಹಣೆ ಮಾಡುವವರು ಯಾರು ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಮಂಗಳೂರಿನ ನಗರಸಭೆಯವರೇ ಅಥವಾ ಯುವಜನ ಸೇವಾ ಇಲಾಖೆಯವರೇ ಅನ್ನುವ ದ್ವಂದ್ವ ಪ್ರಾರಂಭವಾಗಿ ಅಲ್ಲಿ ದನಗಳ ನಾಯಿಗಳ ಆಡಂಬರವಾಗಿದೆ. ಈ ಕ್ರೀಡಾಂಗಣವನ್ನು ಯಾರು ನಿರ್ವಹಣೆ ಮಾಡಬೇಕೆನ್ನುವುದನ್ನು ನಿಗದಿ ಮಾಡಬೇಕು. ಇಲ್ಲದೇ ಹೋದರೆ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿದರೂ ಒಳ್ಳೆಯ ಕ್ರೀಡಾ ಕೇಂದ್ರವಾಗಿದ್ದರೂ ಸರಿಯಾಗಿ ನಿರ್ವಹಣೆಯಿಲ್ಲದೆ ಅದು ಹಾಳಾಗುವಂತಹ ಪರಿಸ್ಥಿತಿ ಬರುತ್ತದೆ ಅದರ ಪಕ್ಕದಲ್ಲೇ ಈಜುಕೊಳ ನಿರ್ಮಾಣದ ಕಾರ್ಯವು ಆರಂಭವಾಗಿ ಅರ್ಧದಲ್ಲೇ ನಿಂತು ಬಿಟ್ಟಿದೆ ಕಬ್ಬಿಣದ ಕಂಬಿಗಳಿಗೆ ತುಕ್ಕು ಹಿಡಿಯುವಂತಹ ಪರಿಸ್ಥಿತಿ ಬಂದಿದೆ. ಇದರ ಕೆಲಸ ಆಗಬೇಕು. ಗಣಿ ಮತ್ತು ಭೂ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಕೆಲವು ದಿವಸಗಳ ಹಿಂದೆ ನಾನು ನಿಯಮ ೩೩೪ರ ಪ್ರಕಾರ ಒಂದು ಪ್ರಶ್ನೆಯನ್ನು ಎತ್ತಿದ್ದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಜನ ಕೆಂಪು ಕಲ್ಲು ಕಡಿಯುವುದರ ಮೂಲಕ ಲೈಸನ್ಸ್ ಇಲ್ಲದೇ ಲಕ್ಷಾಂತರ ರೂಪಾಯಿಯನ್ನು ಕಬಳಿಸುತ್ತಿದ್ದಾರೆನ್ನುವಂತಹ ಮಾತು ಬಂದಿದೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಒಂದು ಕಡೆ ಲೈಸನ್ಸ್ ಕೊಡುತ್ತಿದೆ. ಇನ್ನೊಂದು ಕಡೆ ಒಂದು ಸೀಮಿತ ಮಟ್ಟದವರೆಗೆ ತಹಸೀಲ್ದಾರರಿಗೆ ಲೈಸನ್ಸ್ ಕೊಡುವಂತಹ ಅಧಿಕಾರವಿದೆ ಯಾವುದಾದರೂ ಒಂದು ಇಲಾಖೆಯಲ್ಲಿ ಈ ಅಧಿಕಾರವನ್ನು ಇಟ್ಟುಕೊಳ್ಳಬೇಕು ಇಲ್ಲವೇ ಹತ್ತಿರ ವಿರುವಂತಹ ರೆವಿನ್ಯೂ ಇಲಾಖೆಗೆ ಕೊಟ್ಟರೂ ಆಗಬಹುದು. ಕಂಟ್ರಾಕ್ಟರ್ ಬಗ್ಗೆ ನಾನು ಹೇಳುವುದಿಲ್ಲ. ಯಾರು ದುರ್ಬಲ ವರ್ಗದವರು ಹಾಗೂ ಹರಿಜನರು ಕಲ್ಲು ಕಡಿಯುತ್ತಿದ್ದಾರೆ ಅಂತಹವರನ್ನು ಗುರುತಿಸಿ ಅವರಿಗೆ ಈ ಲೈಸೆನ್ಸ್ ಕೊಡುವಂತಹ ಕೆಲಸ ಆಗಬೇಕು, ಅವರದೇ ಆದ ಲೇಬರರ್ಸ್ ಕೋ ಆಪರೇಟಿವ್ ಸೊಸೈಟಿ ಮಾಡಿದರೂ ಅಡ್ಡಿಯಿಲ್ಲ ಇಲ್ಲವೇ ನೀವೇ ಲೈಸೆನ್ಸ್ ಕೊಟ್ಟರೂ ಅಡ್ಡಿಯಿಲ್ಲ. ಯಾರು ಲಾರಿ ಇದ್ದವರು, ದೊಡ್ಡ ದೊಡ್ಡ ಮಾಲೀಕರು ಇದ್ದಾರೆ; ಅವರು ಇದರ ಲಾಭವನ್ನು ಪಡೆಯುವಂತಹ ಉದ್ಯೋಗ ಇದು ಆಗಬಾರದು. ಕಲ್ಲು ಕಡಿಯುವವರಿಗೆ ೫೦ರೂ ಕೊಟ್ಟರೆ ಹೊರಗೆ ೧೦೦ ರೂ.ಗೆ ಮಾರಾಟವಾಗುತ್ತದೆ. ಈ ವೈಪರೀತ್ಯ ತಪ್ಪಬೇಕು. ಇನ್ನು ವಿದ್ಯುಚ್ಛಕ್ತಿ ಯೋಜನೆ ಕುರಿತಾಗಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟದ ಕೆಳಗೆ ಹತ್ತಾರು ನದಿಗಳು ಹರಿದು ಜಲಪಾತಗಳಾಗಿ ಸಮುದ್ರಕ್ಕೆ ಸೇರುತ್ತವೆ. ಕೆಲವು ವರ್ಷಗಳ ಹಿಂದೆ ಚಿಕ್ಕ ಜರಿಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂತಹ ಮಿನಿ ಐಡಿಯಲ್ ಪ್ರಾಜೆಕ್ಟ್ ಯೋಜನೆ ಬಗ್ಗೆ, ಹಿಂದೆ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದಾಗ ಸರ್ಕಾರ ಎಲ್ಲೆಲ್ಲಿ ಮಾಡಲಿಕ್ಕೆ ಸಾಧ್ಯವಿದೆಯೆಂದು ವರದಿಯನ್ನು ತರಿಸಿಕೊಂಡಿತ್ತು. ನಮ್ಮ ತಾಲ್ಲೂಕಿನಿಂದಲೂ ಕಳಿಸಿಕೊಟ್ಟಿದ್ದೇವೆ. ಆ ನಂತರ ಏನಾಯಿತೋ ಗೊತ್ತಿಲ್ಲ. ವ್ಯರ್ಥವಾಗಿ ಹರಿದು ಹೋಗುವಂಥ ಜಲಪಾತಗಳನ್ನು ಉಪಯೋಗಿಸಿಕೊಂಡು ಸಣ್ಣ ಪ್ರಮಾಣದ ವಿದ್ಯುತ್ ಘಟಕಗಳನ್ನು ಸ್ಥಾಪಿಸಲಿಕ್ಕೆ ಸಾಧ್ಯ ಇದೆ ಹಾಗೂ ಅಲ್ಲಿ ಅಣೆಕಟ್ಟನ್ನು ಕಟ್ಟಿ ನೀರಾವರಿಗೆ ಈ ನೀರನ್ನು ಉಪಯೋಗಿಸಲಿಕ್ಕೆ ಕೂಡ ಸಾಧ್ಯವಿದೆ. ಕೆಲವು ದಿವಸಗಳ ಹಿಂದೆ ಕೆಲವು ಸದಸ್ಯರು ಪಶ್ಚಿಮ ಘಟ್ಟದಲ್ಲಿನ ನದಿಗಳನ್ನು ಪೂರ್ವಕ್ಕೆ ತಿರುಗಿಸಬೇಕೆಂದು ಹೇಳಿದರು. ಚಕ್ರಾ ನದಿಗೆ ಅಣೆಕಟ್ಟನ್ನು ಕಟ್ಟಿ ಲಿಂಗನಮಕ್ಕಿಗೆ ತಿರುಗಿಸುವುದರ ಮೂಲಕ ಶರಾವತಿಗೆ ಬೇಕಾದಂತಹ ಹೆಚ್ಚಿಗೆ ನೀರನ್ನು ಒದಗಿಸುವಂತೆ ಮಾಡಿದ ಕಾರಣದಿಂದ ಕುಂದಾಪುರ ತಾಲ್ಲೂಕಿನ ಹತ್ತಾರು ಹಳ್ಳಿಗಳಲ್ಲಿ ಸಾವಿರಾರು ಎಕರೆ ಜಲಕ್ಷಾಮಕ್ಕೆ ಈಡಾಗುವಂತಹ ಪರಿಸ್ಥಿತಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆ ಬರುತ್ತದೆಂಬ ಭಾವನೆ ಇದ್ದಹಾಗೆ ಇದೆ,

ಅಲ್ಲಿ ಮಳೆಗಾಲದ ೩-೪ ತಿಂಗಳು ಬಿಟ್ಟರೆ. ಬೇರೆ ಸಮಯದಲ್ಲಿ ಕುಡಿಯುವ ನೀರಿಗೂ ಕಷ್ಟ ಬರುವಂತಹ ಪ್ರಸಂಗ ಬಂದಿದೆ. ಎಲ್ಲಾ ನದಿಗಳನ್ನು ಪೂರ್ವಕ್ಕೆ ತಿರುಗಿಸುವಂತಹ ಯೋಜನೆಯನ್ನು ಮಾಡಿದಲ್ಲಿ ಇಡೀ ಜಿಲ್ಲೆಯಲ್ಲಿ ನೀರಿನ ಕ್ಷಾಮವನ್ನು ಅನುಭವಿಸಬೇಕಾದಂತಹ ಪರಿಸ್ಥಿತಿ ಬರಬಹುದೆಂದು ಹೇಳುತ್ತಿದ್ದೇನೆ, ಇನ್ನು ವಿದ್ಯುತ್ ಕಟ್ ಬಹಳ ದೊಡ್ಡ ಪಿಡುಗಾಗಿದೆ. ರಾತ್ರಿಯಿಡೀ ವಿದ್ಯುತ್ ಕಟ್ ಇರುತ್ತದೆ ಅದಕ್ಕೆ ಕಾರಣಗಳನ್ನು ಕೇಳಿದರೆ. ಬೇರೆ ಬೇಗೆ ಕಾರಣಗಳನ್ನು ಹೇಳುತ್ತಾರೆ ಮಾನ್ಯ ಸದಸ್ಯರಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಇದರ ಬಗ್ಗೆ ಪ್ರಶ್ನೆ ಎತ್ತಿದರು, ಆಗ ಅದನ್ನು ಆದಷ್ಟು ಬೇಗ ನಿವಾರಿಸುತ್ತೇವೆಂದು ಹೇಳಿದರು, ಈತನಕ ನಿವಾರಣೆಯಾಗಿಲ್ಲವೆಂದು ತಿಳಿದು ಬಂದಿದೆ. ಅಲ್ಲಿ ಬೇರೆ ಬೇರೆ ರೀತಿಯ ಉದ್ಯಮಗಳು ಕೂಡ ಇದೆ. ರೈತರು, ಬಳಕೆದಾರರು ಕೊಡುವಂತಹ ಮಿನಿಮಮ್ ಬೆಲೆಗೆ ಯಾವ ಕಟ್ ಇಲ್ಲ, ಉಪಯೋಗಿಸುವ ವಿದ್ಯುತ್ತಿಗೆ ಕಟ್ ಇಲ್ಲ, ಚಾರ್ಜ್‌ಗೆ ಕಟ್ ಇಲ್ಲ. ಈ ತರಹ ಇಡೀ ಪ್ರಪಂಚದಲ್ಲಿ ಯಾವುದೂ ಇಲ್ಲವೆಂದು ಕಾಣಿಸುತ್ತದೆ, ಈ ರೀತಿ ಆಗಬಾರದೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಗಿಯಿತು. ಮಂತ್ರಿಗಳಿಂದ ಉತ್ತರ.

೫-೦೦ ಪಿ. ಎಂ.

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಇಲಾಖೆಯ ಬೇಡಿಕೆಗಳ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುವಂಥ ಕಾಲದಲ್ಲಿ, ಅನೇಕ ಜನ ಸದಸ್ಯರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಸದಸ್ಯರು ರಚನಾತ್ಮಕ ಸಲಹೆಗಳನ್ನು ನೀಡಿದ್ದಾರೆ. ಕೆಲವು ಸದಸ್ಯರು ಲಘುವಾಗಿ ಟೀಕಿಸಿದ್ದಾರೆ ಮತ್ತು ವಿರೋಧಿಸಿದ್ದಾರೆ.

ಮೊದಲನೆಯದಾಗಿ ವಿದ್ಯುಚ್ಛಕ್ತಿ ಯೋಜನೆಗಳ ಬಗ್ಗೆ ಕೆಲವು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ. ವಿದ್ಯುಚ್ಛಕ್ತಿ ಇಲಾಖೆಯು ಮುಖ್ಯವಾದ ಇಲಾಖೆಗಳಲ್ಲಿ ಒಂದು ಆಗಿರುತ್ತದೆ. ಈ ಇಲಾಖೆಯ ಬಗ್ಗೆ ಎಲ್ಲಾ ಜನರು ದಿನಾಲೂ ಒಂದಲ್ಲ ಒಂದು ಕಾರಣಕ್ಕಾಗಿ ಚರ್ಚಿಸುತ್ತಿರುತ್ತಾರೆ.

ಕರ್ನಾಟಕ ರಾಜ್ಯವು ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಉಳಿದ ರಾಜ್ಯಗಳಿಗೆ ಆದರ್ಶವಾಗಿತ್ತು ಎಂದು ಹೇಳಬಯಸುತ್ತೇನೆ. ಆದರೆ ಈ ದಿನ ನಮ್ಮ ಅಕ್ಕಪಕ್ಕದ ರಾಜ್ಯಗಳು ನಮಗಿಂತ ಉತ್ತಮ ಸ್ಥಿತಿಯಲ್ಲಿ ಇವೆ. ಇದಕ್ಕೆ ಒಂದೇ ಕಾರಣ ಏನೆಂದರೆ, ೬೦ರ ದಶಕದಲ್ಲಿ ನಮ್ಮಲ್ಲಿ ಹೆಚ್ಚು ವಿದ್ಯುಚ್ಛಕ್ತಿ ಇದ್ದಾಗ, ದೇಶದ ಬೇರೆ ಬೇರೆ ಭಾಗಗಳಿಂದ ದೊಡ್ಡ ಉದ್ದಿಮೆದಾರರು ಬಂದು ಉದ್ದಿಮೆಗಳನ್ನು ಸ್ಥಾಪಿಸಲು ಆಮಂತ್ರಿಸಿದ್ದೆವು. ಇದರಿಂದಾಗಿ ಈಗ ಪೂರೈಸಲಾಗದಷ್ಟು ಬೇಡಿಕೆಯು ಬಂದಿರುತ್ತದೆ. ನಾವು ಹತ್ತು ಇಪ್ಪತ್ತು ವರ್ಷಗಳ ಹಿಂದೆಯೆ ಈ ಬಗ್ಗೆ ವಿಚಾರ ಮಾಡಿದರೆ ೮೦ನೆಯ ದಶಕದಲ್ಲಿ ವಿದ್ಯುತ್ ಕೊರತೆ ಅನುಭವಿಸುವ ಕಾಲ ಬರುತ್ತಿರಲಿಲ್ಲ.

(ಶ್ರೀ ಎಸ್. ಪುಟ್ಟಸ್ವಾಮಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯು ೧೯೮೪-೮೫ರಲ್ಲಿ ೭.೭೭೨ ದಶಲಕ್ಷ ಯುನಿಟ್‌ಗಳಾಗಿದ್ದು ಉತ್ಪಾದನಾ ಸಾಮರ್ಥ್ಯವು ೨೦೦೯.೮ ಮೆಗಾವ್ಯಾಟ್ ಆಗಿರುತ್ತವೆ. ಸದ್ಯಕ್ಕೆ ನಮ್ಮ ರಾಜ್ಯಕ್ಕೆ ಸುಮಾರು ೧೧,೬೯೯ ದಶಲಕ್ಷ ಯುನಿಟ್ ವಿದ್ಯುಚ್ಛಕ್ತಿ ಬೇಡಿಕೆ ಇರುತ್ತದೆ. ಈಗ ನಮಗೆ ೪.೦೨೭ ದಶಲಕ್ಷ ಯುನಿಟ್ ವಿದ್ಯುಚ್ಛಕ್ತಿ ಕೊರತೆ ಇದೆ. ಈ ಕೊರತೆಯನ್ನು ತುಂಬಲು ಮೊದಲು ನಮ್ಮಲ್ಲಿರತಕ್ಕಂಥ ವಿದ್ಯುತ್ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು, ಹೆಚ್ಚಿಸಿಕೊಂಡ ವಿದ್ಯುತ್‌ನ್ನು ಸರಿಯಾಗಿ ಹಂಚುವುದು ಮತ್ತು ಕಡಿಮೆ ಬಿದ್ದ ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ.

ವಿದ್ಯುಚ್ಛಕ್ತಿಯನ್ನು ಹೆಚ್ಚಿಸುವ ಯೋಜನೆಯಲ್ಲಿ ಕಾಳಿನದಿ ಒಂದನೇ ಘಟಕವು ಮುಗಿಯುವ ಹಂತದಲ್ಲಿ ಇದೆ ಮತ್ತು ೨ನೇ ಹಂತವು ಮಂಜೂರಾಗಿದ್ದು ಕೆಲಸವು ತೀವ್ರಗತಿಯಲ್ಲಿ ನಡೆದಿದೆ. ವರಾಹಿ ಯೋಜನೆಯು ಕೂಡ ತೀವ್ರಗತಿಯಲ್ಲಿ ನಡೆದಿದ್ದು ೧೯೮೬ರ ಕೊನೆಯ ಭಾಗ ಅಥವಾ ೧೯೮೭ರ ಮೊದಲನೇ ಭಾಗದಲ್ಲಿ ಮುಕ್ತಾಯಗೊಂಡು ಸುಮಾರು ೨೨೦ ಮೆ. ವ್ಯಾ. ವಿದ್ಯುಚ್ಛಕ್ತಿ

ಲಭ್ಯವಾಗುವ ಸಾಧ್ಯತೆ ಇದೆ. ಇನ್ನು ರಾಯಚೂರಿನಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಮೊದಲನೆಯ ಘಟಕದ ಕೆಲಸವು ಒಂದು ಹಂತಕ್ಕೆ ಬಂದು ಮುಟ್ಟಿದೆ. ಈ ಘಟಕವನ್ನು ಈ ವರ್ಷದ ಮಾರ್ಚಿ ತಿಂಗಳಲ್ಲಿ ಕಮಿಷನ್ ಮಾಡಿದ್ದು ತೈಲ ಇಂಧನದಿಂದ ಸದ್ಯಕ್ಕೆ ಪ್ರಾಯೋಗಿಕವಾಗಿ ಉತ್ಪನ್ನವು ನಡೆದಿದ್ದು ಇನ್ನು ಮುಂದಿನ ತಿಂಗಳಲ್ಲಿ ಕಲ್ಲಿದ್ದಲಿನ ಮೇಲೆ ಉತ್ಪಾದನೆಯು ಪ್ರಾರಂಭವಾಗುವುದು. ಇದೇ ರೀತಿ 2ನೆಯ ಘಟಕದಿಂದ ೧೯೮೬ನೇ ಜನವರಿ ತಿಂಗಳಲ್ಲಿ ಉತ್ಪಾದನೆಯನ್ನು ಪ್ರಾರಂಭ ಮಾಡಲಾಗುವುದು. ಈ ಘಟಕಗಳಿಂದ ನಮಗೆ ಮುಂದಿನ ವರ್ಷ ಮಾರ್ಚಿ ತಿಂಗಳ ಸಮಯದಲ್ಲಿ ೪.೨೦ ಮೆ. ವ್ಯಾ. ವಿದ್ಯುತ್ ದೊರೆಯುವುದೆಂದು ಅಂದಾಜು ಮಾಡಲಾಗಿದೆ. ಈಗ ಕೇಂದ್ರದಿಂದ ಮೂರನೆ ಘಟಕಕ್ಕೂ ಒಪ್ಪಿಗೆ ದೊರೆತಿದೆ. ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೂ ಮತ್ತು ಮಾನ್ಯ ಪ್ರಧಾನಿಯವರಿಗೂ, ಅಲ್ಲದೆ ಈ ಬಗ್ಗೆ ಶ್ರಮಿಸಿದ ಎಲ್ಲಾ ಸದಸ್ಯರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಥರ್ಮಲ್ ಪ್ಲಾಂಟಿಗೆ ದಿನಕ್ಕೆ ಸುಮಾರು ೨೫೦ ಟನ್ ಕಲ್ಲಿದ್ದಲು ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಮತ್ತು ಸಿಂಗರೇಣಿ ಕಲ್ಲಿದ್ದಲು ಗಣಿಯಿಂದ ಕಲ್ಲಿದ್ದಲು ಪಡೆಯಲು ಕೇಂದ್ರ ಸರ್ಕಾರವು ಪರವಾನಗಿ ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರು ಯಾವುದೇ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ.

ಕರ್ನಾಟಕ ವಿದ್ಯುತ್ ಉತ್ಪಾದನೆಯು ಕೇವಲ ಜಲ ವಿದ್ಯುತ್ ಯೋಜನೆಗಳ ಮೇಲೆ ಮಾತ್ರ ಅವಲಂಬಿಸಿದೆ. ಪ್ರಕೃತಿದತ್ತವಾದ ಮಳೆಯು ಕಡಿಮೆಯಾಗುತ್ತಿರುವುದರಿಂದ ಅನಿವಾರ್ಯವಾಗಿ ಕಳೆದ ಎರಡು ವರ್ಷಗಳಿಂದ ವಿದ್ಯುತ್ ಕೊರತೆಯಾಗಿರುವುದು. ನೆರೆಯ ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಥರ್ಮಲ್ ಯೂನಿಟ್‌ಗಳು ಈಗಾಗಲೇ ಉತ್ಪಾದನೆ ಮಾಡುತ್ತಾ ಇವೆ. ತಮಿಳು ನಾಡಿನಲ್ಲಿ ಅಣು ವಿದ್ಯುತ್ ಸ್ಥಾವರ ಕೂಡ ಇದೆ. ಕೇಂದ್ರ ಸರ್ಕಾರದ ಹಣದಿಂದ ಈ ಎರಡು ರಾಜ್ಯಗಳಲ್ಲಿ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಆದರೆ ದುರದೃಷ್ಟವಶಾತ್ ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ಹಣದಿಂದ ಯಾವುದೇ ವಿದ್ಯುತ್ ಯೋಜನೆಗಳು ಸ್ಥಾಪಿತವಾಗಿಲ್ಲ. ಇಲ್ಲಿಯವರೆಗೂ ನಮ್ಮ ರಾಜ್ಯ ಸರ್ಕಾರದ ಬೊಕ್ಕಸ ಹಣದಿಂದಲೇ ವಿದ್ಯುತ್ ಸ್ಥಾವರಗಳನ್ನು ಪ್ರಾರಂಭ ಮಾಡಿದ್ದೇವೆ. ಈ ಬಗ್ಗೆ ಈ ಸದನದ ಎಲ್ಲ ಸದಸ್ಯರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ಹೊತ್ತು ಆಂಧ್ರಪ್ರದೇಶವು ಒಳ್ಳೆಯ ಸುಭದ್ರ ಸ್ಥಿತಿಯಲ್ಲಿ ಇರದಿದ್ದರೂ ಕೂಡ ಅವರಿಗೆ ಬೇರೆ ಬೇರೆ ಮೂಲಗಳು ಇರುವುದರಿಂದಾಗಿ ಪರಿಸ್ಥಿತಿಯು ತಕ್ಕಮಟ್ಟಿಗೆ ಉತ್ತಮವಾಗಿದೆ. ಕೇರಳದಲ್ಲಿ ಪರಿಸ್ಥಿತಿಯು ಉತ್ತಮವಾಗಿದೆ. ಮತ್ತು ಅವರಿಗೆ ಬೇಡಿಕೆಗೆ ಬೇಕಾದಷ್ಟು ಉತ್ಪಾದನೆ ಮಾಡಿ ಹೆಚ್ಚಿಗೆ ಉಳಿದ ವಿದ್ಯುಚ್ಛಕ್ತಿಯನ್ನು ಅವರು ಪಕ್ಕದ ರಾಜ್ಯಗಳಿಗೆ ನಮ್ಮನ್ನು ಸೇರಿದಂತೆ ಮಾರಾಟ ಮಾಡುತ್ತಾರೆ. ನಾವು ಅವರಿಂದ ಹೆಚ್ಚಿನ ದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಂಡು ನಮ್ಮ ಗ್ರಾಹಕರಿಗೆ ಕೊಡುವಂತ ಪರಿಸ್ಥಿತಿಯು ಇದೆ. ಈ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಕೇಂದ್ರ ಸರ್ಕಾರ ವಿದ್ಯುತ್‌ಗಾರಗಳನ್ನು ಮಾಡುವಲ್ಲಿ ಸಹಾಯ ಮಾಡಿದ್ದಾರೆ. ಅದೇ ರೀತಿ ತಮಿಳುನಾಡು ಮತ್ತು ಆಂಧ್ರಗಳಲ್ಲಿ ಕೂಡ ಸಹಾಯ ಮಾಡಿದ್ದಾರೆ. ಆದರೆ ಕರ್ನಾಟಕಕ್ಕೆ ಮಾತ್ರ ಈವರೆಗೂ ಮಾಡಿಲ್ಲ. ಆದುದರಿಂದ ನಾವು ಬೇರೆ ವಿಷಯಗಳನ್ನು ವಿಚಾರ ಮಾಡುವುದಕ್ಕೆ ಮುಂಚೆ ಕರ್ನಾಟಕದ ಗಡಿ ಏನಾಗಿದೆ ಎಂದು ಯೋಚಿಸಬೇಕಾಗಿದೆ ಔದ್ಯೋಗಿಕ ಪ್ರಗತಿಗಾಗಲಿ, ಕೃಷಿ ಪ್ರಗತಿಗಾಗಲಿ, ಈ ಪ್ರಗತಿಗಳಿಗೆ ಬೇಕಾದ ಅವಶ್ಯಕತೆಯನ್ನು ಗಮನಿಸಿದರೆ ಕೇಂದ್ರ ಸರ್ಕಾರವು ನಮ್ಮ ರಾಜ್ಯದಲ್ಲಿ ಯಾವುದೇ ಒಂದು ಯೋಜನೆಯನ್ನು ಮಾಡಿಲ್ಲ ಎಂದು ಕಂಡು ಬರುತ್ತದೆ. ಆದರೆ ಈಗ ಒಂದು ವರ್ಷದಿಂದ ಕೇಂದ್ರದ ನಿಲುವು ಸ್ವಲ್ಪಮಟ್ಟಿಗೆ ಬದಲಾಗಿದೆಯೆಂದು ಭಾವಿಸುತ್ತೇನೆ, ಏಕೆಂದರೆ ಕೇಂದ್ರದಲ್ಲಿ ನಮ್ಮ ರಾಜ್ಯದವರೇ ಆದ ಮಾನ್ಯ ಶ್ರೀ ಶಂಕರಾನಂದ ಮತ್ತು ಮಾನ್ಯಶ್ರೀ ವೀರೇಂದ್ರ ಪಾಟೀಲರಂತಹ ಸಚಿವರಿದ್ದು ಅವರು ಪ್ರಧಾನಿಯವರ ಮನವೊಲಿಸಿ ನಮ್ಮ ರಾಜ್ಯದಲ್ಲಿ ಕೈಗಾ ಎಂಬಲ್ಲಿ ಒಂದು ಅಣುಶಕ್ತಿ ವಿದ್ಯುತ್ ಸ್ಥಾವರವನ್ನು ಮಂಜೂರು ಮಾಡಿಸಿದ್ದಾರೆ. ಅದರ ಉತ್ಪಾದನಾ ಶಕ್ತಿ ೨೩೫ ಮೆ. ವಾ. ಇದ್ದು ಅದು ಉತ್ಪಾದನೆಯನ್ನು ಪ್ರಾರಂಭಿಸಲು ಇನ್ನು ೮–೧೦ ವರ್ಷಗಳು ಬೇಕಾಗಬಹುದು. ನಮ್ಮ ಜನತಾ ಸರ್ಕಾರವು ಈ ಯೋಜನೆಗೆ ಎಲ್ಲ ಸಹಕಾರ ಸೌಲಭ್ಯಗಳನ್ನು ನೀಡಿದೆ ಈ ಬಗ್ಗೆ ನಾನು ಕೇಂದ್ರ ಸರ್ಕಾರವನ್ನು ಮತ್ತೊಮ್ಮೆ ನಮ್ಮ ಸರ್ಕಾರದ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಆದರೆ ಇಷ್ಟರಿಂದಲೇ ಸಮಾಧಾನ ಪಟ್ಟರೆ ಆಗುವುದಿಲ್ಲ.

ವಿಜಯನಗರ ಉಕ್ಕಿನ ಕಾರ್ಖಾನೆಯು ನಮ್ಮ ರಾಜ್ಯದಲ್ಲಿ ಸ್ಥಾಪಿಸಲು ಸದನದಲ್ಲಿ ಮಾನ್ಯ ಸದಸ್ಯರು ಕೇಂದ್ರದ ಮೇಲೆ ಒತ್ತಾಯ ತರಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಉತ್ಪಾದನೆಯ ಸಾಮರ್ಥ್ಯದ ಬಗ್ಗೆ ಹೇಳಬೇಕೆಂದರೆ ನಮ್ಮ ಉತ್ಪಾದನೆಯು ನಮ್ಮ ಬೇಡಿಕೆಗಿಂತ ಬಹಳ ಕಡಿಮೆಯಿದೆ. ಈಗಾಗಲೇ ಹೇಳಿದಂತೆ ೧೯೮೪-೮೫ನೇ ಸಾಲಿನಲ್ಲಿ ಬೇಡಿಕೆಯು ೧೧, ೭೯೯ ದಶಲಕ್ಷ ಯೂನಿಟ್ಟುಗಳಿದ್ದರೆ, ಉತ್ಪಾದನೆಯು ಕೇವಲ ೭,೭೭೨ ದಶಲಕ್ಷ ಯೂನಿಟ್ಟುಗಳಾಗಿರುತ್ತದೆ. ಈಗ ಕೆಲವು ಅಂಶಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ನಾವು ಶಾಖೋತ್ಪನ್ನ (ಥರ್ಮಲ್) ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿದಲ್ಲಿ ಪರಿಸರ ಮಾಲಿನ್ಯವಲ್ಲದೆ ಬಹಳ ದುಬಾರಿಯೂ ಹೌದು ಇನ್ನು ಅಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿದರೂ ಸಹಾ ಪರಿಸರ ಮಾಲಿನ್ಯದ ಪ್ರಶ್ನೆ ಉದ್ಭವಿಸುತ್ತದೆ, ನಾವು ಸೌರಶಕ್ತಿ ಉಪಯೋಗಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡಬೇಕೆಂದು ಸೂಚನೆ ಸಹ ಬಂದಿರುತ್ತದೆ. ಆದರೆ ಸೌರಶಕ್ತಿಯನ್ನು ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸಲು ಬಹಳ ಖರ್ಚು ಬರುತ್ತವೆ. ಅಲ್ಲದೇ ಈ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಉತ್ಪಾದಿಸಲು ಸಾಧ್ಯವಿರುವುದಿಲ್ಲ. ಇನ್ನು ಸಾಗರದ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮಾಡುವಲ್ಲಿ ಕೆಲವು ಸಂಶೋಧನೆಗಳು ನಡೆದಿದ್ದು ಈ ರೀತಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಸಾಧ್ಯವಾಗುವಂತೆ ಮಾಡಬಲ್ಲ ವಿಜ್ಞಾನಿಗಳು ಮತ್ತು ಇಂಜಿನಿಯರುಗಳು ಸಹಾ ನಮ್ಮಲ್ಲಿದ್ದಾರೆ. ಸಾಗರದ ಅಲೆಯ ಮೂಲಕ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ನಾವು ಪ್ರಯತ್ನ ಮಾಡಬೇಕಾಗುವುದು ಅವಶ್ಯಕವಾಗಿದೆ.

ನಾವು ಈಗ ಅನಿವಾರ್ಯ ಕಾರಣಗಳಿಗಾಗಿ ಜಲ ವಿದ್ಯುತ್ ಯೋಜನೆಗಳ ಮೇಲೆ ವಿದ್ಯುಚ್ಛಕ್ತಿಗಾಗಿ ಅವಲಂಬಿಸಿದ್ದೇವೆ. ಇದರಿಂದಾಗಿ ನಮ್ಮಿಂದ ಸಂಪೂರ್ಣ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಮತ್ತು ಯಾವಾಗಲೂ ಶೇಕಡ ೨೫ ರಿಂದ ೩೦ ಕೊರತೆ ಇದ್ದೇ ಇರುತ್ತದೆ. ಈ ಕಾರಣಕ್ಕಾಗಿ ನಾವು ವಿದ್ಯುತ್ತನ್ನು ಬಳಸುವ ಬೇರೆ ಬೇರೆ ರೀತಿಯ ಗ್ರಾಹಕರ ಮೇಲೆ ವಿವಿಧ ಮಟ್ಟದಲ್ಲಿ ಕಡಿತವನ್ನು ಹಾಕಲೇಬೇಕಾಗಿರುತ್ತದೆ. ಕಡಿತವು ಬೇರೆ ಬೇರೆ ತಿಂಗಳುಗಳಲ್ಲಿ ಹೆಚ್ಚು ಕಡಿಮೆಯಾಗಬಹುದು.

ಇದು ಅಲ್ಲದೆ, ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್‌ನಲ್ಲಿ ಆಗುವ ನಷ್ಟದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್‌ಗಳಲ್ಲಿ ಸಣ್ಣ ಪ್ರಮಾಣದ ನಷ್ಟವನ್ನು ತಾಂತ್ರಿಕವಾಗಿ ಒಪ್ಪಿಕೊಳ್ಳಬೇಕಾಗಿದೆ. ಈ ನಷ್ಟವನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಿರುವುದಿಲ್ಲ. ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಟ್ರಾನ್ಸ್‌ಮಿಷನ್ ಲಾಸ್‌ಗಳು ಇದ್ದೇ ಇರುತ್ತವೆ. ಆದರೆ ನಮ್ಮ ರಾಜ್ಯದಲ್ಲಿ ಟ್ರಾನ್ಸ್‌ಮಿಷನ್ ನಷ್ಟವು ಸ್ವಲ್ಪ ಹೆಚ್ಚಾಗಿದೆ. ನಮ್ಮ ರಾಜ್ಯದಲ್ಲಿ ಆಗುವ ಟ್ರಾನ್ಸ್‌ಮಿಷನ್ ನಷ್ಟವು ಶೇಕಡ ೨೧ರಷ್ಟು ಇರುತ್ತದೆ. ಇದಕ್ಕೆ ಮುಖ್ಯವಾಗಿ ಕಾರಣವೇನೆಂದರೆ ಉತ್ಪಾದನಾ ಕೇಂದ್ರಗಳು ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಇದ್ದು ಪ್ರಾಮುಖ್ಯವಾದ ಗ್ರಾಹಕ ಕೇಂದ್ರಗಳು ಪೂರ್ವ ಭಾಗದಲ್ಲಿರುತ್ತವೆ. ಉದಾಹರಣೆಗೆ ಶರಾವತಿ, ಲಿಂಗನಮಕ್ಕಿ ಸೂಪಾಗಳಲ್ಲಿ ಉತ್ಪಾದನೆಯಾದ ವಿದ್ಯುಚ್ಛಕ್ತಿಯನ್ನು ಗುಲ್ಬರ್ಗಾ, ಬೀದರ್ ಬೆಂಗಳೂರಿನಂತಹ ದೂರದ ಪ್ರದೇಶಗಳಿಗೆ ಸಾಗಿಸಬೇಕಾಗಿರುತ್ತದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಬಹಳವಾಗಿ ವಿದ್ಯುತ್ ಪ್ರಸರಣೆಯ ವ್ಯವಸ್ಥೆಯನ್ನು ಮಾಡಿರುವುದು ಸಹಾ ವಿದ್ಯುತ್ ನಷ್ಟಕ್ಕೆ ಕಾರಣವಾಗಿರುತ್ತದೆ.

ಟ್ರಾನ್ಸ್‌ಮಿಷನ್ ನಷ್ಟದಲ್ಲಿ ಒಂದು ಪರ್ಸೆಂಟ್ ಉಳಿಸಿದರೂ ಸಹಾ ನಮಗೆ ೩.೩೫ ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಇದರಿಂದ ನಾವು ಟ್ರಾನ್ಸ್‌ಮಿಷನ್ ಲಾಸನ್ನು ಉಳಿಸುವ ದಿಕ್ಕಿನಲ್ಲಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಸಹಾ ಮಾಡಲು ಯೋಚಿಸಿರುತ್ತೇವೆ. ಅವುಗಳು ಯಾವುವೆಂದರೆ ೨೨೦ ಕೆವಿಎ, ೧೧೦ ಕೆವಿಎ, ೬೬ ಕೆವಿಎ ಶಕ್ತಿಯ ಟ್ರಾನ್ಸ್‌ಮಿಷನ್ ಲೈನುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಹೆಚ್ಚು ದೂರ ವಿದ್ಯುತ್ ಸಾಗಿಸುವಲ್ಲಿ ಹಾಕುವುದು ಹೆಚ್ಚಿನ ಸಂಖ್ಯೆಯಲ್ಲಿ ೧೧ ಕೆವಿಎ, ೩೩ ಕೆವಿ ಶಕ್ತಿಯ ಕೆಪಾಸಿಟರ್ ಬ್ಯಾಂಕುಗಳನ್ನು ಸ್ಥಾಪಿಸುವುದು ಹಾಗೂ ರಿಸೀವಿಂಗ್ ಕೇಂದ್ರಗಳನ್ನು ಗ್ರಾಹಕ ಕೇಂದ್ರಗಳಿಗೆ ಆದಷ್ಟು ಹತ್ತಿರದಲ್ಲಿ ಸ್ಥಾಪಿಸುವುದರ ಮೂಲಕ ಸಾಧಿಸಲು ಪ್ರಯತ್ನಿಸುತ್ತಿದ್ದೇವೆ. ಈ ಯೋಜನೆಗಳಿಗೆ ತಗಲುವ ವೆಚ್ಚ ೩೨.೨೭ ಕೋಟಿ ರೂಪಾಯಿಗಳಾಗಿದ್ದು ಅದನ್ನು ಆರ್ಥಿಕ ಸಂಸ್ಥೆಗಳಿಂದಲೂ ಹಾಗೂ ವಿಶ್ವಬ್ಯಾಂಕ್‌ನಿಂದಲೂ ಪಡೆಯಲು ಮಂಡಳಿಯು ಪ್ರಯತ್ನಿಸುತ್ತಿದೆ.

ಈಗಾಗಲೇ ಪ್ರಸ್ತಾಪಿಸಿದ ವಿಷಯಗಳಲ್ಲಿ ಮಾನ್ಯ ಸದಸ್ಯರು ರಾಜ್ಯದಲ್ಲಿ ಕಡಿಮೆ ಓಲ್ಟೇಜ್ ಬಗ್ಗೆ ಸಹಾ ಪ್ರಸ್ತಾಪ ಮಾಡಿದ್ದಾರೆ. ಇದು ಅನಿವಾರ್ಯವಾಗಿರುತ್ತದೆ. ನಾವು ನಮ್ಮಿಂದ ಎಷ್ಟು ವಿದ್ಯುತ್ತನ್ನು ಪೂರೈಸಲು ಸಾಧ್ಯವಾಗುತ್ತದೋ ಅಷ್ಟು ವಿದ್ಯುತ್ತನ್ನು ಮಾತ್ರ ಗ್ರಾಹಕರಿಗೆ ಸರಬರಾಜು ಮಾಡಲು ಸಾಧ್ಯ. ಸಾಧ್ಯವಾಗುವುದಕ್ಕಿಂತ ಮೀರಿ ವಿದ್ಯುತ್‌ಸರಬರಾಜು ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಅಂದರೆ ಹೆಚ್ಚು ಕನೆಕ್ಷನ್‌ಗಳನ್ನು ಕೊಟ್ಟಲ್ಲಿ ಓಲ್ಟೇಜ್ ಮಿತಿಗಿಂತ ಕೆಳಗೆ ಹೋಗುವುದು ಅನಿವಾರ್ಯ.

ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಉತ್ಪಾದನೆ ಹಾಗೂ ವಿತರಣೆಯಲ್ಲಿ ಸಮಗ್ರವಾಗಿ ಸುಧಾರಣೆಯಾಗಬೇಕಾಗಿದೆ ಇದಕ್ಕಾಗಿ ನಮಗೆ ಹೆಚ್ಚಿನ ಹಣ ಬೇಕಾಗುತ್ತದೆ. ಈಗ ನಿರ್ಮಾಣ ಹಂತದಲ್ಲಿರುವ ಉತ್ಪಾದನಾ ಕೇಂದ್ರಗಳಾದ ಕಾಳಿ, ವರಾಹಿ, ರಾಯಚೂರು ಶಾಖೋತ್ಪನ ವಿದ್ಯುತ್ ಕೇಂದ್ರಗಳಲ್ಲದೆ, ಮಿನಿ ಉತ್ಪಾದನಾ ಕೇಂದ್ರಗಳಾದ ಮಲ್ಲಾಪುರ, ಶಿರಿವಾರ ಮತ್ತು ಕಲ್ಮಲ ಕೇಂದ್ರಗಳಲ್ಲಿಯೂ ನಾವು ಹೆಚ್ಚಿನ ಹಣವನ್ನು ತೊಡಗಿಸಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿದಲ್ಲಿ ಹಾಗೂ ವಿದ್ಯುತ್ ವಿತರಣೆಯ ವ್ಯವಸ್ಥೆಯಲ್ಲಿ ಅಂದರೆ ಓಲ್ಟೇಜ್ ಗ್ರಿಡ್‌ಗಳನ್ನು ಸುಧಾರಿಸಿದಲ್ಲಿ ಹಾಗೂ ವಿತರಣೆಯ ಲೈನುಗಳನ್ನು ಸುಧಾರಿಸಿದಲ್ಲಿ ಬೇಡಿಕೆಯನ್ನು ಸುಲಭವಾಗಿ ಮುಟ್ಟುವುದಲ್ಲದೆ. ಟ್ರಾನ್ಸ್‌ಮಿಷನ್ ನಷ್ಟವನ್ನು ಸಹ ಕಡಿಮೆ ಮಾಡಿದಂತಾಗುತ್ತದೆ. ಈ ಗುರಿಯನ್ನು ಸಾಧಿಸಲು ನಮಗೆ ಹೆಚ್ಚಿನ ಹಣ ಬೇಕಾಗುತ್ತದೆ. ಆಂಧ್ರಪ್ರದೇಶದ ರಾಮಗುಂಡಂನಿಂದ ನಮಗೆ ಬರಬೇಕಾದ ವಿದ್ಯುತ್ತಲ್ಲದೆ. ನಾವು ಹೆಚ್ಚಿನ ದರದಲ್ಲಿ ಪಕ್ಕದ ರಾಜ್ಯಗಳಿಂದ ವಿದ್ಯುತ್ತನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ನಮಗೆ ರಾಮಗುಂಡಂನಿಂದ ಬರುವ ನಮ್ಮ ಪಾಲಿನ ವಿದ್ಯುತ್ತು ಸರಿಯಾಗಿ ಬರುತ್ತಿಲ್ಲ. ನಾವು ಮಹಾರಾಷ್ಟ್ರದಿಂದಲೂ ಸಹ ವಿದ್ಯುತ್ತನ್ನು ಕೊಂಡುಕೊಂಡಿದ್ದೇವೆ. ಇವಲ್ಲದೆ ನಾವು ಗೋವಾಕ್ಕೆ ವಿದ್ಯುತ್ತನ್ನು ಮಾರಾಟ ಮಾಡಿರುತ್ತೇವೆ. ಇಂತಹ ವ್ಯವಹಾರಗಳ ಬಗ್ಗೆ ಒಂದು ನೀತಿಯನ್ನು ಮಾಡುವುದು ಸೂಕ್ತವೆಂದು ನಾವು ಈ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ವಿನಂತಿಸಿಕೊಂಡಿರುತ್ತೇವೆ.

ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿದ್ಯುತ್ ಮಂಡಲಿಯು, ಕರ್ನಾಟಕ ವಿದ್ಯುತ್ ನಿಗಮವು ಅದರ ಅಧೀನದಲ್ಲಿರುವ ವಿದ್ಯುತ್ಆಗಾರಗಳಿಂದ ಉತ್ಪಾದನೆಯಾದ ವಿದ್ಯುತ್ತನ್ನು ಒಂದು ದರದ ಮೇಲೆ ಕೊಂಡುಕೊಳ್ಳುತ್ತಿದೆ. ಮತ್ತು ಅದರಲ್ಲಿ ಯಾವುದೇ ಲಾಭದ ಅಂಶವಿಲ್ಲದೇ ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ಕರ್ನಾಟಕ ವಿದ್ಯುತ್ ಮಂಡಳಿಯು ದಕ್ಷಿಣ ಭಾರತದಲ್ಲಿಯೇ ಅತ್ಯಂತ ಕಡಿಮೆ ದರದಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿದೆ. ವಿದ್ಯುತ್ ಒಂದು ಭೋಗದ ಸಾಮಗ್ರಿಯಾಗಿರದೆ, ಬಡಜನರಿಗೂ ಸಹ ಜೀವಿಸಲು ಅತ್ಯಾವಶ್ಯಕವಾಗಿ ಬೇಕಾಗಿರುತ್ತದೆ ಆದುದರಿಂದ ನಗರಗಳಲ್ಲಿ ಏರ್‌ಕಂಡೀಷನ್‌ನಂತ ಉಪ ಭೋಗಗಳಿಗೆ ವ್ಯಯಮಾಡುವ ಬದಲು ಅದನ್ನು ನಮ್ಮ ರಾಜ್ಯದ ಸಾವಿರಾರು ಹಳ್ಳಿಗಳಲ್ಲಿ ಜೀವಿಸುವ ಬಡಜನರಿಗೂ ಮತ್ತು ಹರಿಜನ, ಲಂಬಾಣಿಯಂತಹ ಹಿಂದುಳಿದ ವರ್ಗಗಳಿಗೂ ಮುಟ್ಟುವಂತೆ ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಗ್ರಾಮೀಣ ವಿದ್ಯುದೀಕರಣವನ್ನು ಈ ವರ್ಷ ಮಂಡಳಿಯು ೩,೯೮೩ ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿರುತ್ತದೆ. ಹಾಗೂ ಭಾಗ್ಯಜ್ಯೋತಿ ಯೋಜನೆಗಾಗಿ ೮೫ ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿರುತ್ತದೆ. ೧೯೮೪-೮೫ನೇ ಸಾಲಿನಲ್ಲಿ ಒಟ್ಟು ೪೦ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುದೀಕರಣಗೊಳಿಸುವ ಗುರಿಯಿದ್ದು, ೪೪,೯೩೭ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಣಗೊಳಿಸಲಾಗಿದೆ. ಈ ವರ್ಷದಲ್ಲಿ ೪೦ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಯೋಜನೆ ಇದೆ. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದ ವಿದ್ಯುತ್ ಒದಗಿಸುವುದು ನಮ್ಮ ಉದ್ದೇಶವಾಗಿದೆ. ಈ ಕಾರಣಕ್ಕಾಗಿ ಈ ವಿದ್ಯುತ್ ಉಪಯೋಗಿಸಿ ಯಾರಾದರೂ ದೊಡ್ಡ ಉದ್ದಿಮೆಯನ್ನು ಶುರುಮಾಡುವಂತಿದ್ದರೆ ಅವರು ಮೂರನೇ ಒಂದು ಭಾಗ ವಿದ್ಯುತ್ತನ್ನು ಸ್ವತಃ ಉತ್ಪಾದನೆ ಮಾಡಿಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಲ್ಲಿ ಮಾತ್ರ. ಸ್ಥಳ ಮತ್ತು ಪರವಾನಗಿಯನ್ನು ಸರ್ಕಾರವು ಕೊಡುತ್ತದೆ. ವಿದ್ಯುತ್ ಮಂಡಳಿಯ ಕಾರ್ಯಭಾರ ಮತ್ತು ಕಾರ್ಯವ್ಯಾಪ್ತಿಯು ಈಗ ಬಹಳ ಹೆಚ್ಚಾಗಿರುವುದರಿಂದಾಗಿ ವಿದ್ಯುತ್ ಮಂಡಲಿಯಲ್ಲಿರುವ ನೌಕರರ ಸಂಖ್ಯೆಯು ಮೊದಲಿನಂತೆಯೇ ಇದೆ. ಸದ್ಯಕ್ಕೆ ವಿದ್ಯುತ್ ಮಂಡಲಿಯಲ್ಲಿ ೪೮ ಸಾವಿರ ಜನ ನೌಕರರಿದ್ದಾರೆ. ವಿದ್ಯುತ್ ನಿಗಮದಲ್ಲಿ ೭ ರಿಂದ ೮ ಸಾವಿರ ನೌಕರರಿದ್ದಾರೆ. ಆದರೂ ಸಹ ಗ್ರಾಮೀಣ ಪ್ರದೇಶದಲ್ಲಿ ವಿದ್ಯುದ್ದೀಕರಣಕ್ಕಾಗಿ ಲೋಪ ಬರದಂತೆ ಅಗತ್ಯ ಬಿದ್ದಲ್ಲಿ ಗುತ್ತಿಗೆದಾರರಿಗೆ ವಹಿಸಿಕೊಟ್ಟು ಕೆಲಸವನ್ನು ಸಂಪೂರ್ಣವಾಗಿ ಸರಿಯಾಗಿ ಸಾಧಿಸಲು ಪ್ರಯತ್ನಿಸುತ್ತಿದ್ದೇವೆ. ವಿದ್ಯುದೀಕರಣಕ್ಕೆ ಬೇಕಾದ ಸಾಮಗ್ರಿಗಳ ಕೊರತೆಯಿದ್ದು ಆರ್ಥಿಕ ಪರಿಸ್ಥಿತಿ ಕೊರತೆಯಿಂದಲೂ ಮತ್ತು ಲಭ್ಯತೆಯ ಕಾರಣದಿಂದಲೂ ಸಾಧ್ಯವಾದಮಟ್ಟಿಗೆ ಪ್ರಗತಿಗೆ

ಕುಂದು ಬಾರದಂತೆ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಿದ್ದೇವೆ ಮತ್ತು ಅಗತ್ಯಬಿದ್ದಲ್ಲಿ ಪಕ್ಕದ ರಾಜ್ಯಗಳಿಂದಲೂ ಸಹಾ ತರಿಸಿಕೊಳ್ಳುತ್ತಿದ್ದೇವೆ. ಒಟ್ಟಿನಲ್ಲಿ ಯಾವ ರೀತಿಯಿಂದಲೂ ಗ್ರಾಮೀಣ ವಿದ್ಯುದೀಕರಣದಲ್ಲಿ ಸಾಧಿಸಬೇಕಾದ ಪ್ರಗತಿಗೆ ಕುಂದುಬಾರದಂತೆ ನಡೆಸಿಕೊಂಡು ಹೋಗುವುದಾಗಿ ಹೇಳಬಯಸುತ್ತೇನೆ. ವಿದ್ಯುತ್ ಮಂಡಳಿಗೆ ಸರ್ಕಾರದ ಸ್ವಾಧೀನದಲ್ಲಿರುವ ಪುರಸಭೆಗಳಿಂದ, ಗ್ರಾಮ ಪಂಚಾಯ್ತಿಗಳಿಂದ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾದ ಮೊತ್ತವು ಒಟ್ಟು ೫೮,೨೫೫ ರೂಪಾಯಿಗಳಾಗಿರುತ್ತದೆ, ಅದಲ್ಲದೇ ಖಾಸಗಿ ಉದ್ದಿಮೆಗಳಿಂದ ಬರಬೇಕಾದ ಬಾಕಿ ೩,೪೩,೨೩,೭೯೪ ರೂಪಾಯಿಗಳು, ಈ ಬಾಕಿಗಳನ್ನು ಆದಷ್ಟು ಬೇಗನೆ ವಸೂಲು ಮಾಡಲು ಪ್ರಯತ್ನಮಾಡಲಾಗುವುದು. ಇದಲ್ಲದೆ ೨,೨೮,೪೩,೯೯೫ ರೂಪಾಯಿಗಳ ಮೊತ್ತದ ಪ್ರಕರಣಗಳು ನ್ಯಾಯಾಲಯದಲ್ಲಿದ್ದು ಅವುಗಳನ್ನು ಸಹಾ ಅಂತಿಮ ನಿರ್ಣಯವನ್ನು ನ್ಯಾಯಾಲಯದಿಂದ ಪಡೆದು ಆದಷ್ಟು ಬೇಗನೇ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು. ಕೆಲವೇ ರೂಪಾಯಿಗಳ ಬಾಕಿಯಾದ ಬಡವರ ಮನೆಗಳಿಗೆ ವಿದ್ಯುತ್ತನ್ನು ಕಡಿತ ಮಾಡಿರುತ್ತಾರೆಂದು ಕೆಲವು ಸದಸ್ಯರು ನನ್ನ ಗಮನಕ್ಕೆ ತಂದಿದ್ದು ಅಂತಹ ಪರಿಸ್ಥಿತಿಯಲ್ಲಿ ವಿದ್ಯುತ್ ಕಡಿತ ಮಾಡಬಾರದೆಂದು ಆದೇಶ ಮಾಡಿರುತ್ತೇನೆ. ಇದೇ ರೀತಿ ಕುಡಿಯುವ ನೀರಿನ ಸರಬರಾಜು ಬೀದಿ ದೀಪಗಳಿಗೆ ಸರಬರಾಜನ್ನು ಸಹ ಯಾವುದೇ ಕಾರಣಕ್ಕಾಗಿ ಕಡಿತ ಮಾಡಬಾರದೆಂದು ಆದೇಶ ಮಾಡಿರುತ್ತೇನೆ. ಏಕೆಂದರೆ ಈಗ ಪುರಸಭೆಗಳು ಮತ್ತು ಗ್ರಾಮ ಪಂಚಾಯ್ತಿಗಳು ಆದಾಯ ಇಲ್ಲದೆ ಆರ್ಥಿಕವಾಗಿ ತೊಡಕಿನಲ್ಲಿವೆ. ಭದ್ರಾವತಿ ಉಕ್ಕಿನ ಕಾರ್ಖಾನೆಯಿಂದ ಮಂಡಳಿಗೆ ೩೦ ಕೋಟಿಗಿಂತಲೂ ಮಿಗಿಲಾಗಿ ಬಾಕಿ ಇದ್ದರೂ ಸಹ ಅಲ್ಲಿ ಕೆಲಸ ಮಾಡುತ್ತಿರುವ ೧೪,೦೦೦ ಕಾರ್ಮಿಕರನ್ನು ಗಮನದಲ್ಲಿಟ್ಟು ಕೊಂಡು ವಿದ್ಯುತ್ ಸರಬರಾಜು ನಿಲ್ಲಿಸಿರುವುದಿಲ್ಲ. ಒಂದು ಸಮಸ್ಯೆಗಳನ್ನು ಪರಿಹರಿಸಲು ಇನ್ನೊಂದು ಸಮಸ್ಯೆಯನ್ನು ಸೃಷ್ಟಿಸುವುದು ಬೇಡ ಎನ್ನುವುದು ನಮ್ಮ ಉದ್ದೇಶವಾಗಿರುತ್ತದೆ. ತಮ್ಮ ತಮ್ಮ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ವಿತರಣೆ ಪ್ರಗತಿಯೂ ಕಂಬ, ತಂತಿ, ಟ್ರಾನ್ಸ್‌ಫಾರ್ಮರ್ ಸರಬರಾಜಾಗದೇ ಸಮಯಕ್ಕೆ ಸರಿಯಾಗಿ ವಿದ್ಯುತ್ ಸರಬರಾಜಾಗುತ್ತಿಲ್ಲವೆಂದು ಕೆಲವು ಸದಸ್ಯರು ನನ್ನ ಗಮನಕ್ಕೆ ತಂದಿರುತ್ತಾರೆ. ಮತ್ತು ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಮಂಡಳಿಯ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ವಿದ್ಯುತ್ ಸರಬರಾಜುಗಾಗಿ, ಕಂಬಗಳನ್ನು ಹಾಕುತ್ತಿಲ್ಲ ಮತ್ತು ತಂತಿಗಳನ್ನು ಹಾಕುವ ಕೆಲಸವನ್ನು ತಡ ಮಾಡಿದ್ದಾರೆ ಎನ್ನುವ ಅಪಾದನೆಗಳು ಸಹಾ ನನಗೆ ಬಂದಿರುತ್ತದೆ. ಅಂತಹ ಅಧಿಕಾರಿಗಳ ಬಗ್ಗೆ ನನಗೆ ಆಧಾರವನ್ನು ಕೊಟ್ಟಲ್ಲಿ ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ರೀತಿ ಕಿರುಕುಳ ಕೊಡುವ ಅಧಿಕಾರಿಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿರುತ್ತಾರೆ. ಈ ರೀತಿಯಾದ ಜನರಿಗೆ ಆಗುವ ತೊಂದರೆಯನ್ನು ತಪ್ಪಿಸುವ ಉದ್ದೇಶದಿಂದ ಮಂಡಳಿಯ ಜಾಗೃತಾ ವಿಭಾಗವನ್ನು ಬಲಪಡಿಸಲಾಗಿರುತ್ತದೆ. ಒಬ್ಬ ಮುಖ್ಯ ಅಭಿಯಂತರರನ್ನು ಮುಖ್ಯ ಜಾಗೃತಾಧಿಕಾರಿಗಳನ್ನಾಗ ನೇಮಿಸಿ ಅವರ ಕೆಳಗೆ ಇಬ್ಬರು ಪೋಲೀಸ್ ಸೂಪರಿಂಟೆಂಡೆಂಟ್‌ಗಳು ಇರುತ್ತಾರೆ. ಹಾಗೂ ಇಬ್ಬರು ಕಾರ್ಯನಿರ್ವಾಹಕ ಅಭಿಯಂತರರನ್ನು ಕೊಟ್ಟಿರುತ್ತಾರೆ, ಜಾಗೃತ ವಿಭಾಗವು ೧೯೮೪–೮೫ನೇ ಸಾಲಿನಲ್ಲಿ ೧೪೧ ದೊಡ್ಡ ಪ್ರಮಾಣದ ಗುನ್ಹೆಗಳನ್ನು ಕಂಡುಹಿಡಿದಿದ್ದು, ಅವುಗಳಿಂದ ೮.೮೮ ಲಕ್ಷ ರೂಪಾಯಿಗಳ ಮೊತ್ತ ವಿದ್ಯುತ್ ಮತ್ತು ಸಲಕರಣೆಗಳು ಕಳುವಿನ ಬಗ್ಗೆ ಆಗಿರುತ್ತದೆ. ಅಲ್ಲದೆ ೧.೧೬ ಕೋಟಿ ರೂಪಾಯಿಗಳ ಮೊತ್ತದಷ್ಟಾಗುವ ೫,೫೬೩ ಸಣ್ಣ ಪ್ರಮಾಣದ ಗುನ್ಹೆಗಳನ್ನು ಸಹ ಅವರು ಕಂಡುಹಿಡಿದಿರುತ್ತಾರೆ. ಅವುಗಳಲ್ಲಿ ಈಗಾಗಲೇ ಕನಿಷ್ಟಪಕ್ಷ ೩೦ ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು ೨೬ ಪ್ರಕರಣಗಳಲ್ಲಿ ಆರೋಪಿಗಳು ನಿರ್ದೋಷಿಗಳೆಂದು ಬಿಡುಗಡೆಯಾಗಿರುತ್ತಾರೆ. ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಒಟ್ಟು ೧೦ ಸಾವಿರಕ್ಕಿಂತಲೂ ಮೇಲಾಗಿ ದಿನಗೂಲಿ ಕಾರ್ಮಿಕರಿದ್ದು ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದನಂತರ ಮೂರೂವರೆ ಸಾವಿರ ದಿನಗೂಲಿ ನೌಕರರನ್ನು ಖಾಯಂ ಮಾಡಲಾಗಿರುತ್ತದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಬಲಪಡಿಸಲು ೯ ದೊಡ್ಡ ಪ್ರಮಾಣದ ಡೀಸಲ್ ಸ್ಟೇಷನ್‌ಗಳನ್ನು ಸ್ಥಾಪಿಸಲು ನಿರ್ಧಾರವನ್ನು ಕೈಗೊಂಡು ಅವುಗಳನ್ನು ಬೆಂಗಳೂರು, ಜಮಖಂಡಿ, ಇಂಡಿ, ಬೀದರ್ ಕೋಲಾರ ಜಿಲ್ಲೆಗಳಲ್ಲಿ ಅಳವಡಿಸಲು ಸೂಚಿಸಿದೆ. ಅವುಗಳನ್ನು ಹೊರ ರಾಷ್ಟ್ರಗಳಿಂದ ತರಿಸಿಕೊಳ್ಳಲಾಗುವುದು. ಅವುಗಳ ಪ್ರತಿಯೊಂದರ ಬೆಲೆ ೧೧ ರಿಂದ ೧೫ ಕೋಟಿ ರೂಪಾಯಿಗಳಾಗುತ್ತದೆ. ಈವರೆಗೆ ಈ ಸದನದ ಮಾನ್ಯ ಸದಸ್ಯರು ತಮ್ಮ ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಉತ್ತಮವಾದುವಗಳನ್ನು ಕಾರ್ಯರೂಪಕ್ಕೆ ತಂದು ಅದನ್ನು ಸಾಧಿಸಿ ತೋರಿಸಲು ಮನಃ ಪೂರ್ವಕವಾಗಿ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಸದನವು ನನ್ನ ಇಲಾಖಾ ಬೇಡಿಕೆಗಳಿಗೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಜಿ.ಎಚ್. ಅಶ್ವಥರೆಡ್ಡಿ.—ಸ್ವಾಮಿ, ಮಾನ್ಯ ಮಂತ್ರಿಯವರು ಬೇಡ್ತಿ ಯೋಜನೆ ಬಗ್ಗೆ ಹೇಳಲಿಲ್ಲ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಎಷ್ಟು ಆದಾಯ ಬಂದಿದೆ ಎನ್ನುವದನ್ನು ಹೇಳಲಿಲ್ಲ. ಯಲಹಂಕ, ಗ್ಯಾಸ್ ಟರ್ಬೈನ್ ಕಾರ್ಖಾನೆ ಬಗ್ಗೆ ಹೇಳಿಲ್ಲ. ರಾಮಗುಂಡಂ ಮತ್ತು ಕಲ್ಪಾಕಂ ಅಣು ವಿದ್ಯುತ್ ಕೇಂದ್ರದಿಂದ ನಮಗೆ ಬರತಕ್ಕಂಥ ವಿದ್ಯುತ್ ಎಷ್ಟು ಎಂಬುದನ್ನು ಮಾನ್ಯ ಮಂತ್ರಿಗಳವರು ಹೇಳಲಿಲ್ಲ.

ಶ್ರೀ ಜಿ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೆ, ಕಲ್ಪಾಕಂ ಮತ್ತು ರಾಮಗುಂಡಂಗೆ ಸಂಬಂಧ ಪಟ್ಟಂತೆ ೨೫೦ ಕಿ. ಮೀ. ಲೈನ್ ಹಾಕಿದ್ದಾರೆ. ಪ್ರತಿ ತಿಂಗಳು ನಾಲ್ಕು, ಐದು ಕಿ. ಮೀ. ನಂತೆ ಲೈನು ಹಾಕುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ ಒಂದು ಕೆಲಸವನ್ನು ಬೇಗ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎಚ್. ಅಶ್ವಥರೆಡ್ಡಿ.—ಮಾನ್ಯ ಮಂತ್ರಿಗಳು ಬೇಡ್ತಿ ಯೋಜನೆಯ ಬಗ್ಗೆ ಏನೂ ಹೇಳಲಿಲ್ಲ ?

ಶ್ರೀ ಜಿ. ಎಸ್. ದೇಶಮುಖ್.—ಬೇಡ್ತಿ ಯೋಜನೆಯ ಬಗ್ಗೆ ವಾದವಿವಾದಗಳಿವೆ, ಅದರ ಬಗ್ಗೆ ಇನ್ನೂ ಏನೂ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಜಿ. ಎಚ್. ಅಶ್ವಥರೆಡ್ಡಿ.—ಬೇಡ್ತಿ ಯೋಜನೆಯ ಬಗ್ಗೆ ತಜ್ಞರ ಸಮಿತಿಯನ್ನು ನೇಮಕ ಮಾಡಿ ಮೂರು ವರ್ಷಗಳಾಗಿದೆ, ಅದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಜೆ. ಎಚ್. ಪಟೇಲ್.—ಬೇಡ್ತಿ ಯೋಜನೆಯು ಮಾನ್ಯ ಅಶ್ವತ್ಥರೆಡ್ಡಿಯವರ ಕಾಲದಿಂದಲೂ ತಜ್ಞರ ಅಭಿಪ್ರಾಯದಲ್ಲಿದೆ. ಈಗ ಕಳೆದ ವರ್ಷದಿಂದ 'ಕೈಗಾ' ಅಣು ವಿದ್ಯುತ್ ಸ್ಥಾವರ ಮಾಡಬೇಕೇ, ಬೇಡ್ತಿ ಯೋಜನೆಯನ್ನು ಮುಂದುವರಿಸಬೇಕೇ ಎನ್ನುವ ಬಗ್ಗೆ ವಾದವಿವಾದಗಳು ನಡೆಯುತ್ತಿವೆ. ಬೇಡ್ತಿ ಯೋಜನೆಗೆ ಈಗಾಗಲೇ ಹಣವನ್ನು ಖರ್ಚುಮಾಡಿದ್ದೇವೆ. ವಿದ್ಯುತ್ ಉತ್ಪಾದನೆಯ ದೃಷ್ಟಿಯಿಂದ ಬೇಡ್ತಿ ಯೋಜನೆ ಉತ್ತಮವಾದ ಯೋಜನೆಯಾಗಿದೆ. ಈ ಯೋಜನೆಗೆ ಜಿಲ್ಲೆಯ ಜನರು ಪರಿಸರ ನೈಸರ್ಗಿಕ ಸಂಪತ್ತು ನಾಶವಾಗುತ್ತದೆಂದು ಜನರು ಸಾಕಷ್ಟು ವಿರೋಧ ಮಾಡಿರುವುದರಿಂದ ನಾವು ಈ ಯೋಜನೆಯನ್ನು ಪುನರ್ ಯೋಜನೆ ಮಾಡುವ ದೃಷ್ಟಿಯಿಂದ ತಜ್ಞರಿಗೆ ಕೆಲಸವನ್ನು ಕೊಟ್ಟಿದ್ದೇವೆ. ಈಗ ಕಾರವಾರ ಜಿಲ್ಲೆಯಲ್ಲಿ 'ಕೈಗಾ' ಅಣುಸ್ಥಾವರ ವಿದ್ಯುತ್ ಕೇಂದ್ರ ಸ್ಥಾಪನೆ ಮಾಡುವುದರಿಂದ ೨ ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಅನುಕೂಲವಿದೆಯೆಂದು—ಈಗಾಗಲೇ ಅದರ ಸರ್ವೆ ಕೆಲಸ ಮಾಡುತ್ತಿರುವುದರಿಂದ ಯಾವುದನ್ನು ಮುಂದುವರಿಸಬೇಕು ಎನ್ನುವ ಬಗ್ಗೆ ಫೈನಲ್ ಆಗಿ ಈಗಲೇ ಯಾವುದನ್ನು ಹೇಳುವುದಕ್ಕಾಗುವುದಿಲ್ಲ. ತಜ್ಞರ ವರದಿ ಬಂದ ಮೇಲೆ ಅದನ್ನು ಪ್ರಕಟ ಮಾಡುತ್ತೇವೆ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ತಜ್ಞರ ವರದಿ ಈಗಾಗಲೇ ಸಿದ್ಧವಾಗಿದೆ. ಅದನ್ನು ಕೇಳುವುದಕ್ಕೆ ನೀವು ತಯಾರಾಗಿಲ್ಲ.

ಶ್ರೀ ಜೆ. ಎಚ್. ಪಟೇಲ್.—ತಜ್ಞರು ವರದಿಯನ್ನು ಮಾನ್ಯ ಅಶ್ವತ್ಥರೆಡ್ಡಿಯವರಿಗೆ ಕೊಟ್ಟಿರಬಹುದು ನಮಗೆ ಇನ್ನೂ ಕೊಟ್ಟಿಲ್ಲ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಪಟೇಲ್‌ರವರು ವ್ಯಂಗ್ಯವಾಗಿ ಮಾತನಾಡುವುದಕ್ಕೆ ಹೆಸರುವಾಸಿಯಾಗಿದ್ದಾರೆ. ಮೂರು ವರ್ಷಗಳಿಂದ ತಜ್ಞರು ಏನು ಮಾಡುತ್ತಿದ್ದಾರೆ ? ಮಲಗಿಕೊಂಡಿರುವವರನ್ನು ಅವರು ಸಾಯುವತನಕ ಮಲಗಿಕೊಳ್ಳಿ ಎಂದು ಹೇಳುವುದಿಲ್ಲ. ವಿಷಯವನ್ನು ಸರಿಯಾಗಿ ಹೇಳಿ.

ಶ್ರೀ ಜೆ. ಎಚ್. ಪಟೇಲ್.—ವರದಿ ಬಂದ ಮೇಲೆ ಅದನ್ನು ಸಂಪೂರ್ಣ ಪರಿಶೀಲನೆ ಮಾಡಿ ತೀರ್ಮಾನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ ನಾನು ಅನೇಕ ಪ್ರಶ್ನೆಗಳನ್ನು ಕೇಳಬೇಕೆಂದು ಇದ್ದೆ, ಆದರೆ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಮಂತ್ರಿಗಳು ಎಲ್ಲವನ್ನು ಓದಿದ್ದಾರೆ ಆದ್ದರಿಂದ ಪ್ರಶ್ನೆಯನ್ನು ಕೇಳುವ ಪ್ರಶ್ನೆಯೇ ಬರುವುದಿಲ್ಲ. ಒಂದು ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಕೊಟ್ಟಿದ್ದಾರೆ. ಮಂತ್ರಿಗಳ ಆಶ್ವಾಸನೆ ಏನೆಂದರೆ ವಿದ್ಯುಚ್ಛಕ್ತಿ ಮಂಡಲಿ

ಮಂತ್ರಿ ಕರ್ನಾಟಕ ಪವರ್ ಕಾರ್ಪೊರೇಷನ್ ಬಗ್ಗೆ ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡು ವುದಕ್ಕೆ ಸದನದ ಸಮಿತಿಯನ್ನು ನೇಮಕ ಮಾಡುತ್ತೇನೆಂದು ಹೇಳಿದ್ದಾರೆ. ಮಂತ್ರಿಗಳು ಆಶ್ವಾಸನೆ ಯನ್ನು ಮಾರ್ಚಿ ತಿಂಗಳಿನಲ್ಲಿ ಕೊಟ್ಟಿದ್ದಾರೆ, ಅವರು ಕೊಟ್ಟಂತಹ ಆಶ್ವಾಸನೆ ಕಾರ್ಯಗತವಾಗಿದೆಯೋ ಇಲ್ಲ ಹಾಗೆಯೇ ಉಳಿದಿದೆಯೋ ಗೊತ್ತಿಲ್ಲ.

ಶ್ರೀ ಜೆ. ಎಸ್. ದೇಶಮುಖ್.—ಆಶ್ವಾಸನೆಯನ್ನು ಕೊಟ್ಟಿದ್ದು ನಿಜ, ಈಗಾಗಲೇ ಆ ಬಗ್ಗೆ ಕಮಿಟಿಯನ್ನು ನೇಮಕ ಮಾಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ ?

ಶ್ರೀ ಜೆ. ಎಸ್. ದೇಶಮುಖ್.—ಈ ಮನೆಯ ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ಸದಸ್ಯರು ಮತ್ತು ಮೇಲ್ಮನೆಯ ಸದಸ್ಯರು ಕಮಿಟಿಯಲ್ಲಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕಮಿಟಿಯನ್ನು ಮಾಡಿದ್ದರೆ, ಅದನ್ನು ಅನೌನ್ಸ್ ಮಾಡಿದ್ದೀರಾ ?

ಶ್ರೀ ಜೆ. ಎಸ್. ದೇಶಮುಖ್.—ಕಮಿಟಿ ಮಾಡಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ನೆನೆಗುಂದಿಯಲ್ಲಿರುವ ಬೇಡ್ತಿ ಯೋಜನೆಯ ಬಗ್ಗೆ ಮಾನ್ಯ ಪಟೇಲ್‌ರವರು ವಿವರವಾಗಿ ಹೇಳಿದ್ದಾರೆ. ಅವರೇ ಒಪ್ಪಿಕೊಂಡಿದ್ದಾರೆ ಬೇಡ್ತಿ ಯೋಜನೆ ಕಾರ್ಯಗತ ವಾದರೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂದು ಹೇಳಿದ್ದಾರೆ. ಆ ಜಿಲ್ಲೆಯ ಜನರು ಪರಿಸರ ಮಾಲಿನ್ಯದ ಬಗ್ಗೆ ಮತ್ತು ಕೆಲವು ಜನರ ತೋಟ ವಗೈರೆ ಹೋಗುತ್ತದೆಂದು ಬೇಡ್ತಿ ಯೋಜನೆಗೆ ವಿರೋಧ ಇದೆಯೆಂದು ಸಹ ಹೇಳಿದ್ದಾರೆ. ಅದೇ ರೀತಿ 'ಕೈಗಾ' ಅಣು ವಿದ್ಯುತ್ ಕೇಂದ್ರ ಸ್ಥಾಪನೆಯಾದರೆ ೨ ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಹೇಳಿದ್ದಾರೆ. ಬೇಡ್ತಿ ಯೋಜನೆಯ ಖರ್ಚಿನ ವಿವರ ಸರ್ಕಾರದ ಮುಂದಿದೆ. ಅಲ್ಲಿ ಕೈಗಾ ಅಣು ವಿದ್ಯುತ್ ಕೇಂದ್ರ ಬಂದರೆ ಎಷ್ಟು ಖರ್ಚು ಬರುತ್ತದೆ ? ಬೇಡ್ತಿ ಜಲವಿದ್ಯುತ್ ಕೇಂದ್ರ ಸ್ಥಾಪನೆ ಮಾಡಿದರೆ ಎಷ್ಟು ಖರ್ಚು ಬರು ತ್ತದೆ ? ಎಂದು ಸರ್ಕಾರಕ್ಕೆ ಗೊತ್ತಿರಬಹುದು. ಅಣು ವಿದ್ಯುತ್ ಕೇಂದ್ರ ಕೈಗಾದಲ್ಲಿ ಸ್ಥಾಪನೆ ಮಾಡು ವುದರಿಂದ ಎಷ್ಟು ಪ್ರಯೋಜನವಾಗುತ್ತದೆ ಮತ್ತು ಅದರ ಆಯುಸ್ಸು ಎಷ್ಟು ? ಅದನ್ನು ವಿಚಾರ ಮಾಡ ಬೇಕಾಗುತ್ತದೆ. ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡಿದರೆ ನಿರಂತರವಾಗಿ ಮಳೆ ಬಂದಾಗ ಲೆಲ್ಲಾ ವಿದ್ಯುತ್ ಉತ್ಪಾದನೆ ಮಾಡಿ ಸರಬರಾಜು ಮಾಡಲಿಕ್ಕೆ ಬರುತ್ತದೆ ಸರ್ಕಾರ ಇದರ ಬಗ್ಗೆ ಪರಿ ಶೀಲನೆ ಮಾಡಬೇಕಾಗುತ್ತದೆ. ಕೈಗಾ ಅಣು ವಿದ್ಯುತ್ ಕೇಂದ್ರ ಸ್ಥಾಪನೆಯ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಜನ ಎಚ್ಚೆತ್ತಿದ್ದಾರೆ. ಅದರ ಆಯುಸ್ಸು ೨೫ ವರ್ಷ ಮಾತ್ರ ಕೈಗಾ ಅಣು ವಿದ್ಯುತ್ ಕೇಂದ್ರ ಸ್ಥಾಪನೆಯಾದ ೧೦ ವರ್ಷದ ಮೇಲೆ ೨೫ ವರ್ಷಗಳ ಕಾಲ ವಿದ್ಯುತ್ ಉತ್ಪಾದನೆ ಮಾಡತಕ್ಕ ಕೇಂದ್ರದಿಂದ ವಿಕಿರಣ ಆಗತಕ್ಕದ್ದು ಇದೆ.

ಛೇರ್ಮನ್.—ಮಾನ್ಯ ಸದಸ್ಯರು ಕ್ಲಾರಿಫಿಕೇಶನ್ ಇದ್ದರೆ ಕೇಳಿ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರ ಪ್ರಶ್ನೆ ಏನು ? ಕೈಗಾ ಬೇಡವೆಂದು ಹೇಳುತ್ತಿ ದ್ದೀರಾ ? ಬೇಡ್ತಿ ಯೋಜನೆಯನ್ನು ನಿಲ್ಲಿಸೋಣವೆಂದು ಹೇಳುತ್ತಿದ್ದೀರಾ ? ಯಾವುದೂ ಗೊತ್ತಾಗಲಿಲ್ಲ ಬೇಡ್ತಿ ಯೋಜನೆಯ ಬಗ್ಗೆ ಸರ್ಕಾರ ಪರಿಣತರ ಅಭಿಪ್ರಾಯಕ್ಕೆ ಕಾಯುತ್ತಿದೆ. ನಮ್ಮ ಒತ್ತಾಯದ ಮೇರೆಗೆ ಕೇಂದ್ರ ಸರ್ಕಾರ ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡುತ್ತಿದ್ದಾರೆ. ಅಣು ವಿಕಿರಣ ಆಗಿ ಅದರಿಂದ ಮುಂದೆ ದೊಡ್ಡ ಅಪಾಯ ಆಗಬಹುದು ಎನ್ನುವ ವಿಜ್ಞಾನವನ್ನು ಹೇಳುತ್ತಿ ದ್ದಾರೆ. ಈಗ ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಒಪ್ಪಿಕೊಳ್ಳೋಣವೇ ಅಥವಾ ಬೇಡವೆ ಅದನ್ನು ಹೇಳಿ.

ಶ್ರೀ ಆರ್. ಎನ್. ನಾಯಕ್.—ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಒಪ್ಪಿಕೊಳ್ಳಬಾರದು. ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಯೋಜನೆಯನ್ನು ಕಾರ್ಯಗತ ಮಾಡಿದರೆ ಅದರಿಂದ ಸಾಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ. ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಬೇರೆಯವರು ಸ್ವಾಗತ ಮಾಡುತ್ತಿ ದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಯಾವುದೇ ಭಾಗಕ್ಕೆ ಸೇರಿದವರಾಗಿದ್ದರೂ ಅದು ನಮಗೆ ಬೇಕಾ ಗಿಲ್ಲ. ಬೇಡ್ತಿ ಯೋಜನೆಗೆ ಈಗಾಗಲೇ ಸಾಕಷ್ಟು ಹಣವನ್ನು ಖರ್ಚುಮಾಡಲಾಗಿದೆ. ಬೇಡ್ತಿ ಯೋಜನೆ

ಯಿಂದ ಕಡಿಮೆ ಭೂಮಿ ಮುಳುಗಡೆಯಾಗುತ್ತದೆ. ನಾವು ಯಾವುದೇ ಪಕ್ಷಕ್ಕೆ ಸೇರಿರಬಹುದು ಅದು ಮುಖ್ಯವಲ್ಲ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರ ಸಲಹೆಗಳು ಎರಡು ಇವೆ. ಕೈಗಾ ಅಣು ವಿದ್ಯುತ್ ಸ್ಥಾವರವನ್ನು ಕೈಗೆತ್ತಿಕೊಳ್ಳದೆ, ಬೇಡ್ತಿ ಯೋಜನೆಯನ್ನು ಕೈಗೆತ್ತಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅವರ ಸಲಹೆಯನ್ನು ಯೋಚನೆ ಮಾಡುತ್ತಿದ್ದೇವೆ. ಎರಡು ಸಲಹೆಗಳನ್ನು ಯೋಚನೆ ಮಾಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಖರ್ಚಿನ ಬಗ್ಗೆ ನಮಗೆ ಹೇಳಿದರೆ ಅನುಕೂಲವಾಗುತ್ತದೆ. ಬೇಡ್ತಿ ಯೋಜನೆಯಲ್ಲಿ ತಯಾರಾದರೆ ಒಂದು ಯೂನಿಟ್ ಪವರ್‌ಗೆ ಎಷ್ಟು ಖರ್ಚು ಬರುತ್ತದೆ ? ಕೈಗಾ ಅಣು ವಿದ್ಯುತ್ ಕೇಂದ್ರದಲ್ಲಿ ಉತ್ಪತ್ತಿಯಾದ ಒಂದು ಯೂನಿಟ್ ಪವರ್‌ಗೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಕೈಗಾ ಅಣು ವಿದ್ಯುತ್ ಕೇಂದ್ರ ಇದು ಕೇಂದ್ರಸರ್ಕಾರದವರ ಯೋಜನೆ. ೨ಸಾವಿರ ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡತಕ್ಕ ಯೋಜನೆ. ಜಲ ವಿದ್ಯುತ್ ಕೇಂದ್ರದ ಖರ್ಚು ಕಡಿಮೆ ಇರುತ್ತದೆ. ಥರ್ಮಲ್ ಪವರ್ ಕಾಸ್ಟ್ ಒಂದು ಮೆಗಾವಾಟ್‌ಗೆ ೧ ಕೋಟಿ ರೂಪಾಯಿಗಿಂತ ಜಾಸ್ತಿಯಾಗುತ್ತದೆ. ೨ ಸಾವಿರ ಮೆಗಾವಾಟ್ ವಿದ್ಯುತ್ ಅನ್ನು ತಯಾರು ಮಾಡತಕ್ಕ ಕೇಂದ್ರಕ್ಕೆ ೨ ಸಾವಿರ ಕೋಟಿ ರೂಪಾಯಿಗಿಂತ ಜಾಸ್ತಿ ಖರ್ಚು ಬರಬಹುದು. ಇದು ಕೇಂದ್ರಸರ್ಕಾರದ ಯೋಜನೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಬೇಡ್ತಿ ಯೋಜನೆ ಬಗ್ಗೆ ತಜ್ಞರ ಅಭಿಪ್ರಾಯ ಬಂದ ಮೇಲೆ ಕೈಗೆತ್ತಿಕೊಳ್ಳುತ್ತೇವೆ. ಕಾರವಾರ ಜಿಲ್ಲೆಯ ಜನರು ಅದನ್ನು ಮಾಡಬೇಡಿ ತೋಟಗಳು ಹೋಗುತ್ತವೆ ನೈಸರ್ಗಿಕ ಸಂಪತ್ತು ಹಾಳಾಗುತ್ತದೆಂದು ನಿಲ್ಲಿಸಿದರು. ಸರ್ಕಾರ ಅದನ್ನು ಕೈಬಿಟ್ಟಿಲ್ಲ. ಮಾನ್ಯಸದಸ್ಯರಾದ ನಾಯಕರು ಅದನ್ನು ತೆಗೆದುಕೊಳ್ಳಿ ಎಂದು ಹೇಳಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದು, ಅವರು ಕಾರವಾರ ಜಿಲ್ಲೆಯವರು, ಅವರ ಅಭಿಪ್ರಾಯದ ಪ್ರಕಾರ ಅದು ಒಳ್ಳೆಯದು. ಇವತ್ತು ಪರಿಸರ ಮತ್ತು ನೈಸರ್ಗಿಕ ಸಂಪತ್ತು ಉಳಿಸಿಕೊಳ್ಳಬೇಕು. ಬೇಡ್ತಿ ಯೋಜನೆಯನ್ನು ಬಿಟ್ಟರೆ ಏನಾಗುತ್ತದೆ? ತೆಗೆದುಕೊಂಡರೆ ಏನಾಗುತ್ತದೆ? ಎಂಬುದರ ಬಗ್ಗೆ ತಜ್ಞರ ಅಭಿಪ್ರಾಯ ಬಂದ ಕೂಡಲೇ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ, ಇದಿನಬ್ಬ.—ಭೂಗರ್ಭ ಮತ್ತು ಗಣಿ ಇಲಾಖೆಯವರು ಬಂಡೆಕಲ್ಲು ಹೊಡೆಯಲು ಲೈಸೆನ್ಸ್ ಕೊಡುವಾಗ ಒಬ್ಬರಿಗೆ ಕೊಡುತ್ತಿದ್ದಾರೆ ಇದರಿಂದ ಬಡ ಜನರಿಗೆ ತೊಂದರೆಯಾಗುತ್ತಿದೆ, ದಯಮಾಡಿ ಒಬ್ಬರಿಗೆ ಲೈಸೆನ್ಸ್ ಕೊಡುವುದನ್ನು ತಪ್ಪಿಸಬೇಕು. ಉಳ್ಳಾಳದ ಹತ್ತಿರ ವಿದ್ಯುತ್ ಸಬ್ ಸ್ಟೇಶನ್ ಮಾಡಿದರೆ ಆ ಭಾಗದ ಜನರಿಗೆ ಮತ್ತು ಕೇರಳದವರಿಗೆ ಹೆಚ್ಚಿನ ಉಪಕಾರವಾಗುತ್ತದೆ. ಸಬ್ ಸ್ಟೇಶನ್ ಮಾಡಿದರೆ ವಿದ್ಯುತ್‌ನ ಕಣ್ಣುಮುಚ್ಚಾಲೆ ಆಟ ನಿಲ್ಲುತ್ತದೆ.

ಶ್ರೀ ಜೆ.ಎಸ್. ದೇಶಮುಖ್.—ಮಾನ್ಯಸದಸ್ಯರು ಕಲ್ಲುಬಂಡೆ ಹೊಡೆಯಲು ಕೊಡತಕ್ಕ ಲೈಸೆನ್ಸ್ ಒಬ್ಬರಿಗೆ ಕೊಡಲಾಗುತ್ತಿದೆ ಆದರಿಂದ ಬಡ ಜನರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಬಡ ಜನರನ್ನೆಲ್ಲಾ ಸೇರಿಸಿಕೊಂಡು ಒಂದು ಕೋ ಆಪರೇಟಿವ್ ಸೊಸೈಟಿ ಮಾಡಿದರೆ ಅವರಿಗೆ ಲೈಸೆನ್ಸ್ ಕೊಡುತ್ತೇವೆ.

೫–೩೦ ಪಿ.ಎಂ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ವಿದ್ಯುಚ್ಛಕ್ತಿ ಲೋಡ್ ಶೆಡ್ಡಿಂಗ್‌ನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಉದ್ದಿಮೆಗಳನ್ನು ಸ್ಥಾಪನೆಮಾಡಬೇಕು, ಅವುಗಳಿಗೆ ಉತ್ತೇಜನ ಕೊಡಬೇಕೆಂಬ ಒಂದು ಧೋರಣೆಯನ್ನೂ ಕೂಡ ಈ ಸರ್ಕಾರ ಹಾಕಿಕೊಂಡಿದೆ. ಈ ಒಂದು ಆಧಾರದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿಯಾಗಿ ವಿದ್ಯುಚ್ಛಕ್ತಿ ಲೋಡ್ ಶೆಡ್ಡಿಂಗ್‌ನ್ನು ಹಾಕುತ್ತಿದ್ದೀರಿ? ಇದರಿಂದ ಸಣ್ಣ ಉದ್ದಿಮೆದಾರರಿಗೂ ತೊಂದರೆಯಾಗುತ್ತಿದೆ. ಜೊತೆಗೆ ಸಾಗುವಳಿ ಮಾಡುತ್ತಿರತಕ್ಕಂತಹ ರೈತರು, ಬೇಸಾಯದ ಸಮಯದಲ್ಲಿ ವಿದ್ಯುಚ್ಛಕ್ತಿ ಲೋಡ್ ಶೆಡ್ಡಿಂಗ್‌ನಿಂದ ಅವರ ವ್ಯವಸಾಯಕ್ಕೂ ತುಂಬಾ ತೊಂದರೆಯಾಗುತ್ತಿದೆ. ಏಕೆಂದರೆ ವ್ಯವಸಾಯಕ್ಕೆ ಸಂಬಂಧ

ಪಟ್ಟಂತೆ ೫ ಎಚ್.ಪಿ. ಮೋಟಾರನ್ನು ಇಟ್ಟುಕೊಂಡಿರುತ್ತಾರೆ ನೀರನ್ನು ಮೇಲೆತ್ತುವ ಸಲುವಾಗಿ. ಆದರೆ ಈ ರೀತಿಯ ರೋಡ್ ಶೆಡ್ಡಿಂಗ್‌ನಿಂದ ಅವರು ೧೦ ಎಚ್. ಪಿ. ಮೋಟಾರನ್ನು ಇಟ್ಟುಕೊಳ್ಳಬೇಕಾಗಿ ಬರುತ್ತದೆ. ಇದನ್ನು ತಡೆ ಹಿಡಿಯುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಸದಸ್ಯರು ಗ್ರಾಮಾಂತರ ಪ್ರದೇಶದಲ್ಲಿರುವ ವಿದ್ಯುತ್ ಲೋಡ್ ಶೆಡ್ಡಿಂಗ್ ಬಗ್ಗೆ ಹೇಳಿದ್ದಾರೆ. ಕಳೆದ ಆಗಸ್ಟ್ ೧೫ನೇ ತಾರೀಕಿನಿಂದ ಗ್ರಾಮಾಂತರ ಪ್ರದೇಶದಲ್ಲಿದ್ದಂತಹ ವಿದ್ಯುಚ್ಛಕ್ತಿ ಲೋಡ್ ಶೆಡ್ಡಿಂಗ್‌ನ್ನು ಸಂಪೂರ್ಣವಾಗಿ ತೆಗೆದುಬಿಟ್ಟಿದ್ದೇವೆ.

ಶ್ರೀ ಪ್ರಥಾಪಚಂದ್ರ ಶೆಟ್ಟಿ.—ಮಾನ್ಯ ಸಚಿವರು ಆಗಸ್ಟ್ ತಿಂಗಳು ಹಾಗೂ ಸೆಪ್ಟೆಂಬರ್ ತಿಂಗಳ ಪರಿಸ್ಥಿತಿಯನ್ನು ಗಣನೆಯಲ್ಲಿಟ್ಟುಕೊಂಡು ಹೇಳಬಾರದು. ಸಾಮಾನ್ಯವಾಗಿ ಈ ರೀತಿಯ ತೊಂದರೆಗೆ ತಮ್ಮ ಧೋರಣೆ ಏನು ಎಂಬುದನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಅದನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಕೆ ವಿ. ರವೀಂದ್ರನಾಥ್ ಬಾಬು —ಗ್ರಾಮಾಂತರ ಪ್ರದೇಶಗಳಲ್ಲಿ ಏತಕ್ಕಾಗಿ ಸೌರ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವಂತಹ ವ್ಯವಸ್ಥೆಯನ್ನು ಜಾರಿಗೆ ತರಬಾರದು? ಬರೋಡದಲ್ಲಿ ಖಾಸಗಿ ಕಂಪನಿಯವರು ಒಂದು ಹಳ್ಳಿಯನ್ನು ದತ್ತು ತೆಗೆದುಕೊಂಡು, ಅಲ್ಲಿ ಸೌರ ಶಕ್ತಿಯ ಜನರೇಟಿಂಗ್ ಸ್ಟೇಷನ್‌ನ್ನು ತೆಗೆದು, ಅದರಿಂದ ವಾಟರ್ ಹೀಟಿಂಗ್ ಇರಿಗೇಷನ್, ವಾಟರ್ ಸಪ್ಲೈ, ಈ ರೀತಿ ಪ್ರತಿಯೊಂದು ಸೌಲಭ್ಯವನ್ನು ಈ ಒಂದು ಸೌರ ಶಕ್ತಿಯಿಂದ ಮಾಡುತ್ತಿದ್ದಾರೆ. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಕೂಡ ಬಹಳ ಕಡಿಮೆ. ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲೂ ಈ ರೀತಿಯ ಯೋಜನೆಯನ್ನು ಏತಕ್ಕಾಗಿ ಪ್ರಾರಂಭ ಮಾಡಬಾರದು ? ಹೊಸದಾಗಿ ಡ್ಯಾಮ್‌ಗಳನ್ನು ಕಟ್ಟಿ ಅದರಿಂದ ವಿದ್ಯುಚ್ಛಕ್ತಿಯನ್ನು ತಯಾರು ಮಾಡುತ್ತೇವೆಂದರೂ, ಡ್ಯಾಂ ಬಹಳ ದಿವಸ ಇರುವುದಿಲ್ಲ. ಅದೂ ಕೂಡ ಮುಚ್ಚಿ ಹೋಗುತ್ತದೆ. ವಾಟರ್ ಸ್ಟೋರೇಜ್ ಕೆಪಾಸಿಟಿ ಕೂಟ ಬಹಳ ಕಡಿಮೆಯಾಗಿ ಬಿಡುತ್ತದೆ. ನಮ್ಮ ಭಾಗದಲ್ಲಿರುವ ತುಂಗಭದ್ರ ಜಲಾಶಯದಲ್ಲಿ ಮೊದಲು ಒಂದು ಸಾರಿ ತುಂಬಿದರೆ ವರ್ಷವೆಲ್ಲಾ ಇರುತ್ತಿತ್ತು. ಆದರೆ ಈಗ ಅದರ [illegible]ದಷ್ಟು ಹೂಳಿನಿಂದ ತುಂಬಿ ಹೋಗಿದ್ದು, ಮಳೆ ಬಂದಾಗ ತುಂಬಿದರೂ ೬ ತಿಂಗಳು ನೀರು ಇರುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಸನ್ಮಾನ್ಯ ಸದಸ್ಯರ ಸಲಹೆಯನ್ನು ನಮ್ಮ ಸರ್ಕಾರ ಬಹಳ ವರ್ಷಗಳ ಹಿಂದಿನಿಂದಲೂ ಇದನ್ನು ಪರಿಗಣಿಸಲಾಗುತ್ತಿದೆ. ಸೌರ ಶಕ್ತಿಯನ್ನು ಉಪಯೋಗ ಮಾಡಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ತಾಂತ್ರಿಕತೆಯಲ್ಲಿ ಜಗತ್ತಿನಲ್ಲೇ ಬಹಳ ಸಂಶೋಧನೆ ನಡೆಯುತ್ತಿದೆ. ಆ ಸಂಶೋಧನೆಯ ಆಧಾರದ ಮೇಲೆ ನಮ್ಮ ರಾಷ್ಟ್ರದಲ್ಲೂ ಸೌರ ಶಕ್ತಿಯನ್ನು ಬಳಸುವ ರೀತಿಯಲ್ಲಿ ಒಂದು ಸಣ್ಣ ಡೆಮಾನ್‌ಸ್ಟ್ರೇಷನ್ ಮಾತ್ರ ಆಗಿದೆ. ನನ್ನ ಸ್ನೇಹಿತರೊಬ್ಬರು ಸೌರ ಶಕ್ತಿಯಿಂದ ಅನ್ನ ಮಾಡುವುದಕ್ಕೆ ಒಂದು ಪಾತ್ರೆಯನ್ನು ಕಳುಹಿಸಿದ್ದರು, ಆದರೆ ಆವತ್ತು ಹಗಲಲ್ಲಿ ಸೂರ್ಯನ ಬಿಸಿಲು ಬರಲೇ ಇಲ್ಲ. ಅನ್ನ ಆಗಲೇ ಇಲ್ಲ. ಸೌರ ಶಕ್ತಿಯನ್ನು ಬಳಸತಕ್ಕ ತಾಂತ್ರಿಕತೆ ಇನ್ನೂ ಅಭಿವೃದ್ಧಿಯಾಗಬೇಕು. ಆ ಸಲಹೆ ಒಳ್ಳೆಯದು. ಸೌರ ಶಕ್ತಿಯನ್ನು ಬಳಸಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ಸ್ಥಿತಿಗೆ ನಾವು ಇನ್ನೂ ಬಂದಿಲ್ಲ. ಅದನ್ನು ಬಳಸುವುದಾದರೆ, ನಮ್ಮಲ್ಲಿರತಕ್ಕ ನೈಸರ್ಗಿಕ ಸಂಪತ್ತು ಉಳಿಯುತ್ತದೆ, ಪರಿಸರ ಮಾಲಿನ್ಯದ ಪ್ರಶ್ನೆ ಕೂಡ ಬರುವುದಿಲ್ಲ. ಇದರಿಂದ ಹಲವಾರು ಉಪಯೋಗ ಇದೆ. ಆದರೆ ಇದು ಇನ್ನೂ ಡೆಮಾನ್‌ಸ್ಟ್ರೇಷನ್ ಆಗಿಯೇ ಉಳಿದಿದೆ. ಬಹಳ ದೊಡ್ಡ ಕಾರ್ಖಾನೆಗಳಲ್ಲಿ ಅದನ್ನು ಉಪಯೋಗ ಮಾಡುವಂತಹ ಮಟ್ಟಕ್ಕೆ ಇನ್ನೂ ಬಂದಿಲ್ಲ. ಮತ್ತೆ ಕರ್ನಾಟಕ ಪವರ್ ಕಾರ್ಪೊರೇಷನ್‌ನ್ನೂ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯನ್ನು ಒಟ್ಟುಗೂಡಿಸುತ್ತೀರಾ ಎಂಬುದಾಗಿ ಒಬ್ಬ ಮಾನ್ಯ ಸದಸ್ಯರು ಕೇಳಿದರು. ಇಲ್ಲ. ಆ ರೀತಿ ಮಾಡುವುದಿಲ್ಲ. ಕೆ.ಪಿ.ಸಿ. ಕೆಲಸವನ್ನು ಕೆ.ಪಿ.ಸಿ. ಮಾಡುತ್ತದೆ. ಕೆ.ಇ.ಬಿ. ಕೆಲಸವನ್ನು ಕೆ.ಇ.ಬಿ. ಮಾಡುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನಾನು ಪಾಯಿಂಟ್ ಆಫ್ ಆರ್ಡರೊಂದನ್ನು ರೈಸ್ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಯಾರು ಇದಕ್ಕೆ ಇನ್‌ಚಾರ್ಜ್ ಇದ್ದಾರೋ ಅವರು ಇದಕ್ಕೆ ಉತ್ತರವನ್ನು ಕೊಡಬೇಕು. ಆ ಕೆಲಸವನ್ನು ಅವರು ಮಾಡಿದ್ದಾರೆ. ಆದರೆ ಅದೇ ಮಂತ್ರಿಗಳು ವಿವರಣೆಗೂ ಉತ್ತರವನ್ನು ಕೊಡಬೇಕಲ್ಲ, ಆದರೆ ಈಗ ಶ್ರೀಮಾನ್ ಜೆ. ಎಚ್. ಪಟೇಲ್‌ರವರು ವಿವರಣೆಗೆ ಉತ್ತರವನ್ನು ಕೊಡುತ್ತಿದ್ದಾರೆ. ವಿದ್ಯುಚ್ಛಕ್ತಿ ಇಲಾಖೆ ಅವರಲ್ಲಿ ಇಲ್ಲ. ಅವರು ಒಂದು

ವೇಳೆ ಹೇಳುವುದಾದರೆ, ಹಿಂದಿನ ಅನುಭವದ ಆಧಾರದ ಮೇಲೆ ನಮಗೆ ಉತ್ತರವನ್ನು ಕೊಡಬೇಕು. ಈಗಿನ ಅನುಭವದಲ್ಲಿ ಅವರು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಉತ್ತರವನ್ನು ಕೊಡುವಂತೆ ತಾವು ಹೇಳಬೇಕು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರೂ ಕೂಡ ಹಿಂದೆ ಮಂತ್ರಿಯಾದ್ದಂತಹವರು ಅವರು ಅಷ್ಟು ಬೇಗ ಮರೆತುಬಿಟ್ಟರೆ ಹೇಗೆ? Why don't you refresh your memory. ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಎಲ್ಲಿದೆ? ನಮ್ಮ ಮೇಲೆ ಜಂಟಿ ಜವಾಬ್ದಾರಿ ಇದೆ. ಮಾನ್ಯ ಸದಸ್ಯರು ಒಂದು ವೇಳೆ ನಾನು ಹೇಳಿರತಕ್ಕ ಉತ್ತರಕ್ಕೂ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರಕ್ಕೂ ವ್ಯತ್ಯಾಸ ಏನಾದರೂ ಇದ್ದರೆ ಆವಾಗ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬಹುದು. ಸರ್ಕಾರದ ನೀತಿಯ ವಿಚಾರದಲ್ಲಿ ನನಗೆ ಇರುವಂತಹ ಅನುಭವದ ಮೇಲೆ ನಾನು ಉತ್ತರ ಹೇಳುತ್ತೇನೆ. ಅವರಿಗೆ ಇರುವಂತಹ ಅನುಭವದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಈಗ ನಮ್ಮಲ್ಲಿರ ತಕ್ಕಂತಹ ವ್ಯವಸ್ಥೆಯ ಆಧಾರದ ಮೇಲೆ ನಾನು ಹೇಳಿದ್ದು ಅಧಿಕೃತವಾದುದು. ಅವರು ಹೇಳಿದ್ದೂ ಅಧಿಕೃತವಾದದ್ದು.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಜೆ. ಎಚ್. ಪಟೇಲ್‌ರವರು ಉತ್ತರ ಹೇಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅವರೂ ಕೂಡ ಸಚಿವ ಸಂಪುಟದ ಸದಸ್ಯರೊಬ್ಬರು ಇದ್ದಾರೆ. ಆದರೆ ಈ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಬೇರೊಬ್ಬರು ಮಂತ್ರಿಗಳು ಇದ್ದಾಗ ಅವರೇ ಉತ್ತರವನ್ನು ಕೊಡಬೇಕು. ಅವರು ಒಂದು ವೇಳೆ ಸದನದಲ್ಲಿಲ್ಲದಿದ್ದರೆ ಆವಾಗ ಜಂಟಿ ಜವಾಬ್ದಾರಿ ಬರುತ್ತದೆ, ಆದರೆ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಸದನದಲ್ಲಿ ಹಾಜರಿದ್ದಾಗ ಹೇಗೆ ಬರುತ್ತದೆ? During the course of the discussion for Demands for Grants, the Minister incharge of the portfolio must alone reply. The Minister for Industries is replying on behalf of the Minister for Power who is very much physically present here. Does it not amount to an insult to the Minister for power sitting here?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರ ಆಕ್ಷೇಪ ಏನೆಂದರೆ, ನಾನೂ ಉತ್ತರ ಕೊಡ ಬಹುದಂತೆ. ನಾನು ಉತ್ತರ ಕೊಡುವುದಕ್ಕೆ ಅಭ್ಯಂತರ ಇಲ್ಲತಾನೆ?

ಶ್ರೀ ಬಿ. ಬಸವಲಿಂಗಪ್ಪ.—ಅವರು ಇಲ್ಲದೆ ಹೋದರೆ......

ಶ್ರೀ ಜೆ. ಎಚ್. ಪಟೇಲ್.—ಅದೇ ಕೆಲಸವನ್ನು ಮಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಜೆ. ಎಚ್. ಪಟೇಲ್ ರವರು ಪಾರ್ಲಿಮೆಂಟರಿ ಪ್ರೊಸೀಜರ್‌ಗೆ ವಿರುದ್ಧವಾದ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಏಕೆಂದರೆ ನನಗೆ ತಿಳಿದ ಮಟ್ಟಿಗೆ ಒಂದು ಇಲಾಖೆಯ ಜವಾಬ್ದಾರಿಯನ್ನು ಒಬ್ಬರಿಗೆ ಕೊಟ್ಟಮೇಲೆ, ಅದರಲ್ಲೂ ಬೇಡಿಕೆಯ ವಿಚಾರದಲ್ಲಿ ಸಂಬಂಧಪಟ್ಟವರೇ ಉತ್ತರವನ್ನು ಕೊಡಬೇಕು. ವಿವರಣೆಗೆ ಉತ್ತರವನ್ನೂ ಕೂಡ ಅವರೇ ಕೊಡಬೇಕು. ಈ ರೀತಿಯಾದ ಪ್ರೊಸೀಜರ್ ಇರುವಾಗ, ಉತ್ತರ ಕೊಟ್ಟಂತಹ ಮಂತ್ರಿಗಳು ಒಬ್ಬರಾದರೆ, ವಿವರಣೆಯನ್ನು ಕೊಡು ವಂತಹವರು ಇನ್ನೊಬ್ಬ ಮಂತ್ರಿಗಳು. ಇದು ಸರಿಯಲ್ಲ.

ಛೇರ್ಮನ್.—ಸಂಬಂಧಪಟ್ಟ ಮಂತ್ರಿಗಳೇ ಉತ್ತರ ಕೊಟ್ಟರು.

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟರಿ ಪ್ರೊಸೀಜರ್‌ನಲ್ಲಿ ಜಂಟಿ ಜವಾಬ್ದಾರಿ ಇದ್ದರೂ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ, ಆವಾಗ ಬೇರೊಬ್ಬ ಮಂತ್ರಿಗಳು ಉತ್ತರ ಹೇಳಬಹುದು. ಅವರು ಸದನದಲ್ಲಿ ಹಾಜರಿದ್ದರೂ ಬೇರೆಯವರು ಅವರ ಬದಲಿ ಉತ್ತರ ಹೇಳಬಹುದು ಅಂತ ಎಲ್ಲೂ ಇಲ್ಲ. ಇರತಕ್ಕಂತಹ ನಿಯಮಾವಳಿಗಳನ್ನು ತಾವು ತೆಗೆದು ನೋಡಿ.

ಶ್ರೀ ಜೆ. ಎಚ್. ಪಟೇಲ್.—ನೋಡಿದ್ದೇನೆ.

ಅವರಿಗೆ ಎಲ್ಲಾ ಸ್ಟೇಟ್‌ಮೆಂಟನ್ನು ಕೊಟ್ಟು ಉತ್ತರಿಸಿದ್ದೇನೆ. ರಾಜ್ಯ ಸರ್ಕಾರದ ಗಮನಕ್ಕೆ ಮತ್ತು ಸಚಿವ ಸಂಪುಟದ ಗಮನಕ್ಕೆ ಪಾಲಿಸಿ ವಿಷಯಗಳು ಬಂದಿರುತ್ತವೆ. ಎಲ್ಲರೂ ಸೇರಿ ಆಲೋಚಿ

ಸಬೇಕು. ನಾನು ನೀತಿ ನಿರೂಪಣೆಯ ಬಗ್ಗೆ ಕೆಲವು ಮಾತು ಹೇಳಿದ್ದೇನೆ. ಇಲಾಖೆಯ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸುತ್ತಾರೆ.

SRI B. BASAVALINGAPPA.—This is not a simple affair. My friend is a seasoned member. He was in Parliament. Now he is here. He was a Minister. Now also he is a Minister. I want to know whether his friend who is in charge of the Department, who is also a member of the Cabinet and who is in charge of the demand should give the reply or somebody else should give the reply on his behalf. Now he is present. He has got to reply to whatever questions put by the hon. Members of this House. Suppose he fails to understand a question and is not able to reply, then it is open to the other Members of the Cabinet to give a reply by coming to his aid. I don't dispute this position. But the point is, under the parliamentary procedure, whether or not Sri J. H. Patel, who is a Member of the Cabinet, could come to the rescue of the Minister who tried to read the replies to the discussion on the demend. I respectfully submit Mr. Speaker, that Mr. J. H. Patel cannot reply on behalf of the Minister. That is the procedure.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮನೆಯಲ್ಲಿ ಇದೇನು ಹೊಸದಾಗಿ ನಡೆಯುತ್ತಿಲ್ಲ. ಹಿಂದೆ ಸದ್ಯೋಜಾತಪ್ಪ ಅವರು ಸಾರಿಗೆ ಮಂತ್ರಿಗಳಾಗಿದ್ದರು. ಆಗ ತಾವೂ ಇದ್ದೀರಿ. ಆ ಸಂದರ್ಭದಲ್ಲಿ ಉತ್ತರ ಕೊಟ್ಟ ಉದಾಹರಣೆ ಹೇಳಿದೆ. ಬೇರೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಅವರ ಪರವಾಗಿ ಉತ್ತರ ಕೊಟ್ಟಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಕೃಷ್ಣನ್‌ರವರು ಹಿಂದಿನ ಸಭೆಯಲ್ಲಿ ಸದಸ್ಯರಾಗಿರಲಿಲ್ಲ. ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಾಗ ಅರ್ಧ ಪೋರ್ಟ್‌ಫೋಲಿಯೋವನ್ನು ಅವರೇ ಇಟ್ಟುಕೊಂಡಿದ್ದರು. ಅವರು ಡೆಲ್ಲಿಗೆ ಹೋಗುವಾಗ ನೀವೇ ಕಾರ್ಯಕ್ರಮವನ್ನು ನಡೆಸಬೇಕೆಂದು ಉಳಿದ ಮಂತ್ರಿಗಳಿಗೆ ಹೇಳಿ ಹೋದರು. ಆ ಮಂತ್ರಿಗಳು ಪೋರ್ಟ್‌ಫೋಲಿಯೋ ಇಟ್ಟುಕೊಂಡವರಲ್ಲ. ಇಲಾಖೆಯನ್ನು ನಡೆಸಿದವರಲ್ಲ. ಆ ಸಂದರ್ಭದಲ್ಲಿ ಕ್ರಿಯಾಲೋಪ ಎತ್ತಿದ್ದಕ್ಕೆ ಇವತ್ತಿನವರೆಗೆ ಉತ್ತರ ಬಂದಿಲ್ಲ. ಆದ್ದರಿಂದ, ಈ ಸಭೆಯಲ್ಲಿ ಇದು ನಡೆದುಕೊಂಡು ಬಂದಿದೆ.

(ಶ್ರೀ ಬಿ. ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ತಪ್ಪು ಮಾಡಿದ್ದರೆ ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೀರಾ ? ಆವೊತ್ತು ನಾನು ಇರಲಿಲ್ಲ ನಿಜ. ಇದ್ದರೆ ಗಲಾಟೆ ಮಾಡುತ್ತಿದ್ದೆ.

SRI B. BASAVALINGAPPA.—Now he is citing the instance of Sri Gundu Rao. If he answers in the absence of somebody, I don't mind that situation. But here the Minister is present. When he is ready to answer, should Sri J. H. Patel intervene and say that under the joint responsibility of the Government he could reply ?

ಶ್ರೀ ಜೆ. ಹೆಚ್. ಪಟೇಲ್.—ಎಲ್ಲದಕ್ಕೂ ಅವರೇ ಉತ್ತರ ಕೊಟ್ಟರು. ಕೆಲವು ಪಾಲಿಸಿ ಮ್ಯಾಟರ್ ಬಗ್ಗೆ ಉತ್ತರಿಸಲು ನನಗೆ ಹೇಳಿದರು.

ಅಧ್ಯಕ್ಷರು.—ಅವರು ಹೇಳಿದರೆ ತಪ್ಪೇನು ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ವಿದ್ಯುತ್ ಮಂತ್ರಿಗಳಿಗೆ ಒಂದು ವಿಷಯವನ್ನು ತಮ್ಮ ಮೂಲಕ ಕೇಳುತ್ತೇನೆ, ಇದು ೨ನೇ ಸಾರಿ ಕೇಳುತ್ತಿರುವ ಪ್ರಶ್ನೆಯಾಗಿದೆ. ಗೋಕಾಕ್ ವ್ಯಾಲಿ ಹತ್ತಿರ ವಿದ್ಯುತ್ ಘಟಕವನ್ನು ಸ್ಥಾಪಿಸುವುದಕ್ಕೆ ವಿಶೇಷ ಮನವಿಯನ್ನು ಸಲ್ಲಿಸಿದ್ದಾರೆ. ಅದರ ಬಗ್ಗೆ ನೇರವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ಕರ್ನಾಟಕದಲ್ಲಿ ವಿದ್ಯುತ್ ಕಡಿತ ಇದೆಯೇ ಅಥವಾ ಅದನ್ನೇನಾದರೂ ಸಂಪೂರ್ಣವಾಗಿ ತೆಗೆದುಹಾಕಿದ್ದೀರಾ ?

ಶ್ರೀ ಜೆ. ಎಸ್. ದೇಶಮುಖ್.—ಗೋಕಾಕ್ ವ್ಯಾಲಿ ವಿಷಯ ಕೇಳಿದರು. ಅದಕ್ಕೆ ಸ್ಪೆಷಲ್ ಕಮಿಟಿ ನೇಮಿಸಿದೆ. ಅದರ ವರದಿ ತರಿಸಿಕೊಡುತ್ತೇನೆಂದು ಹೇಳುತ್ತೇನೆ. ವಿದ್ಯುತ್ ಕಡಿತವನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇವರು ತೆಗೆದುಹಾಕಿದ್ದೇವೆಂದು ಹೇಳಬಹುದು. ಆದರೆ ಹಳ್ಳಿಗಾಡಿನಲ್ಲಿ ವಿದ್ಯುತ್ ಕಡಿತ ಇದ್ದೇ ಇದೆ. ೩-೬ ತಾಸು ಕಡಿತ ಮಾಡುತ್ತಿದ್ದಾರೆ. ಬರಗಾಲ ಇರುವುದರಿಂದ ತೊಂದರೆಯಾಗುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಎಸ್. ದೇಶಮುಖ್.—ಆ ರೀತಿ ಯಾವುದೇ ತಕರಾರು ಬಂದಿಲ್ಲ. ನಿರ್ದಿಷ್ಟವಾದ ದೂರು ಕೊಟ್ಟರೆ ತಕ್ಷಣ ಮೆಸೇಜ್ ಕಳುಹಿಸಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತಕ್ಕ ವರಾಹಿ ಯೋಜನೆಯಿಂದ ನಿರ್ವಸತಿರಾಗಿರುವ ರೈತರಿಗೆ ಪುನರ್ವಸತಿ ಪರಿಹಾರ ಒದಗಿಸುವ ಸಲುವಾಗಿ ಸರ್ಕಾರ ಹೈ ಪವರ್ ಕಮಿಟಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಿದ್ದೀರಾ ? ಅಥವಾ ಯಾವಾಗ ಮಾಡುತ್ತೀರಿ ?

ಶ್ರೀ ಜೆ. ಎಸ್. ದೇಶಮುಖ್.—ಈಗಾಗಲೇ ಕಮಿಟಿ ಫಾರ್ಮೇಷನ್ ಮಾಡಿದ್ದೇವೆ. ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮಿಷನರ್ ಎಲ್ಲರನ್ನು ಕೂಡಿಸಿ ಕಮಿಟಿ ಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಇದು ಬಹಳ ವರ್ಷಗಳಿಂದ ಇರತಕ್ಕ ವಿಚಾರ. ಯಾವುದೇ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಆದಾಗ ಅರಣ್ಯ ಭೂಮಿಗಳು ಹೋಗುತ್ತವೆ, ಅನೇಕರು ಜಮೀನು ಕಳೆದುಕೊಳ್ಳುತ್ತಾರೆ, ಚಕ್ರ, ವರಾಹಿ, ಸಾವೆಹಕ್ಲು ಡೈವರ್ಷನ್ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಏನು ಕಮಿಟಿ ಮಾಡಿದ್ದೀರಿ ಅವರು ಸ್ಥಳೀಯ ಶಾಸಕರ ಮತ್ತು ಆ ಪ್ರದೇಶದಲ್ಲಿರುವ ಜನರ ಕಾನ್ ಫಿಡೆನ್ಸ್ ತೆಗೆದುಕೊಳ್ಳದೆ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಹಿಂದೆ ನಾವಿದ್ದೆವು. ಈಗ ಹೊಸನಗರ, ತೀರ್ಥಹಳ್ಳಿ, ಶಿವಮೊಗ್ಗ ಸಾಗರ ಈ ನಾಲ್ಕು ತಾಲ್ಲೂಕುಗಳ ಶಾಸಕರುಗಳು ಹೈಪವರ್ ಕಮಿಟಿಯಲ್ಲಿದ್ದಾರೆ.

ಶ್ರೀ ಪಿ. ಎಸ್. ರಾಣೆ.—ಕಾಳಿ ಜಲ ವಿದ್ಯುತ್ ಯೋಜನೆಯಿಂದ ಸೂಪಾ ಡ್ಯಾಂ ನಿರ್ಮಾಣದಿಂದ ೨ನೇ ಹಂತದಲ್ಲಿ ಕೆಲವು ಹಳ್ಳಿಗಳು ಮುಳುಗಡೆಯಾಗಿವೆ. ಇಷ್ಟೇ ಅಲ್ಲ, ಸೂಪಾ ಡ್ಯಾಮಿನ ಏರಿಯಾ ವನ್ನು ಏರಿಸಿದ್ದರಿಂದ ಈ ವರ್ಷ ಸುಮಾರು ಹಳ್ಳಿಗಳು ಪೂರ್ತಿಯಾಗಿ ನೀರಿನಿಂದ ಆವೃತವಾಗಿವೆ, ಅವರಿಗೆ ಬೇರೆ ವ್ಯವಸ್ಥೆ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಕುರಿತು ಅಲ್ಲಿಯ ಜನ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಕೆ.ಪಿ.ಸಿ. ಯವರಿಗೆ ಮನವಿ ಮಾಡಿದ್ದಾರೆ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಕೆ. ಪಿ. ಸಿ. ಕಡೆ ಬೆಟ್ಟು ತೋರಿಸುತ್ತಾರೆ. ಆದ್ದರಿಂದ ಸರ್ಕಾರದವರು ಅವರಿಗೆ ಬೇಕಾದ ವ್ಯವಸ್ಥೆ ಮಾಡಲು ಏನು ಕ್ರಮ ಕೈಗೊಳ್ಳುತ್ತೀರಿ ? ಕಾರವಾರ ತಾಲ್ಲೂಕಿನ ಕೈಗಾ ಗ್ರಾಮದಲ್ಲಿ ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪಿಸುತ್ತಿದ್ದಾರೆಂದು ತಿಳಿದುಬಂದಿದೆ. ಇದರ ಸಲುವಾಗಿ ಭೂಮಿಯನ್ನು ವಶಪಡಿಸಿ ಕೊಳ್ಳಲು ಅಲ್ಲಿರತಕ್ಕ ರೈತರಿಗೆ ನೋಟೀಸುಗಳು ಬಂದಿದೆ. ಆದರೆ ನಾನು ಇಲ್ಲಿ ಸರ್ಕಾರಕ್ಕೆ ಕೇಳಿ ಕೊಳ್ಳುವುದು ಇಷ್ಟೆ. ಅಣುವಿದ್ಯುತ್ ಶಕ್ತಿ ಅಥವಾ ಸ್ಥಾವರಗಳು ಮಾನವ ಕುಲಕ್ಕೆ ವಿನಾಶಕಾರಿಯಾಗಿವೆ. ಆದ್ದರಿಂದ ಈ ಅಣು ಸ್ಥಾವರ ಸ್ಥಾಪನೆ ಆಗಬಾರದೆಂದು ಈಗಾಗಲೇ ಆ ಜಿಲ್ಲೆಯಲ್ಲಿ ಚಳುವಳಿ ಪ್ರಾರಂಭ ವಾಗಿವೆ. ಜನರ ಆಂದೋಳನ ಪ್ರಾರಂಭವಾಗಿದೆ. ಮುಖ್ಯ ಮಂತ್ರಿಗಳು ಪರಿಸರದ ಮಾಲಿನ್ಯ ಆಗುತ್ತದೆ, ಮತ್ತು ನಿಸರ್ಗದ ಸಮತೋಲನ ತಪ್ಪುತ್ತದೆಂಬ ಕಾರಣಕ್ಕಾಗಿ ಬೇಡ್ತಿ ಯೋಜನೆಯನ್ನು ವಿರೋಧಿಸಿದ್ದರು. ಆ ಮುಖ್ಯ ಮಂತ್ರಿಗಳು ಇರತಕ್ಕ ಸರ್ಕಾರ ಈ ಯೋಜನೆಯನ್ನು ವಿರೋಧಿ ಸುತ್ತದೆಯೇ ?

ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯವರೇ ಆದಂಥಾ ಕವಿಗಳು ಈ ಅಣು ಯುಗದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ತಮ್ಮ ಮುಂದೆ ಇಡುತ್ತೇನೆ. ಅದು ಈ ರೀತಿ ಇದೆ.—

"ಇಲ್ಲುಂಟು ನೋಡು ಸಖಿ ಅಣುಯುಗದ ಕೆಂಡ, ಇದರಿಂದ ಭಸ್ಮವಾಗುವುದು
ಬ್ರಹ್ಮಾಂಡ, ಇದಕೆನ್ನುವರು ಮನುಜ ಸಾಧಿಸಿದ ಪ್ರಗತಿ, ಹೇಸಿಗೆಯ ಕೆಲಸ
ಎಂದಳು ನನ್ನ ಗೆಳತಿ,"

ಈ ರೀತಿಯಾಗಿ ದಿನಕರ ದೇಸಾಯಿಯವರು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಅನ್ನುವುದನ್ನು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಇದು ಕೇಂದ್ರ ಸರ್ಕಾರದ ಒಂದು ಯೋಜನೆ. ಮೊದಲಿನಿಂದಲೂ ಸಹ ನಮ್ಮ ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ಯೋಜನೆ ಒಂದೂ ಆಗಲಿಲ್ಲ ಎಂದು ಹೇಳಿದ್ದರಿಂದ ಅವರು ಇಡೀ ದಕ್ಷಿಣ ರಾಜ್ಯಕ್ಕೆ ಸೇರಿದ ಹಾಗೆ ಸೌತ್ ಜೋನ್‌ನಲ್ಲಿ ಯಾವುದಾದರೂ ಒಂದು ರಾಜ್ಯದಲ್ಲಿ ಈ ಅಣು ಸ್ಥಾವರವನ್ನು ಕೊಡಬೇಕು ಎಂದು ಹೇಳಿದ್ದರಿಂದ, ಅವರು ನಮ್ಮ ಈ ಜಾಗವನ್ನು ಕರ್ನಾಟಕದಲ್ಲಿ ಗುರುತಿಸಿದ್ದಾರೆ. ಮಾನ್ಯ ಸದಸ್ಯರ ಚಿಂತನೆ ಕಾವ್ಯಮಯ ಇದರಲ್ಲಿ ಬರುವುದಿಲ್ಲ. ಇದರಲ್ಲಿ ಬರುವ ಹಾಗಿದ್ದರೆ ಇದನ್ನು ಕಾವ್ಯಮಯದಲ್ಲೇ ಮಾಡಬಹುದಾಗಿತ್ತು. ವಾಸ್ತವಿಕವಾಗಿ ಅವರು ಈ ಒಂದು ಯೋಜನೆಯನ್ನು ಇಲ್ಲಿ ಏನು ಪ್ರಾರಂಭ ಮಾಡುತ್ತಾರೆ, ಅದನ್ನು ನಾವು ಬೇಡ ಎಂದರೆ ಅವರು ಬೇರೆ ಕಡೆ ಮಾಡುತ್ತಾರೆ. ಈ ಜಗತ್ತಿನಲ್ಲಿ ಅಮೇರಿಕ ಮತ್ತು ರಷ್ಯಾ ದೇಶದಲ್ಲಿ ಯಾವ ಒಂದು ಅಣುಸ್ಥಾವರ ಇದೆಯೋ ಅಂಥಾ ಅಣು ಸ್ಥಾವರವನ್ನು ಕೊಡುವುದಿಲ್ಲ, ಅದಕ್ಕೆ ಬೇರೆ ಯೋಚನೆ ಮಾಡುತ್ತಿದ್ದಾರೆ, ಅದಕ್ಕೆ ಆಲ್ಟರ್‌ನೇಟೀವ್ ಆಗಿ ಕಂಡುಹಿಡಿಯುವುದು ಅನಿವಾರ್ಯವಾಗಿದೆ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಈ ಬಗ್ಗೆ ವಾದ ವಿವಾದಕ್ಕೆ ಹೋಗುವುದಿಲ್ಲ, ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರದ ಈ ಒಂದು ಯೋಜನೆಯನ್ನು ಕರ್ನಾಟಕದಲ್ಲಿ ತರಬೇಕು ಅನ್ನುವ ಪ್ರಯತ್ನ ಮಾಡುತ್ತಿದೆ. ಆದುದರಿಂದ ನಾವು ಇದನ್ನು ಸ್ವಾಗಿತಿಸುತ್ತೇವೆ. ಆದುದರಿಂದ ಇದರಲ್ಲಿ ಪರಿಸರ ಮುಖ್ಯವಾಗಿ ಇದರ ರೇಡಿಯೇಷನ್ ಪ್ರಾಬ್ಲಮ್ಸ್ ಆಗಲಿ ಬಂದರೆ ಅದನ್ನು ಬೇರೆ ಸಂದರ್ಭದಲ್ಲಿ ಆಲೋಚನೆ ಮಾಡಬಹುದು.

ಇನ್ನು ಬೇಡ್ತಿ ಯೋಜನೆ ಬಗ್ಗೆ ಹೇಳುವುದಾದರೆ ಆ ಜಿಲ್ಲೆಯವರೇ ಇಲ್ಲಿ ನಮ್ಮ ತೋಟವೆಲ್ಲಾ ಹಾಳಾಗುತ್ತದೆ. ಇದು ಬೇಡ ಎಂದು ವಿರೋಧ ಮಾಡಿದ್ದರಿಂದ ಇದನ್ನು ನಿಲ್ಲಿಸಿದ್ದೇವೆ.

ಶ್ರೀ ಆರ್. ಎನ್. ನಾಯ್ಕ.—ವಿರೋಧಿಸಿದವರು ಯಾರು?

ಶ್ರೀ ಜೆ. ಹೆಚ್. ಪಟೇಲ್,—ಆ ಜಿಲ್ಲೆಯವರೇ?

ಶ್ರೀ ಆರ್. ಎನ್. ನಾಯ್ಕ.—ನಾವೇನು ವಿರೋಧಿಸಿಲ್ಲವಲ್ಲಾ.

ಶ್ರೀ ಜೆ. ಹೆಚ್. ಪಟೇಲ್.—ನೀವು ವಿರೋಧಿಸಿಲ್ಲ. ಬಹುತೇಕ ನಿಮ್ಮ ಜಿಲ್ಲೆಯವರೇ ಅದನ್ನು ವಿರೋಧ ಮಾಡಿದ್ದಾರೆ. ಅನೇಕ ರೈತರು ಬೇಡ್ತಿ ಯೋಜನೆ ಪ್ರಾರಂಭ ಮಾಡಿ ಎಂದು ಹೇಳಿದರು ಕೆಲವರು ಅದಕ್ಕೆ ಸಪೋರ್ಟ್‌ನ್ನೂ ಮಾಡಿದರು. ಇನ್ನು ಕೆಲವರು ವಿರೋಧ ಮಾಡಿದರು. ಅದಕ್ಕಾಗಿ ಈ ಯೋಜನೆಯನ್ನು ಎತ್ತಿಕೊಳ್ಳಬೇಕೆ, ಬೇಡವೆ ಎನ್ನುವುದನ್ನು ಎಕ್ಸ್‌ಪರ್ಟ್ ಕಮಿಟಿಮಾಡಿದ್ದೇವೆ. ಅವರ ವರದಿ ಬಂದಮೇಲೆ ತೀರ್ಮಾನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗಿನ ಮುಖ್ಯಮಂತ್ರಿಗಳು ಇವರು ಮುಖ್ಯಮಂತ್ರಿಗಳು ಆಗುವ ಮೊದಲು ಇವರೇ ಈ ಬೇಡ್ತಿ ಯೋಜನೆಯನ್ನು ವಿರೋಧ ಮಾಡಿದ್ದರು. ಈಗ ಇವರು ಮುಖ್ಯಮಂತ್ರಿಗಳಾಗಿದ್ದಾರೆ. ಈಗ ಏನು ಹೇಳುತ್ತಾರೆ ಎಂದರೆ ಕೇಂದ್ರ ಸರ್ಕಾರದವರು ಈ ಬಗ್ಗೆ ಒಪ್ಪಿಗೆ ಕೊಡುತ್ತಾ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. Of course he was not in power when he openly opposed this Bedti project, ನಾನು ಅವರನ್ನು ಕೇಳುವುದು ಇಷ್ಟೇ. ಇವರು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಏನು ಇದೆ ಅದನ್ನು ಗಮನಿಸಿ ಈ ಬೇಡ್ತಿ ಯೋಜನೆ ಆಗಲೇಬೇಕು ಎನ್ನುವ ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತಂದಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ಅವರು ಒತ್ತಡವನ್ನು ತಂದಿದ್ದಾರೆಯೋ ಇಲ್ಲವೇ ಅನ್ನುವುದನ್ನು ನಾನು ಕೇಳುತ್ತಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್.—ಮುಖ್ಯ ಮಂತ್ರಿಗಳ ಸ್ವಇಚ್ಛೆಯಿಂದ ಇದು ಆಗುವ ಹಾಗಿದ್ದರೆ, ಈ ಯೋಜನೆಯನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದನ್ನು ಹೇಳಬಹುದಾಗಿತ್ತು. ಇದು ಪ್ರಜಾತಂತ್ರದ ವಿಷಯವಾದುದರಿಂದ ಆ ದೃಷ್ಟಿಯಿಲ್ಲಿಟ್ಟುಕೊಂಡು ನಾವು ಎಕ್ಸ್‌ಪರ್ಟ್ ಕಮಿಟಿಯನ್ನು ಕೇಳಿದ್ದೇವೆ.

ಶ್ರೀ ಜಿ.ಎನ್. ಅಜ್ಜಿಬಾಳ್ ಹೆಗಡೆ.— ಮಾನ್ಯ ಅಧ್ಯಕ್ಷರೇ. ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಈ ಬೇಡ್ತಿ ಯೋಜನೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕಾಗಿತ್ತು ಅನ್ನುವ ಮಾತನ್ನು ಹೇಳಿದರು. ಅದಕ್ಕೆ ನಾನು ಅವರನ್ನು ಕೇಳುವುದು ಇಷ್ಟೆ. ಈ ಬೇಡ್ತಿ ಯೋಜನೆ ಬಗ್ಗೆ ತಮ್ಮದೇ ಆದ ಸರ್ಕಾರ ಗುಂಡೂರಾಯರ ಸರ್ಕಾರ ಇದ್ದಾಗ ತಾವೂ ಸಹ ಮಂತ್ರಿಗಳಾಗಿದ್ದೀರಿ, ಆವಾಗ ಇದನ್ನು ಏತಕ್ಕೆ ಕೈಬಿಡಬೇಕಾಗಿತ್ತು? ಈ ಪರಿಸರದ ಮಾಲಿನ್ಯವನ್ನು ಅಲ್ಲಿ ತಪ್ಪಿಸಲು ಏತಕ್ಕೆ ಪ್ರಯತ್ನ ಮಾಡಲಿಲ್ಲ? ಅಲ್ಲಿ ಈ ಯೋಜನೆಯಿಂದ ೧೫ ಎಕರೆ ತೋಟ ಮಾತ್ರ ಹಾಳಾಗುವುದಿಲ್ಲ, ಅಲ್ಲಿ ೫೦ ಸಾವಿರ ಎಕರೆ ಇಡೀ ಪ್ರದೇಶ ಹಾಳಾಗುತ್ತದೆ. ಇದರಿಂದ ಆ ಜಿಲ್ಲೆಯವರಿಗೆ ಒಂದು ದೊಡ್ಡ ಪರಿಣಾಮ ಉಂಟಾಗುತ್ತದೆ ಎಂದು ಅದನ್ನು ಅಷ್ಟಕ್ಕೇ ನಿಲ್ಲಿಸಿದರು. ಈ ಬೇಡ್ತಿ ಯೋಜನೆ ಬರೇ ಆರ್. ಎನ್. ನಾಯಕ್‌ರವರ ಕ್ಷೇತ್ರಕ್ಕೆ ಮಾತ್ರ ಬರುತ್ತದೆ ಅಂತಲ್ಲ ನನ್ನ ಕ್ಷೇತ್ರಕ್ಕೂ, ಅಂಕೋಲಕ್ಕೂ ಸಹ ಇದು ಅನ್ವಯವಾಗುತ್ತದೆ. ಆದುದರಿಂದ ಇದನ್ನು ವಿರೋಧ ಮಾಡುವವರಲ್ಲಿ ನಾನೂ ಒಬ್ಬ. ಇದನ್ನು ಯಾರು ವಿರೋಧ ಮಾಡಿದ್ದಾರೆ, ಈ ಬಗ್ಗೆ ಅವರು ಏನು ನಿರ್ಣಯ ಮಾಡಿದ್ದಾರೆ ಅದರಂತೆ ನಾವು ಒಂದು ಮಾಡೋಣ. ಈಗಲೇ ಇದನ್ನು ಏತಕ್ಕೆ ವಿರೋಧ ಮಾಡಬೇಕೊ ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ನಾನು ಹೇಳಿರತಕ್ಕಂಥಾದ್ದು ಈ ಬಗ್ಗೆ ಸಮಿತಿ ಏನು ಮಾಡಿದ್ದಾರೋ ಅವರು ಪರಿಶೀಲನೆ ಮಾಡಿ ಒಂದು ವರದಿ ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಕೊರತೆ ಇರುವುದರಿಂದ ಈ ಬೇಡ್ತಿ ಯೋಜನೆ ಬಗ್ಗೆ ಕೂಡಲೇ ವರದಿ ತರಿಸಬೇಕು ಎಂದು ಹೇಳುತ್ತೇನೆ. ಇನ್ನು ಮೌಲ್ಯಾಧಾರದ ಬಗ್ಗೆ ಹೇಳುವುದಾದರೆ ಆವಾಗ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟರೋ ಅದನ್ನು ಈಗ ಕೊಡಬೇಕಾಗಿಲ್ಲ. ಇದರ ಬಗ್ಗೆ ಕೂಡಲೇ ವರದಿಯನ್ನು ತರಿಸಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನದು ಒಂದು ಸಿಂಪಲ್ ಕೊಶ್ಚನ್. ಮಾನ್ಯ ಮಂತ್ರಿಗಳು ಈ ಸದನದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ೧೨೩೦ನೇ ನಂಬರಿನ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ಕೆ.ಇ.ಬಿ.ನಲ್ಲಿ ರಿಸರ್ವೇಷನ್ ಇನ್ ಪ್ರಮೋಷನ್‌ನಲ್ಲಿ ರೋಸ್ಟರ್ ಸಿಸ್ಟಂ ಅನ್ನು ಅಳವಡಿಸಿಯೇ ಮಾಡಿದ್ದೇವೆ ಎಂದು ಏನು ಹೇಳಿದರು ಅದರ ಬಗ್ಗೆ ಇವರು ಅಂಕಿ ಅಂಶ ಕೊಟ್ಟಿದ್ದಾರೆ. ಅದರ ಪ್ರಕಾರ ಅಕೌಂಟ್ಸ್ ಆಫೀಸರ್. ಸೀನಿಯರ್ ಅಕೌಂಟ್ಸ್ ಆಫೀಸರ್. ಸೀನಿಯರ್ ಅಸಿಸ್ಟೆಂಟ್, ಅಸಿಸ್ಟೆಂಟ್ ಇಂಜನೀಯರ್ ಇವೆಲ್ಲಾ ಹುದ್ದೆಗಳಲ್ಲಿ, ಇದರಲ್ಲಿ ಒಂದು ಉದಾಹರಣೆ ಹೇಳಬೇಕಾದರೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ (ಎಲೆಕ್ಟ್ರಿಕಲ್) ಇದರಲ್ಲಿ ರೋಸ್ಟರ್ ಸಿಸ್ಟಂ ಪ್ರಕಾರ ಏನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ, ೩೩ ಪೋಸ್ಟ್‌ಗೆ ೨೪ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಅಕೌಂಟ್ಸ್ ಆಫೀಸರ್ ೧೭ ಪೋಸ್ಟ್‌ಗೆ ೬ ಕೊಟ್ಟಿದ್ದಾರೆ, ಹಾಗೆಯೇ ಸೀನಿಯರ್ ಅಸಿಸ್ಟೆಂಟ್ಸ್‌ನಲ್ಲಿ ೧೪೭ಕ್ಕೆ ಕೇವಲ ೬೫ ಕೊಟ್ಟಿದ್ದಾರೆ. ಮತ್ತು ಎಸ್.ಸಿ.ನಲ್ಲಿ ಸುಮಾರು ೨೮ಕ್ಕೆ ೧೮ ಜನಕ್ಕೆ ಕೊಟ್ಟಿದ್ದಾರೆ. ಸೀನಿಯರ್ ಅಸಿಸ್ಟೆಂಟ್ ಎಂದರೆ ಅದು ಕ್ಲರ್ಕ್ ಪೋಸ್ಟ್ ಇದ್ದ ಹಾಗೆ. ಇದಕ್ಕೆ ಕಾರಣ ಏನು ಕೊಟ್ಟಿದ್ದಾರೆ ಎಂದರೆ ಎಲಿಜಿಬಲ್ ಕ್ಯಾಂಡಿಡೇಟ್ ಇಲ್ಲ ಅಂತ ಹೇಳಿದ್ದಾರೆ. ಎಲಿಜಿಬಲ್ ಕ್ಯಾಂಡಿಡೇಟ್ಸ್ ಇದ್ದರೆ ಈ ತಾರತಮ್ಯವನ್ನು ಸರಿಪಡಿಸುವುದಕ್ಕೆ ಯಾವುದಾದರೂ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಇದನ್ನು ಸರಿಪಡಿಸುತ್ತೀರಾ? ಎಲಿಜಿಬಿಲಿಟಿ ಕ್ಯಾಂಡಿಡೇಟ್ಸ್ ಇಲ್ಲದೇ ಹೋದರೆ ಅವರ ಎಕ್ಸ್‌ಪೀರಿಯನ್ಸ್‌ನಲ್ಲಿ ಆದರೂ ಗಣನೆಗೆ ತೆಗೆದುಕೊಂಡು ಇದನ್ನು ಸರಿಪಡಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜೆ. ಎಸ್. ದೇಶಮುಖ್.—ಏನಾದರೂ ಲೋಪ ದೋಷ ಇದ್ದರೆ ಅದನ್ನು ಸರಿಪಡಿಸುತ್ತೇನೆ.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೮ ಮತ್ತು ೬ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು,

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು,

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ-೪೮ ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯೩,೮೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪೮,೦೫,೩೧,೦೦೦ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೬ ಗಣಿಗಳು ಮತ್ತು ಭೂ-ವಿಜ್ಞಾನ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ-ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೯೬,೯೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

೬-೦೦ ಪಿ.ಎಂ.

ಬೇಡಿಕೆ ಸಂಖ್ಯೆ ೨೬, ೧೧, ೧೨ರ ಮೇಲಿನ ಚರ್ಚೆಗೆ ಉತ್ತರ

ಶ್ರೀ ಜೀವರಾಜ ಆಳ್ವ (ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವರ್ಷ ಅಂತರ ರಾಷ್ಟ್ರೀಯ ಯುವ ಸಂವತ್ಸರ ಆಗಿರುವುದರಿಂದ ನನ್ನ ಬೇಡಿಕೆಗಳ ಪೈಕಿ ಯುವಜನ ಸೇವಾ ಇಲಾಖೆ ಬಗ್ಗೆ ಮೊದಲು ಆದ್ಯತೆ ಕೊಡಬಯಸುತ್ತೇನೆ. ಆದರೂ ನನಗೆ ಬೇಸರ ಏನೆಂದರೆ ಸದನದಲ್ಲಿ ಸುಮಾರು ೪೦ ಯುವಕ ಸದಸ್ಯರಿದ್ದರೂ ಕೂಡ ಕೇವಲ ಒಬ್ಬರು ಮಾತ್ರ ಯುವಜನ ಸೇವಾ ಇಲಾಖೆ ಮೇಲೆ ಮಾತನಾಡಿದ್ದಾರಲ್ಲ ಎಂದು. ಅದರಲ್ಲೂ ಕೂಡ.........

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ —ದಯಮಾಡಿ ಮಂತ್ರಿಗಳು ಕೇಳಬೇಕು. ಅವಕಾಶ ಇಲ್ಲ ಎಂದು ಗೊತ್ತಿದ್ದೂ ಏತಕ್ಕೆ ಅದರ ಬಗ್ಗೆ ಇಷ್ಟೊಂದು ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೈಮೂ ಇಲ್ಲ, ಅವರ ಹತ್ತಿರ ಹಣವೂ ಇಲ್ಲ. ಅದಕ್ಕೇನು ಮಾಡುವುದು ?

ಶ್ರೀ ಜೀವರಾಜ ಆಳ್ವ —ಅಧ್ಯಕ್ಷರೆ, ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಭಾರತ ದೇಶದಲ್ಲಿ ಅತ್ಯಂತ ಹೆಮ್ಮೆಪಡಬೇಕಾದ ಯುವಜನ ಚಟುವಟಿಕೆಗಳನ್ನು ನಮ್ಮ ರಾಜ್ಯದ ಯುವಜನ ಸೇವಾ ಇಲಾಖೆ ಮಾಡಿ ತೋರಿಸಿದೆ ಭಾರತದ ಎಲ್ಲೆಡೆ ರಾಷ್ಟ್ರೀಯ ಯುವ ಸಂವತ್ಸರ ಆರಂಭ ಆಗದೇ ಇರುವಾಗ ಜನವರಿ ಒಂದನೇ ತಾರೀಖು ಅಂತರ ರಾಷ್ಟ್ರೀಯ ಯುವ ಸಂವತ್ಸರವನ್ನು ಬರಮಾಡಿಸಿಕೊಂಡೆವು. ಯುವಕರಿಗೆ ಒಂದು ಶಕ್ತಿಯಾಗಿ ಚೈತನ್ಯಸ್ವರೂಪರಾಗಿದ್ದಂಥ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಹೆಸರಿನಲ್ಲಿ ವಿದ್ಯಾನಗರದಲ್ಲಿ ರಾಷ್ಟ್ರೀಯ ಯುವ ಸಮಿತಿಯನ್ನು ಆರಂಭ ಮಾಡಿ ನಂತರ ಹಲವಾರು ತಿಂಗಳಿಂದ ಅಂತರ ರಾಷ್ಟ್ರೀಯ ಯುವ ಸಂವತ್ಸರದ ಹೆಸರಿನಲ್ಲಿ ಹಲವಾರು ಕ್ಯಾಂಪ್‌ಗಳನ್ನು ರಾಷ್ಟ್ರೀಯ ಐಕ್ಯತೆ ಬಗ್ಗೆ ಮಾಡಿಕೊಂಡು ಕೊನೆಗೆ

ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಅವರ ಜಾಂಬೂರಿಯನ್ನು ಆರಂಭ ಮಾಡಿದ್ದೇವೆ. ಅದು ಗುಜರಾತಿನಲ್ಲಿ ಆರಂಭವಾಗಬೇಕಾಗಿತ್ತು. ಅಂತರ ರಾಷ್ಟ್ರೀಯ ಯುವ ಸಂವತ್ಸರವನ್ನು ಚೆನ್ನಾಗಿ ಮಾಡಬೇಕೆಂಬ ದಿಸೆಯಲ್ಲಿ ಸ್ಕೌಟ್ಸ್ ಜಾಂಬೂರಿಯನ್ನು ಜನವರಿ ೨, ೩ ಮತ್ತು ೪ ರಂದು ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಯುವಜನ ಸೇವಾ ಇಲಾಖೆಯಲ್ಲಿ ಬಹಳಷ್ಟು ಕೆಲಸದ ಬಗ್ಗೆ ಹಣ ಇಲ್ಲ ಎಂದು ಮಾನ್ಯ ಖರ್ಗೆಯವರು ಹೇಳಿದರು. ಹಣದ ಕೊರತೆ ಇದ್ದರೂ ಕೂಡ ಇದ್ದ ಹಣದಲ್ಲೇ ಆದಷ್ಟು ದಕ್ಷತೆಯಿಂದ ಬಹಳಷ್ಟು ಯುವಜನ ಚಟುವಟಿಕೆಗಳನ್ನು ಮಾಡಿ ತೋರಿಸಿದ್ದೇವೆ. ಮಾನ್ಯ ಜಾರ್ಜ್ ಅವರು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಡಿ ಎಂದು ಹೇಳಿದರು. ನಿಜ ಅದು. ಬಹಳ ಜನ ವಿಧಾನಸಭಾ ಸದಸ್ಯರು ಕ್ರೀಡಾಂಗಣ ಬೇಕು ಎಂದು ಕೇಳಿಕೊಂಡರು. ಜಿಲ್ಲಾ ಕ್ರೀಡಾಂಗಣ ಮುಗಿಯುವವರೆಗೆ ತಾಲ್ಲೂಕು ಕ್ರೀಡಾಂಗಣ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಆ ದಿಸೆಯಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕ್ರಮ ಕೈಗೊಂಡಿದೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ೧೯ ಜಿಲ್ಲಾ ಕ್ರೀಡಾಂಗಣ ಕಾರ್ಯಕ್ರಮ ವಿವಿಧ ಹಂತದಲ್ಲಿತ್ತು. ಈಗ ೧೧ ಜಿಲ್ಲಾ ಕ್ರೀಡಾಂಗಣ ಕಾರ್ಯ ಮುಗಿಸಿ ಇನ್ನೂ ೮ ಉಳಿದಿವೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಈ ವಿಷಯ ಹೇಳಿದ್ದಾರೆ. ಏನೆಂದರೆ ಈ ವರ್ಷದೊಳಗೆ ಎಲ್ಲ ಜಿಲ್ಲಾ ಕ್ರೀಡಾಂಗಣ ಕಾರ್ಯ ಮುಗಿಸಿ ಅಂತರ ರಾಷ್ಟ್ರೀಯ ಯುವ ಸಂವತ್ಸರದ ಅಂಗವಾಗಿ ೨೫ ರಿಂದ ೩೦ ತಾಲ್ಲೂಕು ಕ್ರೀಡಾಂಗಣ ಕಾರ್ಯವನ್ನೂ ಆರಂಭ ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಮಾನ್ಯ ಜಾರ್ಜ್ ಅವರು ಫುಟ್‌ಬಾಲ್ ಸ್ಟೇಡಿಯಂ ಬಗ್ಗೆ ಒಂದು ಮಾತು ಹೇಳಿದರು. ಅವರು ಹೇಳಿದ್ದು ಅಕ್ಷರಶಃ ನಿಜ. ಸರ್ಕಾರ ಜಾಗ ಕೊಟ್ಟಿದೆ. ಜೊತೆಗೆ ೪೦ ಲಕ್ಷ ರೂಪಾಯಿಗಳನ್ನು ಸಾಲ ರೂಪವಾಗಿ ಅನುದಾನ ಕೊಟ್ಟಿದೆ. ಆದರೂ ಕೂಡ ಏತಕ್ಕೋಸ್ಕರ ಅವರು ಕೆಲಸ ಮುಕ್ತಾಯ ಮಾಡಿಲ್ಲ ಎಂದು ಅವರು ಕೇಳಿದರು. ನಾನು ಇಷ್ಟು ಮಾತ್ರ ಹೇಳಬಲ್ಲೆ. ನಾನು ಪ್ರತಿಯೊಂದು ಕ್ರೀಡಾ ಸಂಸ್ಥೆಯ ಪದಾಧಿಕಾರಿಗಳಿಗೆ ಹೇಳಿದ್ದೇನೆ. ಸರ್ಕಾರದ ಅನುದಾನಗಳಿಗೆ ಅವಲಂಬಿತವಾಗಿ ತಮ್ಮ ಚಟುವಟಿಕೆ ಇರಬಾರದು ಎಂದು. ಕ್ರಿಕೆಟ್ ಮತ್ತು ಫುಟ್‌ಬಾಲ್ ಸಂಸ್ಥೆ ಹಣ ಪಡೆಯುವ ಸ್ಥಿತಿಯಲ್ಲಿದೆ. ತಮ್ಮಲ್ಲಿ ಕೊಡತಕ್ಕ ಹಣದಿಂದ ಕ್ರೀಡಾಂಗಣ ಕಾರ್ಯವನ್ನು ಪೂರ್ತಿ ಮಾಡಬೇಕೆಂದು ಹೇಳಿದರೂ ಕೂಡ ಚಟುವಟಿಕೆ ಹೆಚ್ಚಾಗದೇ ಇರುವುದರಿಂದ ಅಲ್ಲಿರುವ ಜಾಗವನ್ನು ಕೆಲವು ಸಬ್-ಲೀಸ್ ಮಾಡಿ ಒಂದು ಕೋಟಿ ರೂಪಾಯಿ ಜನರೇಟ್ ಮಾಡಬೇಕೆಂದಿದ್ದೇವೆ. ಅದರಿಂದ ಫಸ್ಟ್ ಫೇಸ್ ಆಫ್ ಕನ್‌ಸ್ಟ್ರಕ್ಷನ್ ಮುಕ್ತಾಯವಾಗುತ್ತದೆ ಎಂಬ ವಿಚಾರವನ್ನು ಜಾರ್ಜ್ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಅಶ್ವತ್ಥರೆಡ್ಡಿಯವರು ಯುವಜನ ಸೇವಾ ಇಲಾಖೆ ಬಗೆ ಮಾತನಾಡಲಿಲ್ಲ ಮಾನ್ಯ ಎಂ. ಎಸ್. ಕೃಷ್ಣನ್ ಅವರು ಜಿಮ್ನಾಷಿಯಂ ಬಗ್ಗೆ ಮಾತನಾಡಿ ಅವರ ಕ್ಷೇತ್ರದಬಗ್ಗೆ ಜೀವರಾಜ ಆಳ್ವ ಅವರುಚೆನ್ನಾಗಿ ನೋಡಿಕೊಂಡಿದ್ದಾರೆ, ನಮ್ಮ ಕ್ಷೇತ್ರದಲ್ಲಿ ನೋಡಿಕೊಂಡಿಲ್ಲ ಎಂದುಹೇಳಿದರು, ಆ ತರಹ ತಾರತಮ್ಯ ಇಲ್ಲ ಹಣದ ಕೊರತೆ ಇದ್ದರೂ ಕೂಡ ಶಾಸಕರ ಬೇಡಿಕೆಯನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಅದಕ್ಕೆ ಅವರ ಸಹಕಾರ ಕೇಳುತ್ತಿದ್ದೇನೆ. ಜಿಮ್ನಾಷಿಯಂಗೆ ಬೇಕಾದ ಪರಿಕರಗಳನ್ನು ಕೊಡುವ ಸಲಹೆ ಅವರು ಮಾಡಿದರೆ ಖಂಡಿತ ಅದನ್ನು ಮಾಡಿಸುತ್ತೇನೆ ಎಂದು ಹೇಳಬಯಸುತ್ತೇನೆ. ಕ್ರೀಡಾಂಗಣದ ಬಗ್ಗೆ, ಜಿಮ್ನಾಷಿಯಂ ಬಗ್ಗೆ ಮತ್ತು ಯುವಕ ಯುವತಿಯರ ಮಂಡಳಿ ಬಗ್ಗೆ ಬಹಳಷ್ಟು ಸಲಹೆಗಳನ್ನು ಸಭೆಯ ಒಳಗೆ ಮತ್ತು ಹೊರಗೆ ಕೊಟ್ಟಿದ್ದಾರೆ. ಅವರ ಸಲಹೆಗಳಿಗೆ ಪೂರ್ಣ ಸಹಕಾರ ಕೊಟ್ಟು ಆದಷ್ಟು ಯುವಜನ ಸೇವಾ ಇಲಾಖೆ ಯಿಂದ ಕಾರ್ಯಕ್ರಮ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ. ಪ್ರಚಾರ ಇಲಾಖೆ ಬಗ್ಗೆ ಹೇಳುವುದಾದರೆ It should not be moral and image building organisation. ಈ ಸರ್ಕಾರದ ಕೆಲಸಗಳನ್ನು ತೋರಿಸುವಂಥ ಇನ್‌ಫರ್ಮೇಟೀವ್ ಕೆಲಸ ಆಗಬೇಕೆಂಬ ದೃಷ್ಟಿಯಿಂದ we have started a new concept. ಜನರಿಗೆ ಕಾರ್ಯಸಾಧನೆ ಬಗ್ಗೆ ಅರಿವು ಮೂಡಿಸುವುದಕ್ಕೆ ಮತ್ತು ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿಸು ವುದಕ್ಕೆ ಸಾರ್ವಜನಿಕ ಸಂಪರ್ಕ ಸಮಿತಿಯವರು ತೀರ್ಮಾನ ತೆಗೆದುಕೊಂಡು ಪ್ರಚಾರ ಇಲಾಖೆಗೆ ಕಳುಹಿಸಿದ್ದಾರೆ. ಆ ದಿಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಸರ್ಕಾರದ ಪ್ರಚಾರ ಇಲಾಖೆಯಿಂದ ಆರಂಭವಾಗಿರುವ ಹಲವಾರು ಮುಖ್ಯಾಂಶವನ್ನು ಹೇಳುವುದಾದರೆ ಜಿಲ್ಲಾವಾರು ಪತ್ರಿಕೆ ಗಳನ್ನು ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಪೈಡ್ ಸಬ್‌ಸ್ಕ್ರಿಪ್‌ಷನ್ಸ್ ಇವೆ. ಬಿಜಾಪುರ ಪತ್ರಿಕೆ, ಬಳ್ಳಾರಿ ಪತ್ರಿಕೆ ಈ ಎಲ್ಲಾ ಪತ್ರಿಕೆಗಳಿಗೆ ೫ ರೂಪಾಯಿ ಪೈಡ್ ಸಬ್‌ಸ್ಕ್ರಿಪ್‌ಷನ್ ತೆಗೆದುಕೊಳ್ಳುತ್ತಿದ್ದೆವು. ಅದು ೪೦ ಸಾವಿರ ರೂಪಾಯಿ ಗುರಿ ಮುಟ್ಟಿದೆ. ಹೊಸ ತರಹ ಪ್ರಾಮಾಣಿಕ

ಪ್ರಯತ್ನ ಜನತೆಯ ಮನ ಮುಟ್ಟಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಚಲನಚಿತ್ರೋದ್ಯಮದ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಕಾರ ಕೊಟ್ಟಿದ್ದಾರೆ. ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ, ಇವತ್ತು ಕರ್ನಾಟಕ ಸರ್ಕಾರ ಚಲನ ಚಿತ್ರೋದ್ಯಮಕ್ಕೆ ಕೊಡುತ್ತಿರುವ ಪ್ರೋತ್ಸಾಹವನ್ನು ಭಾರತದ ಯಾವ ರಾಜ್ಯದವರೂ ಕೊಡುತ್ತಿಲ್ಲ. ಇಷ್ಟೆಲ್ಲಾ ಪ್ರೋತ್ಸಾಹ ಕೊಡುತ್ತಿದ್ದರೂ ಮಕ್ಕಳ ಚಲನಚಿತ್ರಕ್ಕೆ ಪ್ರೋತ್ಸಾಹ ಸಾಲದು ಎಂದು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಬೆಂಗಳೂರಿನಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನವೆಂಬರ್ ೧೪ ರಂದು ಅದಕ್ಕೆ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ. ಅವರೇ ಅದನ್ನು ಉದ್ಘಾಟನೆ ಮಾಡುತ್ತಿದ್ದಾರೆ. ಜೊತೆಗೆ ಮಕ್ಕಳ ಚಲನಚಿತ್ರ ಮಂದಿರವನ್ನು ಕೂಡ ಬೆಂಗಳೂರು ನಗರದಲ್ಲಿ ಆರಂಭ ಮಾಡಬೇಕೆಂದಿದ್ದೇವೆ. ಅದಕ್ಕೆ ಸುಮಾರು ೭ ಕೋಟಿ ರೂಪಾಯಿ ವೆಚ್ಚ ಆಗಲಿದೆ. ಇದಕ್ಕೆ ಕೇಂದ್ರ ಸರ್ಕಾರ ಮತ್ತು ಯುನೆಸ್ಕೊದಿಂದ ಹೆಚ್ಚಿನ ಹಣ ಬರುತ್ತದೆ. ಅಡ್ವರ್ಟೈಸ್‌ಮೆಂಟ್ ಪಾಲಿಸಿ ಬಗ್ಗೆ ಹೊಸ ನಿರ್ಧಾರ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಬಹಳಷ್ಟು ಕಾರ್ಯಕ್ರಮಗಳನ್ನು ನಾವು ಇಟ್ಟುಕೊಂಡಿದ್ದೇವೆ.

ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ ಪ್ರಶ್ನೋತ್ತರ ಕಾಲದಲ್ಲಿ ಕೂಡ ಬಹಳಷ್ಟು ಸದಸ್ಯರು ಪ್ರವಾಸೋದ್ಯಮ ಸ್ಥಳಗಳನ್ನು ಇಲಾಖೆ ತೆಗೆದುಕೊಳ್ಳಬೇಕೆಂದು ಹೇಳಿದರು. ಇಲಾಖೆಯ ಹಣಕಾಸಿನ ಪರಿಸ್ಥಿತಿ ಬಿಕ್ಕಟ್ಟಿನಿಂದ ಇದ್ದರೂ ಕೂಡ ಕಳೆದಸಾರಿ ಒಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೆವು. ಅದೇನೆಂದರೆ ಪ್ರವಾಸೋದ್ಯಮವನ್ನು ಒಂದು ಉದ್ದಿಮೆಯಾಗಿ ಪರಿಗಣಿಸ ಬೇಕೆಂದು. ಉದ್ದಿಮೆಯಾಗಿ ಪರಿಗಣಿಸಿದ ನಂತರ ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿ ಪರಿಹಾರಗಳು ಸಿಗುತ್ತದೋ ಅದೇರೀತಿ ಇದಕ್ಕೂ ಸಿಗುತ್ತದೆ. ಇದರಿಂದ ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಕಾರ ಸಿಗುತ್ತದೆಂಬ ಭಾವನೆ ಇದೆ. ಮತ್ತು ಇನ್ನೊಂದು ಹೊಸ ಕಾರ್ಯಕ್ರಮವನ್ನು ನಾವು ನಿಯೋಜನೆ ಮಾಡಿದ್ದೇವೆ. ಅದು ಗ್ರಾಜುಯೇಟ್ ಟ್ಯಾಕ್ಸಿ ಸ್ಕೀಂ ಎಂದು. ಬೆಂಗಳೂರು ನಗರದಲ್ಲಿ ಪ್ರವಾಸಿಗರು ಬಂದಾಗ ಹೇಳತಕ್ಕ ದೂರು ಎಂದರೆ "ನಮಗೆ ಟ್ಯಾಕ್ಸಿಗಳು ಸಿಗುತ್ತಿಲ್ಲ, ಆಟೋರಿಕ್ಷಾದಲ್ಲಿ ಮೂರು ನಾಲ್ಕು ಜನ ಬಂದರೆ ಓಡಾಡುವುದಕ್ಕೆ ತೊಂದರೆಯಾಗುತ್ತದೆ, ಲಗ್ಗೇಜು ಇಟ್ಟುಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ" ಎಂಬುದು ಆದ್ದರಿಂದ ೧೦೦ ಜನ ವಿದ್ಯಾವಂತ ಯುವಕರಿಗೆ ಮಾತ್ರ ಟೂರಿಸಂ ಇಲಾಖೆಯಿಂದ ಆರ್ಥಿಕ ಸಹಾಯ ನೀಡಿ ಟ್ಯಾಕ್ಸಿ ಕೊಡಿಸುವ ಯೋಜನೆ ಮಾಡಿದ್ದೇವೆ. ಸರ್ಕಾರ ಮತ್ತು ಇತರ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನ್ಸ್‌ನಿಂದ ೧೦ ಸಾವಿರ ರೂಪಾಯಿ ಸಾಫ್ಟ್ ಲೋನ್ ಕೊಡಿಸುವ ಯೋಜನೆಯನ್ನು ಬೆಂಗಳೂರು ಮತ್ತು ಇತರ ನಗರಗಳಲ್ಲಿ ಆರಂಭ ಮಾಡಬೇಕೆಂದು ಮಾಡಿದ್ದೇವೆ. ಇದೂ ಕೂಡ ಪ್ರವಾಸೋದ್ಯಮಕ್ಕೆ ಸಹಾಯಕವಾಗುತ್ತದೆ ಎಂಬುದು ನಮ್ಮ ಭಾವನೆಯಾಗಿದೆ.

ಮತ್ತೆ ಇದರಲ್ಲಿ ಬಹಳಷ್ಟು ಚಟುವಟಿಕೆಗಳನ್ನು ಮಾಡಬೇಕೆಂದು ಇದ್ದೇವೆ ರಾಜ್ಯದಲ್ಲಿನ ಒಟ್ಟು ೨೪೬ ಪ್ರವಾಸೋದ್ಯಮಕ್ಕರ್ಹವಾದ ಕ್ಷೇತ್ರಗಳ - ಪೈಕಿ ಈ ವರ್ಷ ಸುಮಾರು ೨೩ ಕ್ಷೇತ್ರಗಳನ್ನು ಗುರುತಿಸಿದ್ದೇವೆ. ಅಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಮೊನ್ನೆ ತಾನೇ ನಾನು ಪ್ರವಾಸೋದ್ಯಮ ಮಂತ್ರಿಗಳ ಸಮ್ಮೇಳನಕ್ಕೆ ಹೋದಾಗ ಹೆಚ್ಚುವರಿ ಹಣವನ್ನು ಕೇಳಿದ್ದೇನೆ. ಯಾತ್ರಿಕ್ ಮತ್ತು ಯಾತ್ರಿಕ್ ನಿವಾಸ್ ಎನ್ನುವ ಯೋಜನೆಗಳಿಗಾಗಿ ಹೆಚ್ಚಿನ ಹಣಕ್ಕಾಗಿ ಕೇಂದ್ರದ ಪ್ರವಾಸೋದ್ಯಮ ಮಂತ್ರಿಗಳನ್ನು ಕೇಳಿದ್ದೇನೆ. ಒಂದು ಮಾತನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಕೇಂದ್ರವು ರಾಷ್ಟ್ರದ ರಾಜ್ಯಗಳೆಲ್ಲಕ್ಕೂ ಸಮಾನ ಧೋರಣೆ ಅನುಸರಿಸದಿದ್ದರೆ ಕಷ್ಟವಾಗುತ್ತದೆ. ಉದಾಹರಣೆಗೆ ಪ್ರವಾಸೋದ್ಯಮಕ್ಕೆಂದು ಸದರನ್ ರೀಜನ್‌ಗೆ ೩೪೧ ಲಕ್ಷ, ವೆಸ್ಟರ್ನ್ ರೀಜನ್‌ಗೆ ೩೬೧ ಲಕ್ಷ, ಈಸ್ಟರ್ನ್ ರೀಜನ್‌ಗೆ ೨೪೧ ಲಕ್ಷ ರೂ.ಗಳನ್ನು ಅಲೋಕೇಟ್ ಮಾಡಿರುವ ಕೇಂದ್ರವು ನಮ್ಮ ಸದರನ್ ರೀಜನ್‌ಗೆ ನಿಗದಿಪಡಿಸಿರುವ ಒಟ್ಟು ಹಣವೆಷ್ಟು ಗೊತ್ತೇ? ಕೇವಲ ೭೧ ಲಕ್ಷ ರೂಪಾಯಿಗಳು ನಾನು ಅವರನ್ನು ಒಂದು ಪ್ರಶ್ನೆ ಕೇಳಿದೆ ಏತಕ್ಕೆ ದಕ್ಷಿಣ ರೀಜನ್‌ಗೆ ಕಡಿಮೆ ಕೊಟ್ಟಿದ್ದೀರಿ ಎಂದು. ತಾಜಮಹಲ್, ಖಜುರಾಹೋಗಳಿಗೆ ಜಾಸ್ತಿ ಕೊಟ್ಟಿದ್ದಾರೆ ಆದರೆ ನಮ್ಮ ಬೇಲೂರು, ಹಳೇಬಿಡು, ಪಟ್ಟದಕಲ್ಲು ಬಾದಾಮಿ, ಐಹೊಳೆಗಳಿವೆ ಅಂಥಾದ್ದರಲ್ಲಿ ಇಲ್ಲಿಗೆ ಏತಕ್ಕೆ ಕಡಿಮೆ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಕೇಂದ್ರದ ಮಂತ್ರಿಗಳೂ ನನ್ನ ವಾದವನ್ನು ಒಪ್ಪಿ ಈಗ ಆಗಿರುವ ಡಿಸ್‌ಪ್ಯಾರಿಟಿಯನ್ನು

ಸರಿಪಡಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅಲ್ಲಿಂದ ಹೆಚ್ಚಿನ ಹಣ ಬರಬೇಕಾಗಿದೆ. ಅದು ಯಾತ್ರಿಕ್ ಹಾಗೂ ಯಾತ್ರಿಕ್ ನಿವಾಸ್ ಯೋಜನೆಯಡಿಯಲ್ಲಿ ಬರುತ್ತದೆ ಎನ್ನಲಾಗಿದೆ. ಇದು ಇನ್ನು ಹೆಚ್ಚಿನ ರೀತಿಯಲ್ಲಿ ಚುರುಕಾಗಿಗೊಳಿಸಬೇಕಾಗಿದೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳನ್ನೂ ಈ ಪ್ರವಾಸೋದ್ಯಮ ಇಲಾಖೆಗೆ ಹೆಚ್ಚುವರಿ ಹಣ ನೀಡಲು ಕೋರಿದ್ದೇನೆ. ಅವರೂ ಭರವಸೆ ನೀಡಿದ್ದಾರೆ.

ಇನ್ನು ಕನ್ನಡ ಸಂಸ್ಕೃತಿಯ ಬಗ್ಗೆ ಹೇಳುವುದಾದರೆ ಒಂದು ದೃಢತೆ, ಚೈತನ್ಯ ಹುರುಪುಗಳನ್ನು ಈ ಇಲಾಖೆಗೆ ನಾವು ಕೊಟ್ಟಿದ್ದೇವೆ. ಹಿಂದೆ ಸಂಗೀತ, ನೃತ್ಯ ನಾಟಕಗಳಿಗಾಗಿ ೩ ಲಕ್ಷ ಖರ್ಚಾಗುತ್ತಿದ್ದುದು ಇಂದು ೩೦ ಲಕ್ಷಕ್ಕೆ ಏರಿದೆ. ಪ್ರತಿಯೊಂದು ಹಂತದಲ್ಲೂ ಕೂಡ, ಅದು ಮಾಸಾಶನ ಇರಲಿ, ಗೌರವಧನ ಇರಲಿ, ಯಾವುದೇ ಕಲಾವಿದರೂ ರಾಜ್ಯದಲ್ಲಿ ಪ್ರೋತ್ಸಾಹಕ್ಕಾಗಲೀ, ಆಸರೆಗಾಗಲೀ ಎದುರು ನೋಡಬೇಕಾಗಿಲ್ಲ. ಸಂಸ್ಕೃತಿಕ ರೂವಾರಿಗಳಾದ ಅವರಿಗೆ ಯಾವುದೂ ಕೊರತೆಯಾಗದಂತೆ ನೋಡಿಕೊಳ್ಳುವ ಹೊಣೆ ಸರ್ಕಾರದ್ದು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಅಭಿಮಾನದಿಂದ, ಆಶೀರ್ವಾದದಿಂದ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಇಲ್ಲ ಎಂದು ಯಾರಿಗೂ ಹೇಳುವುದಿಲ್ಲ.

ಇವತ್ತು, ವಿಶ್ವ ಕನ್ನಡ ಸಮ್ಮೇಳನ ನಡೆಸಬೇಕೇ ಬೇಡವೇ ಎಂದು ಕಳೆದ ಐದಾರು ವರ್ಷಗಳಿಂದ ಮುಂದೂಡಿಕೊಂಡು ಬಂದಿದ್ದಾಯಿತು. ಕಳೆದೆರಡು ವರ್ಷಗಳ ಹಿಂದೆ ರಾಜ್ಯದಲ್ಲಿದ್ದ ಬರಗಾಲ ಪರಿಸ್ಥಿತಿಯನ್ನು ಕಾರಣವಾಗಿಟ್ಟುಕೊಂಡು ಮತ್ತು ಕಳೆದ ವರ್ಷ ನಡೆದ ರಾಷ್ಟ್ರದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ವಿಶ್ವ ಕನ್ನಡ ಮೇಳವನ್ನು ಮುಂದೂಡಿದ್ದೆವು. ಕಳೆದ ಕೆಲವು ದಿನಗಳ ಹಿಂದೆ ಹಲವಾರು ಸಾಹಿತಿಗಳ ಸಭೆ ಕರೆದು ಈ ವರ್ಷವಾದರೂ ನಡೆಸಬೇಕೇ ಎಂಬ ಪ್ರಶ್ನೆಯನ್ನು ಅವರ ಮುಂದಿಟ್ಟೆವು. ಆ ಸಭೆಗೆ ಖ್ಯಾತ ನಾಟಕಗಾರರು, ಸಾಹಿತಿಗಳು, ಬುದ್ಧಿಜೀವಿಗಳು ಎಲ್ಲರೂ ಬಂದಿದ್ದರು. ಅವರು ಒಂದು ಪ್ರಶ್ನೆ ಕೇಳಿದರು. ಸುಮ್ಮನೇ ರಾಜ್ಯ ಸರ್ಕಾರ ಏಕೆ ಬರಗಾಲ ಪರಿಸ್ಥಿತಿಯನ್ನು ನೆಪವಿಟ್ಟು ಸಮ್ಮೇಳನ ನಡೆಸಲು ಹಿಂದೆಗೆಯುತ್ತಿದೆ. ತಮಿಳುನಾಡಿನಲ್ಲಿ ವಿಶ್ವ ತಮಿಳು ಸಮ್ಮೇಳನ ನಡೆದಾಗ ಅಲ್ಲಿ ಬರಗಾಲವಿರಲಿಲ್ಲವೇ? ಆಂಧ್ರದಲ್ಲಿ ವಿಶ್ವ ತೆಲುಗು ಸಮ್ಮೇಳನ ಆದಾಗ ಅಲ್ಲಿ ಬರಗಾಲವಿರಲಿಲ್ಲವೇ? ಈ ಕನ್ನಡ ಸಮ್ಮೇಳನಕ್ಕಾಗಿ ಸರ್ಕಾರ ಖರ್ಚು ಮಾಡುವ ೨೦–೩೦ ಲಕ್ಷ ರೂ.ಗಳಿಂದ ರಾಜ್ಯದ ಬರಗಾಲವನ್ನೆಲ್ಲ ಸದೆಬಡಿದು ಬಿಡುವುದೇ ಎಂದು ವ್ಯಂಗ್ಯವಾಗಿ ಕೇಳಿದರು. ಹೀಗಾಗಿ ನಮ್ಮ ಸರ್ಕಾರ ಈ ವರ್ಷ ಸಮ್ಮೇಳನ ನಡೆಸಲು ತೀರ್ಮಾನ ತೆಗೆದುಕೊಂಡಿದೆ. ಅಷ್ಟು ಹೊತ್ತಿಗೆ ಮೈಸೂರಿನ ರಂಗಮಂದಿರವು ಪೂರ್ಣಗೊಳ್ಳುವುದು.

ಇದು ಕೇವಲ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವಲ್ಲ. ಇದು ರಾಜ್ಯದ ಜನತೆಯ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ, ಜಾನಪದ ಮತ್ತು ವೈಜ್ಞಾನಿಕ ವಿಷಯಗಳ ಬಗ್ಗೆ, ಕನ್ನಡ ನಾಡು ನುಡಿ, ಜಲ ನೆಲದ ಬಗ್ಗೆ ಪ್ರತಿಯೊಂದು ಪ್ರಶ್ನೆಯನ್ನೂ ಮೂಲಭೂತವಾಗಿ ಪ್ರಶ್ನೆ ಮಾಡಿ ನಾಡಿಗೆ ಯಾವುದಾದರೂ ಸಾಂಸ್ಕೃತಿಕವಾಗಿ ಸಹಾಯವಾಗುವುದಿದ್ದರೆ ಅದಕ್ಕಾಗಿ ಚಲನೆ ಕೊಡಬೇಕೆಂದು ಮಾಡಿಕೊಂಡಿದ್ದೇವೆ. ರಾಜ್ಯದ ಜನತೆಗೆ ಈ ಸದನದ ಅಧ್ಯಕ್ಷರ ಮೂಲಕ ಹೇಳುವುದೇನೆಂದರೆ ಇದನ್ನೊಂದು ಸಾಂಸ್ಕೃತಿಕ ಉತ್ಸವವಾಗಿ ಪರಿವರ್ತಿಸಬೇಕೆಂಬ ಆಶಯ ಸರ್ಕಾರಕ್ಕಿದೆ. ವಿಶ್ವ ಕನ್ನಡ ಮೇಳವೆಂದು ಹೇಳಿಬಿಟ್ಟ ತಕ್ಷಣ ಕೇವಲ ಮೈಸೂರು ನಗರದಲ್ಲಿ ಮಾತ್ರ ಉತ್ಸವವಿರುವುದಿಲ್ಲ. ರಾಜ್ಯದ ಪ್ರತಿ ತಾಲ್ಲೂಕು, ಜಿಲ್ಲೆ, ಹೋಬಳಿ ಮತ್ತು ಹಳ್ಳಿ ಹಳ್ಳಿಗಳಲ್ಲೂ ಸಾಂಸ್ಕೃತಿಕ ಉತ್ಸವಗಳನ್ನು ನಡೆಸಬೇಕು. ಕಲಾವಿದರು, ಸಾಹಿತಿಗಳು ಎಲ್ಲರೂ ಅಲ್ಲಿಗೇ ಹೋಗಬೇಕು. ಅಲ್ಲೇ ನಾಟಕಗಳೂ ನಡೆಯಬೇಕು. ಜಾನಪದ ಕಲಾವಿದರು ಹಳ್ಳಿ ಹಳ್ಳಿಗಳಲ್ಲಿ ತಮ್ಮ ವೈವಿಧ್ಯತೆಯನ್ನು ತೋರುವುದಷ್ಟೇ ಅಲ್ಲ ಪಟ್ಟಣಗಳ ಜನರ ಮುಂದೆ ಅವರು ಪ್ರದರ್ಶಿಸುವಂತಾಗಬೇಕು. ಮೇಳ ಮುಗಿದ ಮೇಲೆ ಸಂಗೀತ ನೃತ್ಯ ನಾಟಕ ಸಾಹಿತ್ಯ ಅಕಾಡೆಮಿಗಳಿಂದ ಒಟ್ಟು ೧೫೦ ಕಾರ್ಯಕ್ರಮಗಳನ್ನು ನಮ್ಮ ಇಲಾಖೆಯಿಂದೂ ಸೇರಿಸಿ ಮಾಡಬೇಕೆಂಬ ಆಶಯ ಸರ್ಕಾರಕ್ಕಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ, ಈ ಸದನದ ಎಲ್ಲ ಸದಸ್ಯರಲ್ಲಿ ಅತ್ಯಂತ ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ: ಇದು ಖಂಡಿತ ಸಾಂಸ್ಕೃತಿಕವಾದ ಆಚರಣೆ. ಇದರಲ್ಲಿ ನಾವು ಕಿರೀಟ ಇಟ್ಟುಕೊಳ್ಳಬೇಕೆನ್ನುವ, ಆಡಂಬರದಿಂದ ಮಾಡಿ ಮೆರೆಯುವ ಪ್ರಶ್ನೆಯೇ ಇಲ್ಲ.

ಇದೇ ಸಂದರ್ಭದಲ್ಲಿ ಈ ಸಮ್ಮೇಳನಕ್ಕಾಗುವ ಖರ್ಚಿನ ಬಾಬ್ತು ಕೇವಲ ೩೦ ರಿಂದ ೪೦ ಲಕ್ಷದ ಒಳಗೇ ಆಗುವುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೫-೬ ಕೋಟಿ ರೂ. ಹಿಡಿಯುತ್ತದೆ ಎನ್ನುವುದು ಈ ಮೇಳದ ದೃಷ್ಟಿಯಿಂದಲೇ ನೋಡಿದಾಗ ಅಷ್ಟೇನೂ ನಿಜವಲ್ಲ. ಅದೂ ಅಲ್ಲದೆ ಇಷ್ಟೊಂದು ಹಣದ ರೂಪರೇಖೆಯನ್ನು ಮಾಡಿದ್ದು ನಮ್ಮ ಸರ್ಕಾರವಲ್ಲ. ಹಿಂದಿದ್ದ ಸರ್ಕಾರ ಅದನ್ನು ಮಾಡಿದ್ದು. ಈ ಹಣದ ಬಹುಪಾಲು ರಂಗ ಮಂದಿರಗಳ ನಿರ್ಮಾಣ ಮುಂತಾದ ಶಾಶ್ವತ ಕೆಲಸಗಳಿಗಾಗಿ ಖರ್ಚಾಗುತ್ತಿದೆ. ಹಿಂದಿನ ಸರ್ಕಾರ ರೂಪುಗೊಳಿಸಿದ್ದ ೧೫೦ ಪುಸ್ತಕಗಳ ಕಡಿಮೆ ಬೆಲೆಯ ಮಾರಾಟ ಯಶಸ್ವಿಯಾಗಿ ಎಲ್ಲ ಪುಸ್ತಕಗಳೂ ಜನರಿಗೆ ಹಿಡಿಸಿ ಎಲ್ಲ ಮಾರಾಟವಾಗಿ ಹೋಗಿವೆ. ಈಗಲೂ ಅದಕ್ಕೆ ಬೇಕಾದಷ್ಟು ಬೇಡಿಕೆ ಇದೆ. ಆದ್ದರಿಂದ ಈ ಸರ್ಕಾರ ಕೂಡ ಅತ್ಯಂತ ಗೌರವಾನ್ವಿತ ಸಾಹಿತಿಗಳನ್ನು ಕರೆಸಿ ೫೦ ಅತ್ಯುತ್ತಮ ಪುಸ್ತಕಗಳ ಪ್ರಕಟಣೆಗೆ ಕೈಹಾಕಿದೆ. ಆ ಪುಸ್ತಕಗಳನ್ನು ನಿರ್ಧರಿಸುವವರು ಆ ಸಾಹಿತಿಗಳ ಗುಂಪೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಹಿಂದೆ ಪುಸ್ತಕಗಳನ್ನು ಪ್ರಕಟಿಸಿದಾಗ ಎಲ್ಲ ಸದಸ್ಯರಿಗೂ ಒಂದೊಂದು ಸೆಟ್ ಪುಸ್ತಕಗಳನ್ನು ಕೊಡಿಸುತ್ತೇವೆಂದು ಹೇಳಿದ್ದರೂ ಕಳಿಸಲಿಲ್ಲ. ಅಲ್ಲಿ ನಾವೇ ಹೋಗಿ ಎನ್‌ಕ್ವೈರಿ ಮಾಡಿದಾಗ ಡೈರೆಕ್ಟರೇಟ್‌ನಲ್ಲೂ ಇಲ್ಲವೆನ್ನುತ್ತಾರೆ.

ಶ್ರೀ ಜೀವರಾಜ್ ಆಳ್ವ.— ಅದು ಮುಗಿದು ಹೋಗಿವೆ, ಏನು ಮಾಡುವುದು ಹೇಳಿ. ಈ ದೃಷ್ಟಿಯಿಂದಲೇ ೫೦ ಪುಸ್ತಕಗಳ ಪ್ರಕಟಣೆಗೆ ಸರ್ಕಾರ ಕೈಹಾಕಿದೆ. ಅದಕ್ಕೆ ತಗಲುವ ವೆಚ್ಚವೂ ತುಂಬಾ ಅಗ್ಗ. ಮತ್ತೊಮ್ಮೆ ಎಲ್ಲ ಸದಸ್ಯರಲ್ಲೂ ಈ ವಿಶ್ವ ಕನ್ನಡ ಮೇಳ ಯಶಸ್ವಿಯಾಗಿ ನಡೆಯಲು ಪಕ್ಷಭೇದ ಮರೆತು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದುಡ್ಡು ಎಲ್ಲಿಂದ ತರುತ್ತೀರಿ?

ಅಧ್ಯಕ್ಷರು.—ಬೆಗ್, ಬಾರೋ ಆರ್ ಸ್ಟೀಲ್.

ಶ್ರೀ ಜೀವರಾಜ್ ಆಳ್ವ — ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಈಗಾಗಲೇ ಬಾರೋ ಚೆನ್ನಾಗಿ ರೂಢಿಯಾಗಿದೆ. ಇನ್ನುಳಿದಿರುವುದು ಸ್ಟೀಲ್ ಮಾತ್ರ. ಅದನ್ನೇ ನೋಡಿ.

ಶ್ರೀ ಜೀವರಾಜ್ ಆಳ್ವ.— ಇನ್ನು, ಪ್ರಾಚ್ಯ ಮತ್ತು ಪುರಾತತ್ವ ಇಲಾಖೆಯ ಶತಮಾನೋತ್ಸವ ನಡೆಸಲು ಈ ಸಲ ಏರ್ಪಾಡು ಮಾಡುತ್ತಿದ್ದೇವೆ. ಸಮಾರಂಭಕ್ಕೆ ರಾಷ್ಟ್ರಪತಿಯವರು ಬರುತ್ತಾರೆ. ಇದಕ್ಕಾಗಿ ಶಿವಮೊಗ್ಗದ ಶಿವಪ್ಪ ನಾಯಕರ ಅರಮನೆಯನ್ನು ಸಜ್ಜುಗೊಳಿಸುತ್ತಿದ್ದೇವೆ. ಹಂಪಿಯ ಪುನರುತ್ಥಾನದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದಕ್ಕಾಗಿ ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರಾದರೂ ಸರಿ ಅವರು ಈ ಹಂಪಿಯಲ್ಲಿ ಎಕ್ಸ್‌ಕವೇಷನ್ ಮತ್ತು ಕನ್‌ಸರ್ವೇಷನ್ ಎಂದು ನಮ್ಮ ರಾಜ್ಯ ಸರ್ಕಾರ ಏರ್ಪಾಡು ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಇದರಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳನ್ನು ಒಂದು ತಿಂಗಳ ಕಾಲ ಹಂಪಿಗೆ ಕರೆದೊಯ್ದು ಅಲ್ಲಿ ಅವರಿಗೆ ಟ್ರೈನಿಂಗ್ ಕೊಟ್ಟು ಈ ಕೆಲಸ ಮಾಡಿಸುತ್ತೇವೆ. ಈ ಕಾರ್ಯಕ್ರಮವನ್ನು ಹೊಸದಾಗಿ ಹಾಕಿಕೊಂಡಿದ್ದೇವೆ.

ಇನ್ನು ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಸುಮಾರು ೧೨ ಏರ್‌ಸ್ಟ್ರಿಪ್ಸ್ ಇದೆ. ಇದನ್ನು ಸಿವಿಲ್ ಏವಿಯೇಷನ್ ಡಿಪಾರ್ಟ್‌ಮೆಂಟಿಗೆ ಪರಿವರ್ತನೆ ಮಾಡಬೇಕೆಂದು ಮಾಡಿದ್ದೇನೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ. ಈ ಏರ್‌ಸ್ಟ್ರಿಪ್ಸ್ ಬಹಳ ಹಾಳಾಗುತ್ತದೆ. ಯಾರಿಗೂ ಉಪಯೋಗ ಆಗುತ್ತಿಲ್ಲ. ಟೂರಿಸಂನವರಿಗೆ ಇದು ಅನುಕೂಲವಾಗುತ್ತದೆ. ಮೂರು ಫೀಡರ್ ಲೈಸನ್ಸ್‌ನ್ನು ಕೇಳುತ್ತಿದ್ದೇವೆ. ಇದಕ್ಕೆ ಪೂರಕವಾಗಿ ಬಿಜಾಪುರ, ಬಳ್ಳಾರಿ, ಹುಬ್ಬಳ್ಳಿಯಲ್ಲಿರತಕ್ಕ ಏರ್‌ಸ್ಟ್ರಿಪ್ಸ್ ನಮ್ಮ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ. ಈ ದಿಸೆಯಲ್ಲಿ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್‌ನ್ನು ಈ ವರ್ಷ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುವುದೇನೆಂದರೆ ನಮ್ಮ ಇಲಾಖೆಯ ಎಲ್ಲ ಬೇಡಿಕೆಗಳಿಗೆ ಮಾನ್ಯ ಸದಸ್ಯರು ಯಾವತ್ತೂ ಕೂಡ ತಮ್ಮ ಸಹಕಾರವನ್ನು ನೀಡಿದ್ದಾರೆ. ಅದೇ ರೀತಿಯಾಗಿ ನಾವು ಅವರ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದೇವೆ. ಆದ್ದರಿಂದ ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ನನ್ನ ಇಲಾಖೆಯ ಬೇಡಿಕೆಗಳನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಪ್ರವಾಸೋದ್ಯಮದ ಪ್ರವರ್ತಕರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಸುಮಾರು ೪೧ ಜನ ಕಳೆದ ಹದಿನೈದು ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಇದುವರೆಗೆ ಅವರನ್ನು ಖಾಯಂ ಮಾಡಿಲ್ಲ. ಅವರನ್ನು ಯಾವಾಗ ಖಾಯಂ ಮಾಡುತ್ತೀರಿ ? ಇನ್ನು ಎರಡನೆಯದಾಗಿ ನಮ್ಮ ಸಾಹಿತಿಗಳಾದ ಚಡಗರರವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಎರಡು ಲಕ್ಷ ರೂಪಾಯಿಗಳನ್ನು ಏನು ಕೊಡುಗೆಯಾಗಿ ಕೊಟ್ಟಿದ್ದಾರೆ. ಅದು ಏನು ಪ್ರಯೋಜನ ಇಲ್ಲದೆ ಹಾಳಾಗುತ್ತಿದೆ. ಇದರ ಬಗ್ಗೆ ತಮ್ಮ ನಿಲುವೇನು ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ತಾವು ನನಗೆ ಹತ್ತು ನಿಮಿಷಗಳಲ್ಲಿ ಉತ್ತರವನ್ನು ಮುಗಿಸಬೇಕೆಂದು ಹೇಳಿದ್ದರಿಂದ ಉತ್ತರವನ್ನು ಕೊಡುವಾಗ ವೇಗವಾಗಿ ಕೊಡಬೇಕಾಗಿ ಬಂತು. ಅದರಲ್ಲಿ ಕೆಲವೊಂದು ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡುವುದು ಬಿಟ್ಟು ಹೋಗಿರಬಹುದು. ಮಾನ್ಯ ಸದಸ್ಯರು ಈಗ ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನೀತಿಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋದರೆ ಬಹಳ ಕಷ್ಟವಾಗಬಹುದು ಎಂದು ಇಷ್ಟಕ್ಕೆ ನಿಲ್ಲಿಸಿದ್ದೇನೆ. ಇನ್ನು ಟೂರಿಸಂ ಡಿಪಾರ್ಟ್‌ಮೆಂಟಿನ ಪ್ರೊಮೊಟರ್ಸ್ ಬಗ್ಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಇಷ್ಟರಲ್ಲಿಯೇ ಸಿದ್ಧವಾಗಿ ಬರಲಿದೆ. ಅದು ಬಂದ ಮೇಲೆ ಇವರನ್ನು ಖಾಯಂ ಮಾಡುವ ಬಗ್ಗೆ ಯೋಚನೆ ಮಾಡುತ್ತೇನೆ. ಮಾನ್ಯ ಚಡಗರರವರು ಪುಸ್ತಕಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಮೊನ್ನೆ ಕೂಡ ನಾನು ಅವರನ್ನು ಭೇಟಿಯಾಗಿ ಕೇಳಿದ್ದೇನೆ. ಅದು ಎಷ್ಟು ಬೆಲೆ ಬಾಳುತ್ತದೆ. ಎಂಬುದು ಕೂಡ ಗೊತ್ತಿಲ್ಲ. ಪ್ರಾಚ್ಯ ವಸ್ತು ಇಲಾಖೆಗೆ ಅವರಲ್ಲಿರತಕ್ಕ ವಸ್ತುವನ್ನು ಕೊಡುವುದಾದರೆ ಸಂತೋಷದಿಂದ ಸ್ವೀಕಾರ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ ಈ ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆಯು ೧೮೮೫ ರಲ್ಲಿ ಕರ್ನಾಟಕದಲ್ಲಿ ಪ್ರಾರಂಭವಾಗಿ ಈಗ ನೂರು ವರ್ಷಗಳು ತುಂಬುತ್ತಿದೆ. ಡಾಕ್ಟರ್ ಎಂ. ಎಚ್. ಕೃಷ್ಣನ್‌ರವರು ೧೯೨೭–೧೯೪೪ ರ ವರೆಗೆ ಅಧಿಕಾರದಲ್ಲಿದ್ದಾಗ ಮೈಸೂರಿನ ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆ ಏನಿದೆ. ಅದನ್ನು ಇಡೀ ಜಗತ್ತಿನಲ್ಲಿಯೇ ಪ್ರಖ್ಯಾತವಾಗುವಂತೆ ಮಾಡಿದರು ಶ್ರೀಯುತ ಎಂ. ಎಸ್. ಕೃಷ್ಣನ್‌ರವರು ಸ್ವತಃ ತಮ್ಮ ಕೈಯಿಂದ ಬರೆದಿರತಕ್ಕ ಮೂರು ಗ್ರಂಥಗಳು ಅಲ್ಲಿವೆ. ಅದು ನಮ್ಮ ಗಮನಕ್ಕೆ ಬಂದಿದೆ. ಇದು ಯಾವುದೆಂದರೆ – Index to Archaeological L–II Catalogue to Coins in Mysore, Treatise on Temple. ಈ ಮೂರು ಮ್ಯಾನ್‌ಸ್ಕ್ರಿಪ್ಟ್‌ಗಳು ಈ ಇಲಾಖೆಯಲ್ಲಿದೆ ಎಂದು ಹೇಳಿದ್ದಾರೆ. ೧೮೮೫ ರಿಂದ ೧೯೮೫ ರ ವರೆಗೆ ಅಂದರೆ ನೂರು ವರ್ಷಗಳು ಇದಕ್ಕೆ ತುಂಬುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಮೂರು ಡಾಕ್ಯುಮೆಂಟ್ಸ್ ಏನಿದೆ, ಇವುಗಳನ್ನು ಪ್ರಾಚ್ಯ ವಸ್ತು ಸಂಶೋಧನಾಲಯದಲ್ಲಿ ಭದ್ರವಾಗಿ ಇಟ್ಟು ಮಾನ್ಯ ಎಂ. ಎಚ್. ಕೃಷ್ಣನ್‌ನವರು ಏನು ಸೇವೆಯನ್ನು ಮಾಡಿದ್ದಾರೆ. ಅದರ ಉಪಯೋಗ ಕರ್ನಾಟಕದ ಜನರಿಗೆ ಸಿಕ್ಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯದಂತೆ ಮಾನ್ಯ ಎಂ. ಎಚ್. ಕೃಷ್ಣನ್‌ರವರು ಪುಸ್ತಕಗಳನ್ನು ಈ ಸಾರಿ ನಾವು ಪ್ರಕಟಣೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಯುವಕ ಮಂತ್ರಿಗಳು ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಇದನ್ನು ನಾನು ಮೆಚ್ಚುತ್ತೇನೆ. ಜುಲೈ ತಿಂಗಳಲ್ಲಿ ನಾನು ಟೋಕಿಯೋಗೆ ಹೋಗಿದ್ದೆ ಟೋಕಿಯೋದಲ್ಲಿ ಇರತಕ್ಕ ಡಿಸ್ನಿ ಲ್ಯಾಂಡನ್ನು ನಾನು ನೋಡಿಕೊಂಡು ಬಂದಿದ್ದೇನೆ. ಲಾಸ್ ಏಂಜಲೀಸ್‌ನಲ್ಲಿರತಕ್ಕ ಡಿಸ್ನಿ ಲ್ಯಾಂಡ್ ರೀತಿಯಲ್ಲಿ ಅದನ್ನು ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲೂ ಕೂಡ ಡಿಸ್ನಿ ಲ್ಯಾಂಡನ್ನು ಮಾಡುತ್ತೇವೆಂದು ಮುಖ್ಯ ಮಂತ್ರಿಗಳಾದ ಮಾನ್ಯ ರಾಮಕೃಷ್ಣ

ಹೇಗ್ಗಡೆಯವರು ಹೇಳಿದ್ದಾರೆ. ಇದನ್ನು ಮಾಡುವುದಕ್ಕೆ ಬೆಂಗಳೂರಿನಲ್ಲಿರತಕ್ಕ ಅರಮನೆಯ ಆವರಣದಲ್ಲಿ ಸಾಕಷ್ಟು ಸ್ಥಳಾವಕಾಶ ಇದೆ. ಆದ್ದರಿಂದ ಈ ವರ್ಷ ಇಲ್ಲಿ ಡಿಸ್ನಿ ಲ್ಯಾಂಡನ್ನು ನಿರ್ಮಿಸಲು ಕೂಡಲೇ ಏನಾದರೂ ಪ್ರಯತ್ನ ಮಾಡುತ್ತೀರಾ ?

ಇನ್ನು ಎರಡನೆಯದಾಗಿ ಹೇಳುವುದಾದರೆ ಡಿಸ್ಟ್ರಿಕ್ ಡಿಸ್ಟ್ರಿಕ್ಟ್‌ಗಳಲ್ಲಿ ವಾರ್ತಾ ಇಲಾಖೆಯಿಂದ ಪೇಪರನ್ನು ಹೊರಡಿಸುತ್ತಿದ್ದೇವೆಂದು ತಾವು ಹೇಳಿದ್ದಿರಿ. ನಾನು ಕೂಡ ಇದರಲ್ಲಿ ಕೆಲಸ ಮಾಡಿದ್ದೇನೆ ನಿನ್ನೆ ಇವತ್ತು ಏನು ಪತ್ರಿಕೆಗಳನ್ನ ಹೊರಡಿಸುತ್ತಿದ್ದೀರಿ. ಅದರಲ್ಲಿ ಮಂತ್ರಿಗಳು ಫೋಟೋಗಳು, ಮಂತ್ರಿಗಳು ಹಾರ ಹಾಕಿಸಿಕೊಳ್ಳುತ್ತಿರುವುದು, ಇಂಥದ್ದನ್ನೇ ಅಚ್ಚು ಹಾಕುತ್ತಿದ್ದಾರೆ. ನಾನಾದರೂ ಹೇಳುತ್ತೇನೆ. ಈ ರೀತಿ ಫೋಟೋಗಳನ್ನು ಹಾಕುವುದು ಬೇಡ. ಇವತ್ತು ಇದಕ್ಕೆ ಬದಲಾಗಿ ಸರ್ಕಾರದಿಂದ ಹೊರಡಿಸತಕ್ಕಂಥ ಆಜ್ಞೆಗಳು, ಕಾನೂನುಗಳು ಏನು ಇವೆ, ಸರ್ಕಾರದವರು ಮಾಡತಕ್ಕಂಥ ಕೆಲಸ ಕಾರ್ಯಗಳೇನು ಎಂಬುದನ್ನು ಜನರಿಗೆ ತಿಳಿಸುವುದಕ್ಕೋಸ್ಕರ ಪ್ರಕಟ ಪಡಿಸಬೇಕು. ಈ ರೀತಿ ತಾವು ಮಾಡುವುದು ಉಚಿತವೆಂದು ನನಗನ್ನಿಸುತ್ತದೆ. ಕಾರಣ ಏನೆಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಸರ್ಕಾರದ ಹುಕುಂಗಳನ್ನು ಪ್ರಕಟ ಮಾಡುತ್ತೇವೆ. ಆದರೆ ಎಲ್ಲರಿಗೂ ಸಿಕ್ಕುವುದಿಲ್ಲ, ಕೆಲವರಿಗೆ ಸಿಗುತ್ತದೆ, ಕೆಲವರಿಗೆ ಸಿಕ್ಕುವುದಿಲ್ಲ, ಆದ್ದರಿಂದ ಈ ಹುಕುಂಗಳು, ಸರ್ಕಾರಿ ಕಾರ್ಯಕ್ರಮಗಳು ಏನು ಎಂಬುದು ಎಲ್ಲರಿಗೂ ತಿಳಿಯುವಂತೆ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ನಾನು ಮೊದಲೇ ಹೇಳಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ರೀತಿಯಲ್ಲಿ ಯಾವಾಗಲೂ ಮಂತ್ರಿಗಳ ಫೋಟೋಗಳು ಬರುವುದಿಲ್ಲ. ಅಪರೂಪಕ್ಕೆ ಒಂದೊಂದು ಸಾರಿ ಬರಬಹುದು ಡಿಸ್ನಿ ಲ್ಯಾಂಡನ್ನು ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಒಂದು ಕೆಲಸವನ್ನು ಮಾಡಬೇಕೆಂದು ಮಾನ್ಯ ಶಿವರುದ್ರಪ್ಪನವರು ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಇದರ ಜೊತೆಗೆ ಮೈಸೂರಿನ ಚಾಮುಂಡಿ ಬೆಟ್ಟ ಕಬ್ಬನ್‌ಪಾರ್ಕ್, ಇಲ್ಲಿಯೂ ಕೂಡ ಚಿಕ್ಕ ಡಿಸ್ನಿ ಲ್ಯಾಂಡ್‌ನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇನೆ,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಅರಮನೆಯ ಆವರಣದಲ್ಲಿಯೇ ಡಿಸ್ನಿ ಲ್ಯಾಂಡನ್ನು ನಿರ್ಮಾಣ ಮಾಡಬೇಕೆಂದು ತೀರ್ಮಾನ ತೆಗೆದ್ಕೊಂಡಿತ್ತು, ಆದ್ದರಿಂದ ದಯವಿಟ್ಟು ಈ ಅರಮನೆಯ ಆವರಣದಲ್ಲಿಯೇ ಡಿಸ್ನಿ ಲ್ಯಾಂಡನ್ನು ಮಾಡಬೇಕೇ ಹೊರತು ಬೇರೆ ಕಡೆ ಅದನ್ನು ಸ್ಥಳಾಂತರಿಸುವುದಕ್ಕೆ ಹೋಗಬಾರದು ದಯವಿಟ್ಟು ಈಗ ಅರಮನೆಯ ಆವರಣದಲ್ಲಿಯೇ ಡಿಸ್ನಿ ಲ್ಯಾಂಡನ್ನು ಮಾಡುತ್ತೀರಾ ? ಎಂಬುದನ್ನು ತಿಳಿಸಬೇಕು.

ಶ್ರೀ ಜೀವರಾಜ ಆಳ್ವ.—ತಮ್ಮ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಈ ವರ್ಷ ಇಂಡಿಯನ್ ಯೂಥ್ ಆರ್ಗನೈಸೇಷನ್‌ಗೋಸ್ಕರ ಕೇಂದ್ರ ಸರ್ಕಾರದವರು ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ ? ಈ ದಿಶೆಯಲ್ಲಿ ನಮ್ಮ ರಾಜ್ಯಕ್ಕೆ ಸಿಕ್ಕಿರತಕ್ಕ ಪಾಲು ಎಷ್ಟೆಂಬುದನ್ನು ಹೇಳಬೇಕು. ಎರಡನೆಯದಾಗಿ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ವಿಶೇಷ ವಸ್ತುಗಳನ್ನು ಸಂಗ್ರಹಿಸಲಾಗುತ್ತದೆಂದು ಏನು ಹೇಳಿದ್ದೀರಿ ಇದರ ಬಗ್ಗೆ ಹೇಳುವುದಾದರೆ ನಾವು ಪತ್ರಿಕೆಗಳಲ್ಲಿ ನೋಡುತ್ತಿರುವಂತೆ ರೈತರು ತಮ್ಮ ಹೊಲವನ್ನು ಉಳುಮೆ ಮಾಡುವ ಸಂದರ್ಭದಲ್ಲಿ ಹಳೆಯ ಕಾಲದ ನಾಣ್ಯಗಳು ಸಿಕ್ಕಿದವು. ಚಿನ್ನದ ಗಟ್ಟಿ ಸಿಕ್ಕಿತು ಎಂದು ಮುಂತಾದ ವಿಷಯವನ್ನು ಪತ್ರಿಕೆಯಲ್ಲಿ ನೋಡುತ್ತಿರುತ್ತೇವೆ ಇವುಗಳನ್ನು ತಾವು ಎಲ್ಲಿ ಶೇಖರಿಸಿಡುತ್ತೀರಿ ? ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯಣಿಯವರು ಈ ವರ್ಷ ಅಂತರ ರಾಷ್ಟ್ರೀಯ ಯುವ ಸಂವತ್ಸರಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಸಿಕ್ಕಿದೆ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಹೇಳುವುದಾದರೆ ಇದಕ್ಕಾಗಿ ನಮಗೆ ಏನೇನೂ ಸಿಕ್ಕಿಲ್ಲ. ಅಂತರ ರಾಷ್ಟ್ರೀಯ ಯುವ ಸಂವತ್ಸರಕ್ಕೆ ಸಂಬಂಧಪಟ್ಟಂತೆ ನಾನು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇದರ ಬಗ್ಗೆ

ಪ್ರಸ್ತಾಪಿಸಿ ನಮಗಾಗಿರತಕ್ಕ ಅನ್ಯಾಯವನ್ನು ತಿಳಿಸಿದಾಗ ಅವರು ಅದನ್ನು ಸರಿಪಡಿಸುವುದಾಗಿ ಆಶ್ವಾಸನೆ ನೀಡಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ಯುವಜನ ಸೇವಾ ಇಲಾಖೆಯ ಮಂತ್ರಿಗಳಾಗಿದ್ದಾರೆ. ಅಂತರ ರಾಜ್ಯ ಯುವ ಸಂವತ್ಸರಕ್ಕೆ ಕೇಂದ್ರ ಸರ್ಕಾರದವರು ಯಾವುದೇ ಸಹಾಯ ಮಾಡಿಲ್ಲ. ಇದಕ್ಕಾಗಿ ಭಾರತ ಸರ್ಕಾರ ಯಾವ ಚಟುವಟಿಕೆಗಳನ್ನು ಕೂಡ ಮಾಡಿಲ್ಲ. ಅವರು ಈ ದಿಶೆಯಲ್ಲಿ ಇಡೀ ಕಾರ್ಯಕ್ರಮಕ್ಕೆ ೫೦ ಲಕ್ಷ ರೂಪಾಯಿಗಳನ್ನು ನಿಯೋಜಿಸಿದ್ದಾರೆ. ಆದರೆ ನಮ್ಮ ಸರ್ಕಾರ ಇಷ್ಟಕ್ಕೆ ಹನ್ನೆರಡು ಲಕ್ಷ ರೂಪಾಯಿ ಖರ್ಚು ಮಾಡಿ ಮುಂದೆ ಐವತ್ತು ಲಕ್ಷ ರೂಪಾಯಿಗಳನ್ನು ನಿಯೋಜಿಸುವ ಯೋಚನೆ ಮಾಡಿದ್ದೇವೆ. ಈಗ ಕೇಂದ್ರ ಸರ್ಕಾರದಿಂದ ನಮಗೆ ಅಂತರ ರಾಷ್ಟ್ರೀಯ ಯುವ ಸಂವತ್ಸರಕ್ಕೆ ಸಂಬಂಧಪಟ್ಟಂತೆ ಬರತಕ್ಕ ಹಣದಲ್ಲಿ ಏನು ತಾರತಮ್ಯವಾಗಿದೆ ಅದನ್ನು ಸರಿಪಡಿಸುತ್ತೇನೆಂದು ಮಾನ್ಯ ಪ್ರಧಾನ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈಗ ನಾವು ಆ ಹಣವನ್ನು ನಿರೀಕ್ಷಣೆ ಮಾಡುತ್ತಿದ್ದೇವೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದನ್ನು ನಾನು ಗಮನಿಸಿದ್ದೇನೆ. ಅವರು ಕೊಟ್ಟಂತಹ ಎಲ್ಲ ಉತ್ತರಗಳನ್ನು ನೋಡಿದರೆ ನಾನು ಅಂದುಕೊಂಡಂತೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯುವಜನರ ಬಗ್ಗೆ ಇವರು ಚಿಂತನೆಯನ್ನೇ ಮಾಡಿಲ್ಲ. ಹಳ್ಳಿಗಳಲ್ಲಿ ಇರತಕ್ಕ ಯುವಕ ಮಂಡಲದವರನ್ನು ಮೈಸೂರು, ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಿಗೆ ಕಳುಹಿಸಿ ಅಲ್ಲಿ ತಮ್ಮ ಕಲಾಪ್ರದರ್ಶನವನ್ನು ಮಾಡಲು ಅವಕಾಶ ಮಾಡಿಕೊಡಬೇಕು. ಏಕೆಂದರೆ ಇವತ್ತಿನ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಕೂಡ ನೂರಾರು ಯುವಕ ಸಂಘಗಳು ಇವೆ. ಗ್ರಾಮಾಂತರ ಪ್ರದೇಶದಲ್ಲಿ ಯುವಕ ಮಿತ್ರರು ಮಾಡಿಕೊಂಡಿರುತ್ತಾರೆ. ಆದರೆ ಅವರಿಗೆ ಯಾವುದೇ ರೀತಿಯ ಪ್ರೋತ್ಸಾಹ ಇಲ್ಲ. ತಾಲ್ಲೂಕು ಮಟ್ಟದಲ್ಲಿರತಕ್ಕ ಯುವಜನ ಸೇವಾ ಅಧಿಕಾರಿಗಳು ಎಲ್ಲಿದ್ದಾರೆ, ಅವರು ಯಾರು ಎಂಬುದು ಮಂತ್ರಿಗಳಿಗೂ ಸಹಾ ಗೊತ್ತಿರುವುದಿಲ್ಲ. ಅಂದ ಮೇಲೆ ಈ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಯುವಕರಿಗೆ ಹೇಗೆ ಗೊತ್ತಾಗಬೇಕು ? ಯುವಕ ಸಂಘಗಳಿಗೆ ಸರ್ಕಾರದ ವತಿಯಿಂದ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಆ ಸಂಘಗಳನ್ನು ನೊಂದಣಿ ಮಾಡಿಕೊಂಡ ಸಂದರ್ಭದಲ್ಲಿ ಅವರಿಗೆ ಹಾರ್ಮೋನಿಯಂ, ತಬಲ, ಕೊಳಲು ಮುಂತಾದವನ್ನು ಕೊಟ್ಟು ಅವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಅವರಿಗೆ ಆರ್ಥಿಕ ನೆರವನ್ನು ನೀಡಿ ಅವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ತಾವು ಸಹಾಯ ಮಾಡಬೇಕು. ಮೊದಲು ಹಳ್ಳಿಗಳು ಹೆಚ್ಚಿನ ರೀತಿಯಲ್ಲಿ ಉದ್ಧಾರವಾಗಬೇಕೆಂದು ಯೋಚನೆ ಮಾಡುತ್ತೇವೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ಯುವಕರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

೬–೩೦ ಪಿ.ಎಂ.

ಮತ್ತೆ ಮೈಸೂರು ನಗರ ದಸರಾಮಹೋತ್ಸವವನ್ನು ತಾವು ಎಷ್ಟರಮಟ್ಟಿಗೆ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಗ್ರಾಮೀಣ ಯುವಕ ಯುವತಿಯರ ಮಂಡಳಿಯ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಕೆಲಸ ಮಾಡಲಿಕ್ಕೆ ಆಗಲಿಲ್ಲ. ಹೆಚ್ಚಿನ ಹಣವನ್ನು ಕೊಡಲಿಕ್ಕೆ ಆಗಲಿಲ್ಲ. ಆದಷ್ಟು ಉತ್ತೇಜನ ಕೊಡುವುದಾಗಿ ಹೇಳಬಯಸುತ್ತೇನೆ. ಎರಡನೆಯದಾಗಿ ಯುವಕ ಮಂಡಲಿಗಳಿಗೆ ಪ್ರತ್ಯೇಕವಾಗಿ ಕಟ್ಟಡಗಳನ್ನು ಕೇಳಿರುತ್ತಾರೆ. ಎನ್‌ಆರ್‌ಇಪಿ ಕಾರ್ಯಕ್ರಮದಲ್ಲಿ ಕಟ್ಟಡಗಳ ನಿರ್ಮಾಣಕ್ಕಾಗಿ ಹಣವನ್ನು ಕೊಡುತ್ತಿರುತ್ತೇವೆ. ನಾವು ಸಹ ಹಣವನ್ನು ಕೊಡುತ್ತಿದ್ದೇವೆ. ಕರ್ನಾಟಕದಲ್ಲಿ ಯುವಜನ ಮಂಡಲಿಗೆ ಬೇರೆ ಬೇರೆ ರೀತಿಯಲ್ಲಿ ಹಣವನ್ನು ಕೊಡಲು ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಕೆ. ಎಂ. ಮುನಿಯಪ್ಪ.—ನಮ್ಮ ಸರ್ಕಾರದವರು ಪತ್ರಿಕಾಕರ್ತರಿಗೆ ೨೦ ವರ್ಷ ಸೇವೆ ಮಾಡಿದ್ದು ೫೨ ವರ್ಷ ವಯಸ್ಸಾಗಿದ್ದರೆ ಅಂಥವರಿಗೆ ಮಾಶಾಸನ ಕೊಡತಕ್ಕಂಥ ಪದ್ಧತಿ ಇರುತ್ತದೆ. ನನಗೂ ಕೂಡ ಮಾಶಾಸನ ಬರುತ್ತಿದೆ. ಕೆಲವು ಸಂದರ್ಭಗಳಲ್ಲಿ ಪತ್ರಿಕಾಕರ್ತರಿಗೆ ಮಾಸಾಶನ ಪಡೆಯಲು ಸೇವಾ ಸರ್ಟಿಫಿಕೇಟ್ ಕೇಳಿದರೆ ಸಂಪಾದಕರು ಕೊಡುವುದಿಲ್ಲ. ಆದ್ದರಿಂದ ಸೇವಾ

ಸರ್ಟಿಫಿಕೇಟ್ ಇಲ್ಲದಿದ್ದರೂ ಯಾರು ೨೦-೩೦ ವರ್ಷ ಸರ್ವೀಸ್ ಮಾಡಿರುತ್ತಾರೆ ಅವರಿಗೆ ಮಾಶಾಸನ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಪತ್ರಿಕೆಗಳಿಗೆ ಮಾನ್ಯತೆಯನ್ನು ಕೊಡುವಾಗ ಗ್ರಾಮಾಂತರ ಪ್ರದೇಶದ ಪತ್ರಿಕೆಗಳಿಗೆ ಅಕ್ರಿಡೇಷನ್ ಕೊಡುತ್ತಿಲ್ಲ, ಗ್ರಾಮಾಂತರ ಪತ್ರಿಕೆಗಳಿಗೂ ಅಕ್ರಿಡೇಷನ್ ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಮೂರನೆಯದಾಗಿ ಬೆಂಗಳೂರು ನಗರದಲ್ಲಿ ಒಂದು ಪತ್ರಿಕಾಕರ್ತರ ಭವನವನ್ನು ಕಟ್ಟಲು ನಿವೇಶನವನ್ನು ಕೊಡಬೇಕೆಂದು ಸುಮಾರು ೨೦ ವರ್ಷಗಳಿಂದಲೂ ಕೇಳುತ್ತಲೇ ಇದ್ದೇವೆ. ಈ ಬಗ್ಗೆ ಮಾನ್ಯ ವಾರ್ತಾ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರತಿಯೊಂದು ಸಭೆಯಲ್ಲೂ ಈ ಮಾತನ್ನು ಹೇಳುತ್ತಲೇ ಬಂದಿರುತ್ತಾರೆ. ಮಾಶಾಸನವನ್ನು ಕೊಡುವುದರಲ್ಲಿಯಾಗಲಿ, ಗೌರವ ಧನವನ್ನು ಕೊಡುವುದರಲ್ಲಿಯಾಗಲಿ ಕೆಲವಾರು ನಿಯಮಗಳು ಇರಬೇಕೆಂದು ನಿಯಮಾವಳಿಗಳನ್ನು ರೂಪಿಸಲಾಗುತ್ತಿದೆ. ಯಾವ ರೀತಿ ನಿಯಮಾವಳಿಗಳನ್ನು ರೂಪಿಸಬೇಕು ಎಂದು ಹಿರಿಯ ಪತ್ರಿಕಾ ಸದಸ್ಯರಿಗೆ ವಹಿಸಿರುತ್ತೇವೆ. ಅವರು ಯಾವ ರೀತಿ ನಿಯಮಾವಳಿಗಳನ್ನು ರೂಪಿಸುತ್ತಾರೋ ಅದಕ್ಕೆ ಸರಿಯಾಗಿ ವ್ಯವಸ್ಥೆ ಮಾಡಲಾಗುತ್ತದೆ. ಇನ್ನು ಪತ್ರಿಕಾ ಭವನದ ಬಗ್ಗೆ ನಿವೇಶನವನ್ನು ಹುಡುಕುತ್ತಾ ಇದ್ದೇವೆ. ಹಿಂದೆ ನಿವೇಶನವನ್ನು ಕೊಡಲಾಗಿತ್ತು. ಅದು ಸರಿಬರಲಿಲ್ಲವಾದ ಕಾರಣ ಬೇರೆ ಕಡೆ ಕೊಡಲು ಎಲ್ಲಿ ಸಲಹೆ ಮಾಡುತ್ತಾರೋ ಅದನ್ನು ತಿಳಿದು ತಕ್ಷಣ ಪತ್ರಕರ್ತರ ಭವನವನ್ನು ಕಟ್ಟಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಕನ್ನಡ ಸಾಹಿತ್ಯ ಪರಿಷತ್ತಿಗೆ ಹಣವನ್ನು ಸರ್ಕಾರದಿಂದ ಕೊಡತಕ್ಕಂಥದ್ದು ಇರುತ್ತದೆ. ಜನರಲ್ಲಿ ಸಾಹಿತ್ಯ ಪ್ರೇಮ ಮತ್ತು ಜ್ಞಾನವನ್ನು ಬೆಳೆಸುವ ಸಲುವಾಗಿ ಹಿಂದೆ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕುಮಾರವ್ಯಾಸ ಭಾರತವನ್ನು ಪ್ರಿಂಟ್ ಮಾಡಿಸಿ ಬಹಳ ಅಗ್ಗದ ಬೆಲೆಗೆ ಮಾರಾಟ ಮಾಡಿಸಿದ್ದರು. ಈಗ ದೊರೆಯುತ್ತಿಲ್ಲ. ಅದೇ ರೀತಿಯಲ್ಲಿ ಈಗ ಪ್ರಿಂಟ್ ಮಾಡಿಸಿ ಅಗ್ಗದ ಬೆಲೆಗೆ ಮಾರಾಟ ಮಾಡಿದರೆ ಸಾಹಿತ್ಯ ಪ್ರೇಮ ಮತ್ತು ಸಾಹಿತ್ಯ ಜ್ಞಾನ ಬೆಳೆಸಲು ಸಹಾಯವಾಗುತ್ತದೆ. ಮತ್ತೆ ನಂದಳಿಕೆ ಮುದ್ದಣ್ಣ ಕವಿ ಕಲಾಭವನಗಳ ನಿರ್ಮಾಣ ಬಗ್ಗೆ ಮತ್ತು ಗೋವಿಂದ 'ಪೈ ಸ್ಮಾರಕ' ಭವನಗಳ ನಿರ್ಮಾಣದ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಕುಮಾರವ್ಯಾಸ 'ಭಾರತ'ವನ್ನು ಅಗ್ಗದ ಬೆಲೆಗೆ ಕೊಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪ್ರಿಂಟ್ ಮಾಡಿಸುತ್ತಿದ್ದೇವೆ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ದೊರಕುವಂಥ ವ್ಯವಸ್ಥೆ ಮಾಡುತ್ತೇವೆ. ನಂದಳಿಕೆ ಮುದ್ದಣ ಸ್ಮಾರಕ ಭವನವನ್ನು ಕಟ್ಟತಕ್ಕಂಥ ವಿಚಾರದಲ್ಲಿ ನಂದಳಿಕೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಮುಖಾಂತರ ಕಟ್ಟಡವನ್ನು ಕಟ್ಟಬೇಕೆಂದು ಇತ್ತು. ಮತ್ತೆ ಈ ಕ್ಷೇತ್ರವನ್ನು ಬದಲಾಯಿಸಬೇಕೆಂಬ ಸಲಹೆಯು ಇರುತ್ತದೆ. ಇದಕ್ಕೆ ೧೫-೨೦ ಲಕ್ಷ ರೂಪಾಯಿಗಳು ತಗಲಬಹುದು. ಅಷ್ಟು ಹಣವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ, ಆದಕ್ಕೋಸ್ಕರವಾಗಿ ಕನ್ನಡ ಸಂಸ್ಕೃತಿ ಇಲಾಖೆಯವರು ಎರಡು ಲಕ್ಷ ರೂಪಾಯಿ ಮತ್ತು ಪ್ರವಾಸೋದ್ಯಮ ಇಲಾಖೆಯವರು ಎರಡು ಲಕ್ಷ ರೂಪಾಯಿ ಹೀಗೆ ಒಟ್ಟು ನಾಲ್ಕು ಲಕ್ಷ ರೂಪಾಯಿಗಳ ಸಹಾಯದಿಂದ ಈ ವರ್ಷ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತೇವೆ.

ಶ್ರೀ ಕೆ.ಎ. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಹಾ ಮಹಿಮ ಭಕ್ತಿ ಭಂಡಾರಿ ಬಸವಣ್ಣನವರು ಹುಟ್ಟಿರತಕ್ಕಂಥ ಬಸವನಬಾಗೇವಾಡಿಯಲ್ಲಿ ಅಲ್ಲಿರತಕ್ಕಂಥ ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾನ್ಯ ಸಚಿವರು ಗಮನಿಸಬೇಕು. ಅಲ್ಲಿ ದೊರೆತಿರುವ ತಾಳೆಗರಿ ಗ್ರಂಥಗಳನ್ನು ಕಾಯ್ದಿಡುವ ಬಗ್ಗೆ ಮಾನ್ಯ ಸಚಿವರು ವಿಚಾರ ಮಾಡಬೇಕು. ಇದನ್ನು ಒಂದು ಮಿನಿಜಿಲ್ಲೆಯನ್ನಾಗಿ ಮಾಡಬೇಕು. ಇಲ್ಲಿಗೆ ಬರತಕ್ಕಂಥ ಪ್ರವಾಸಿಗರಿಗೆ ಇಳಿದುಕೊಳ್ಳಲು ಒಂದು ಪ್ರವಾಸಿ ಕೇಂದ್ರವನ್ನು ಒಂದು ಗೆಸ್ಟ್ ಹೌಸನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ಜೀವರಾಜ ಆಳ್ವ.—ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಮತ್ತು ಪ್ರವಾಸಿ ಮಂದಿರವನ್ನು ಕಟ್ಟಲು ಈ ವರ್ಷ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.--ಮಾನ್ಯ ಸಭಾಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಯುವ ಜನರಿಗೆ ಕೊಡತಕ್ಕಂಥ ಸೌಲಭ್ಯಗಳ ಬಗ್ಗೆ ಮಾನ್ಯ ಸಚಿವರು ಹೇಳಿದರು. ಅದೇ ರೀತಿಯಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ತಾಲ್ಲೂಕ್ ಕೇಂದ್ರಗಳಲ್ಲಿರತಕ್ಕಂಥ ಆಟದ ಮೈದಾನಗಳ ಮೈನ್‌ಟನೆನ್ಸ್ ಮಾಡತಕ್ಕಂಥ ಜವಾಬ್ದಾರಿಯನ್ನು ಯಾರಿಗೆ ಕೊಟ್ಟಿದ್ದೀರಿ ? ಬಹುಶಃ ಯಾರಿಗೂ ಕೊಡದೆ ಇದ್ದರೆ ಅದನ್ನು ತಾವೇ ವಹಿಸಿಕೊಳ್ಳುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಜೀವರಾಜ ಆಳ್ವ.—ತಾಲ್ಲೂಕು ಕೇಂದ್ರಗಳಲ್ಲಿರತಕ್ಕಂಥ ಪ್ಲೇಗ್ರೌಂಡ್‌ಗಳನ್ನು ಯುವಜನ ಇಲಾಖೆಯ ಪರಿಮಿತಿಯಲ್ಲಿ ಬಂದಿದ್ದರೆ ಅದನ್ನು ನಾವೇ ಮೇನ್‌ಟೈನ್ ಮಾಡುತ್ತೇವೆ. ಕಾಲೇಜ್ ಮತ್ತು ಜಿಲ್ಲಾ ಮುನಿಸಿಪಾಲಿಟಿಗಳ ಪರಿಮಿತಿಗೆ ಒಳಪಟ್ಟಿದ್ದರೆ ಅವರೇ ಅದರ ಉಸ್ತುವಾರಿ ನೋಡಿಕೊಳ್ಳುತ್ತಾರೆ, ಜಿಲ್ಲಾ ಕೇಂದ್ರಗಳಲ್ಲಿರತಕ್ಕಂಥದ್ದರ ಬಗ್ಗೆ ಸ್ವಲ್ಪ ಡಿಸ್‌ಪ್ಯೂಟ್ ಇದೆ. ಒಂದು ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿರತಕ್ಕಂಥ ಪ್ಲೇಗ್ರೌಂಡ್‌ಗಳನ್ನು ಯುವಜನ ಇಲಾಖೆಯೇ ನಡೆಸಿಕೊಂಡು ಹೋಗುತ್ತದೆ.

ಶ್ರೀ ರಮೇಶ್ ಕುಮಾರ್.—ಕೆಲವು ದಿವಸಗಳ ಹಿಂದೆ ಮಾನ್ಯ ಜೆ.ಎಚ್. ಪಟೇಲ್‌ರವರು ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದರು. ಚಿತ್ರೋದ್ಯಮದ ಮೂಲಕ ವಾತಾವರಣವೇ ಹಾಳಾಗುತ್ತಿದೆ. ನಮ್ಮ ರಾಜ್ಯದಲ್ಲಿ ಅಲ್ಲ ಇಡೀ ರಾಷ್ಟ್ರದಲ್ಲಿ ಕಪ್ಪು ಹಣ ತೊಡಗಿಸಲಿಕ್ಕೆ ಸುಲಭ ಮಾರ್ಗವಾಗಿದೆ. ಆದುದರಿಂದ ಹತ್ತು ವರ್ಷಗಳ ಕಾಲ ಈ ಚಿತ್ರೋದ್ಯಮವನ್ನು ನಿಲ್ಲಿಸಬೇಕು. ಇದರಿಂದ ಸಮಾಜ ಪ್ರಗತಿಯಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಮಾನ್ಯ ಜೀವರಾಜ ಆಳ್ವರವರ ಅಭಿಪ್ರಾಯವೇನೆಂದು ಕೇಳುತ್ತೇನೆ.

ಶ್ರೀ. ಜೀವರಾಜ ಆಳ್ವ.—ಅದು ಮಾನ್ಯ ಜೆ.ಎಚ್. ಪಟೇಲ್‌ರವರ ಸ್ವಂತ ಅಭಿಪ್ರಾಯ.

SRI MOHAMED LIAQUIDDN BURANUDDIN.—Mr. Speaker, Sir. Bidar is a historical town and there is a request to the Government from so many years for including it in the Tourist Map and to-day Hon'ble Minister has not said anything about it. As you know there are national monuments of national importance has been situated at various places in Bidar.

In Bidar, there are so many monuments of national importance. Really speaking, it is called Tashkant of India but it is very regrettable to note that this important City which is having historical background has not been included in the Tourist list, I therefore request the Hon'ble Minister to see that it is included in the tourist list immediately. There are so many places of piligrimages of great importance there in Bidar. Visitors from all over India come to Bidar to see the tombs and other historical monuments. Therefore, it should be developed as a tourist centre.

Secondly, Bidar is the farthest place from Bagalore. There was a proposal for including it in the air map, but so far nothing has been done. This demand is pending for the last 15 years. I therefore request the Government to see that air link from Bidar to Bangalore and Bidar to Gulbarga is introduced early.

Lastly, this is an International Year of Youth but in our budget. no programme has been chalked out for the promotion of sports and physical education on a large scale. Unless infrastructure is provided

for promotion of sports, better results cannot be expected. So, I request the Hon'ble Minister to see that infrastructural facilities are provided. Stadium for indoor games, and Swimming pool etc., should be provided at village and town levels so that mass scale promotion of physical health and sports could be achieved. Will the Government introduce a legislation during this International Year of Youths to reserve open space for play rounds, stadiums etc., in each and every villages?

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಹೇಳಿದ ಅಂಶಗಳನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ. As regards legislation to protect playgrounds, it is under active consideration. I think there is already an ordinance.

ಶ್ರೀ ಐ. ಬಿ. ಶಂಕರ್.—ಶ್ರೀ ಹರ್ಡಿಕರ್‌ರವರು ಭಾರತ ಸೇವಾ ದಳಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಹಿಂದೆ ಚಿಕ್ಕಮಗಳೂರಿನಲ್ಲಿ ರಘುಪತಿಯವರು ಬಂದಿದ್ದಾಗ ಬಾಲಕರ ಸೇವಾದಳದ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇನೆಂದು ಭರವಸೆ ಕೊಟ್ಟಿದ್ದರು. ಆದರ ಬಗ್ಗೆ ಏನೂ ಆಗಿಲ್ಲ,

ಶ್ರೀ ಜೀವರಾಜ್ ಆಳ್ವ.—ಹೊಸ ಭರವಸೆಗಳನ್ನು ನಾನು ಕೊಟ್ಟಿಲ್ಲ. ಇನ್ನೂ ಹಳೆಯ ಮಂತ್ರಿ ಗಳ ಭರವಸೆಗಳನ್ನೇ ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದ್ದೇನೆ. ಹರ್ಡಿಕರ್‌ರವರು ಭಾರತ ಸೇವಾ ದಳಕ್ಕೆ ಹೆಚ್ಚಿನ ಸೇವೆ ಮಾಡಿದ್ದಾರೆ. ರಾಷ್ಟ್ರದಐಕ್ಯತೆ ಬಗ್ಗೆ ಅವರ ಕೊಡುಗೆ ಅಪಾರ. ಇಂಥವರ ಸಂಸ್ಥೆಗೆ ಹಣ ಕೊಡುವುದರಲ್ಲಿ ಏನೂ ಕಷ್ಟವಿಲ್ಲ. ಆದರೂ ಏನೇನು ಮಾಡಬೇಕು ಎಂದು ಯೋಚನೆ ಮಾಡುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ.—ತಾಲ್ಲೂಕು ಮಟ್ಟದಲ್ಲಿ ಯುವಜನರನ್ನು ಪ್ರೋತ್ಸಾಹಿಸಲು ಪ್ರತಿ ತಾಲ್ಲೂಕಿನಲ್ಲೂ ಒಂದು ಕ್ರೀಡಾಂಗಣವನ್ನು ಕಟ್ಟಿಸುವುದಕ್ಕೆ ಯೋಚನೆ ಮಾಡಿದ್ದೀರಾ? ಬೆಂಗಳೂರಿನಲ್ಲಿ ಚಿತ್ರಮಂದಿರ ಕೆಡವಿ ಮಳಿಗೆ ಕಟ್ಟುತ್ತಿರುವುದರಿಂದ ಚಿತ್ರೋದ್ಯಮಕ್ಕೆ ಧಕ್ಕೆ ಉಂಟಾಗುತ್ತಿದೆ. ಮಳಿಗೆಗಳ ಕಟ್ಟಡ ಸಂಕೀರ್ಣದಲ್ಲಿ ಚಿತ್ರಮಂದಿರವೊಂದನ್ನು ಕಟ್ಟುವುದಕ್ಕೆ ಏನಾದರೂ ನಿಯಮ ಹಾಕುತ್ತೀರಾ?

ನಮ್ಮ ತಾಲ್ಲೂಕಿನಲ್ಲಿ ಪ್ರವಾಸೋದ್ಯಮಕ್ಕೆ ಸೇರಲು ಅರ್ಹವಾಗಿರುವ ಒಂದೆರಡು ಕ್ಷೇತ್ರಗಳಿವೆ. ಒಂದು ದೊಡ್ಡ ಆಲದ ಮರ. ಇನ್ನೊಂದು ಸಾವನದುರ್ಗ ಬಹಳ ವರ್ಷಗಳಿಂದ ಇವುಗಳ ಅಭಿವೃದ್ಧಿ ಗಾಗಿ ಕೇಳಿಕೊಳ್ಳುತ್ತಿದ್ದರೂ ಇನ್ನೂ ಏನೂ ಕ್ರಮ ಕೈಗೊಂಡಿಲ್ಲ. ತಾವಾದರೂ ಈ ಬಗ್ಗೆ ಏನಾದರೂ ಮಾಡುತ್ತೀರಾ?

ಶ್ರೀ ಜೀವರಾಜ್ ಆಳ್ವ.—ಚಲನಚಿತ್ರ ಮಂದಿರ ಕೆಡುವುದಾದರೆ ಅದೇ ಜಾಗದಲ್ಲಿ ಇನ್ನೊಂದು ಚಿತ್ರಮಂದಿರ ಕಟ್ಟಬೇಕೆಂದು ಬೈಂಡಿಂಗ್ ರೂಲ್ ಹಾಕುತ್ತೇವೆ. ಇದು ಇನ್ನು ಮುಂದೆ ಅನ್ವಯಿಸು ತ್ತದೆ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಂಬೂರಿಯನ್ನು ನಡೆಸುತ್ತೇವೆಂದು ಹೇಳಿದ್ದಾರೆ. ಈ ಜಂಬೂರಿ ನಡೆಸಲು ೨೦ ಲಕ್ಷ ಖರ್ಚು ಆಗುತ್ತದೆ. ಕೇಂದ್ರ ಸರ್ಕಾರ ೫ ಲಕ್ಷ ಕೊಡುಗೆ ನೀಡಿದೆ. ಈಗಾಗಲೇ ರಾಜ್ಯ ೫ ಲಕ್ಷ ಇದಕ್ಕಾಗಿ ನೀಡಿದ್ದು, ಇದು ಅತ್ಯಲ್ಪವಾಗಿರುವುದರಿಂದ ಇದನ್ನು ಜಾಸ್ತಿ ಮಾಡಿ ಜಂಬೂರಿ ನಡೆಸಲು ಕ್ರಮ ಕೈಗೊಳ್ಳುತ್ತೀರಾ? ಮತ್ತು ಯುವಜನ ಸೇವಾ ಮಂಡಲಿ ಅಧ್ಯಕ್ಷರನ್ನಾಗಿ ಬೇರೆ ಅಧಿಕಾರಿಗಳನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಎರಡನೆಯದಾಗಿ ಹಂಪಿಯ ಪುನರುತ್ಥಾನದ ಬಗ್ಗೆ ಮಾತನಾಡಿದ್ದಾರೆ. ಕಳೆದ ವರ್ಷ ನಿಮ್ಮ ಸರ್ಕಾರ ಎಂ. ವಿ. ಕಾಮತರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿತ್ತು, ಅದು ಇನ್ನೂ ಅಸ್ತಿತ್ವ ದಲ್ಲಿದೆಯೇ? ಅದರ ವರದಿ ಏನಾಯಿತು.? ಇದರ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ?

ಶ್ರೀ ಜೀವರಾಜ್ ಆಳ್ವ.—ಬಹಳ ಸಂತೋಷ. ಶ್ರೀ ರಾಣೆಯವರು ಸ್ಕೌಟ್ಸ್ ಜಂಬೂರಿ ಬಗ್ಗೆ ಮಾತನಾಡಿದ್ದಾರೆ. ಇದು ಗುಜರಾತ್‌ನಲ್ಲಿ ನಡೆಯಬೇಕಾಗಿತ್ತು. ಅಲ್ಲಿ ಪರಿಸ್ಥಿತಿ ಶಾಂತವಾಗಿಲ್ಲದಿರುವುದ

ರಿಂದ ಕರ್ನಾಟಕದಲ್ಲಿ ನಡೆಸಬೇಕಾಗಿದೆ. ಇದು ಕೇಂದ್ರ ಸರ್ಕಾರದ ಇಂಗಿತ. ಅದಕ್ಕಾಗಿ ಲೋಕಲ್ ಕಮಿಟಿ ಮಾಡಿದ್ದೇವೆ. ೫ ಲಕ್ಷ ಅನುದಾನವನ್ನು ಕೊಡಲು ಒಪ್ಪಿದ್ದೇವೆ. ಉಳಿದದ್ದನ್ನೆಲ್ಲ ಸೇರಿ ವಿಚಾರ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ಜಗಳವಾಗಿ ಗಲಾಟೆ ಆಗಿದೆ. ಜನರಲ್ ಬಾಡಿ ಮೀಟಿಂಗ್ ಕರೆಯದೇ ಇರುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಜೀವರಾಜ ಆಳ್ವ.—ಸ್ಟೇಟ್ ಸ್ಪೋರ್ಟ್ಸ್ ರೀಕಾನ್‌ಸ್ಟಿಟ್ಯೂಟ್ ಮಾಡಿದ ಮೇಲೆ ಈಗ ಇವತ್ತೇ ಆ ಮೀಟಿಂಗ್ ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ವರ್ಷದ ಮೇಲೆ ನಡೆಯುತ್ತಿದೆ.

ಶ್ರೀ ಜೀವರಾಜ ಆಳ್ವ.—ಶ್ರೀ ರಾಮ್‌ದೇವ್‌ರವರು ರಾಜೀನಾಮೆ ಕೊಟ್ಟ ಮೇಲೆ ಕೌನ್ಸಿಲ್ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೆಲವು ಸ್ಕಾಲರ್‌ಷಿಪ್‌ಗಳನ್ನು ಹುಡುಗರಿಂದ ರುಜು ಹಾಕಿಸಿಕೊಂಡು ಹಣವನ್ನು ತಿಂದುಹಾಕುತ್ತಿದ್ದಾರೆ. ಅದು ಯಾವುದು ಎಂಬುದನ್ನು ತಿಳಿದುಕೊಂಡು ಹೇಳಿ.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ. ೩೧-೩-೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೭, ೧೧, ೧೨ಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಅಧ್ಯಕ್ಷರ ಅಪ್ಪಣೆಯಂತೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೨೭—ವಾರ್ತಾ ಮತ್ತು ಪ್ರಚಾರ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೮೧,೩೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೬,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧೧—ಯುವಜನ ಸೇವೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೭ ೪೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧೨—ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೯೯,೬೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳಿಗೂ, ವಿರೋಧ ಪಕ್ಷದ ನಾಯಕರಿಗೂ ಹಾಗೂ ತಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಭೆಯು ಈಗ ಎದ್ದು ನಾಳೆ ಬೆಳಿಗ್ಗೆ ೯ಕ್ಕೆ ಸೇರುತ್ತದೆ.

(ಸಭೆಯು ೬-೫೦ಕ್ಕೆ ಮುಕ್ತಾಯವಾಗಿ ನಾಳೆ ಅಂದರೆ ೧೦-೯-೮೫ ರಂದು ಬೆಳಿಗ್ಗೆ ೯ಕ್ಕೆ ಸೇರಲು ನಿಶ್ಚಯಿಸಲಾಯಿತು.)